
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 25, 2013 ಪುಟ 20 ರೂ. 14/-

ಸಂದರ್ಶನ ಡಾ.ವಸು

ಹೊಸ ಅಂಕಣ ಬೂಸಿಬಸ್ಯ ಮೋದಿ



ಬಾಲಣ್ಣನ ಮಗಳಿಗೆ ಬೆದರಿಕೆ



ವಿಷ್ಣು ಸಮಾಧಿ ಜೇಗುದಿ



ಮೈಸೂರು ಅರಮನೆಗೆ ಬೋಗಸ್ ಬಂಗಾರ

ಮಂಡ್ಯ ನಗರಸಭೆ ಮುಂಡಾಯಿಸಲು ಸಿದ್ದರಾಜು ರೆಡಿ



ಯೋಗೇಶ್ ಮಾಸ್ಟರ್ ಹೊಸ ಅಂಕಣ ಪುರಾಣದ ಹೂರಣ



ಅದ್ಭುತ ಸಿನಿಮಾ ಲೂಸಿಯಾ



ಶಂಕರ್ ಬಿದರಿ ಸೈಕಲ್ ಪಂಕ್ಚರ್



• ಪಾರ್ವತೀಶ
bparvateesha@gmail.com
ಸಂಪಾದಕ

ಬಿಡಿ ಚಿತ್ರಗಳು

‘ಬ್ರಾಹ್ಮಣ್ಯ’ದ ಬೇರುಗಳನ್ನು ಕಿತ್ತೆಸೆಯಬೇಕಾದ ಅಗ

ಬ್ರಾಹ್ಮಣಶಾಹಿ ಸಾಮಾಜಿಕ ವ್ಯವಸ್ಥೆಯ ವಿಸ್ತರಣೆಗೆ ತಡೆಯಾಗಿ ನಿಂತು ಪ್ರತಿರೋಧಿಸಿದ ಗಣಪತಿ ಕುರಿತಾದ ಚಾರಿತ್ರಿಕ ವಾಸ್ತವಾಂಶಗಳ ‘ಧುಂಧಿ’ ಪುಸ್ತಕದ ವಿರುದ್ಧ ಗದ್ದಲವೆಬ್ಬಿಸಿದ ಪುರೋಹಿತಶಾಹಿಗಳಿಂದಾಗಿ ಸದ್ಯಕ್ಕೆ ಪುಸ್ತಕ ಮಾರಲಾಗದಂತೆ ಆಗಿದೆ.

‘ಲಂಕೇಶ್’ ಇದಕ್ಕೆ ಇನ್ನೊಂದು ರೀತಿಯಲ್ಲಿ ಸವಾಲೊಡ್ಡಲು ಸಿದ್ಧವಾಗಿದೆ.

ಧುಂಧಿ ಕೃತಿಯ ಲೇಖಕ ಅದೇ ಯೋಗೇಶ್ ಮಾಸ್ಟರ್ ಮೂಲಕ ‘ಪುರಾಣದ ಹೂರಣ’ ವೆಂಬ ಹೊಸ ಅಂಕಣ ಆರಂಭಿಸುವ ಮೂಲಕ ಪುರಾಣ ಕತೆಗಳಲ್ಲಿನ ಸತ್ಯ-ಮಿಥ್ಯೆಗಳ ವಾಸ್ತವಾಂಶಗಳನ್ನು ಹಲವು ವಾರ ನಿರೂಪಿಸಲಿದ್ದೇವೆ.

ಇಲ್ಲಿ ನಾವು ಗುರಿಯಾಗಿಸಿಕೊಂಡಿರುವುದು ‘ಬ್ರಾಹ್ಮಣ್ಯ’ ವೆಂಬ ಇಂಡಿಯಾದ ಬಹುದೊಡ್ಡ ಸಾಮಾಜಿಕ ಪಿಡುಗನ್ನೇ ವಿನಃ ಜನಸಾಮಾನ್ಯರ ಸರಳ ಧಾರ್ಮಿಕ ನಂಬಿಕೆಗಳನ್ನಲ್ಲ, ಜನರ ಭಾವನೆಗಳನ್ನು ನೋಯಿಸುವ ಉದ್ದೇಶದಿಂದಲೂ ಅಲ್ಲ.

ಹಾಗೆ ನೋಡಿದರೆ ದೇವರು, ಧರ್ಮ, ಪುರಾಣಗಳ ಕುರಿತಂತೆ ಚರ್ಚಿಸುವ, ವಿಶ್ಲೇಷಿಸುವ, ಪ್ರಶ್ನಿಸುವ ಅನೇಕ ಪುಸ್ತಗಳು ಕನ್ನಡದಲ್ಲಿವೆ.

ಈಗ್ಗೆ ನಾಲ್ಕು ದಶಕಗಳ ಹಿಂದೆಯೇ ವಸುದೇವ ಭೂಪಾಲಂ ‘ದೇವರು ಸತ್ತ’ ಎಂಬ ಪುಸ್ತಕ ಬರೆದು ಪ್ರಕಟಿಸಿದ್ದರು. ಆಗಲೂ ಅದೊಂದು ದೊಡ್ಡ ವಿವಾದವಾಗಿತ್ತು, ಶಿವರಾಮ ಕಾರಂತರ ‘ಬಾಳ್ವೆಯೇ ಬೆಳಕು’ ಕೃತಿ ದೇವರ ಅಸ್ತಿತ್ವವನ್ನು ತರ್ಕಿಸುವ ಅಪಾರ ಒಳನೋಟಗಳಿದ್ದ ಪುಸ್ತಕವಾಗಿ ಓದುಗರ ಮೆಚ್ಚುಗೆ ಗಳಿಸಿತ್ತು. ಉತ್ತರ ಕರ್ನಾಟಕದ ಕಕ್ಕಯ್ಯ ಪೋಳ ಎಂಬ ಪ್ರಖರ ವಿಚಾರವಾದಿಯೊಬ್ಬರು ‘ದೇವರು’ ಕುರಿತಂತೆ ದಿಟ್ಟ ನಿಲುವುಗಳ ಬರವಣಿಗೆ ಮಾಡಿದ್ದರು. ಇನ್ನು ಎ.ಎನ್.ಮೂರ್ತಿರಾಯರ ‘ದೇವರು’ ಬಗ್ಗೆ ಬಹುತೇಕ ನಿಮಗೆಲ್ಲಾ ಗೊತ್ತೇ ಇರುತ್ತದೆ.

ಇಂಡಿಯಾದ ಮನುಷ್ಯ ಸಮಾಜದ ವಿಕಾಸದ ವಿವಿಧ ಹಂತಗಳಲ್ಲಿ ಜನಸಮುದಾಯಗಳು ತಾವು ಆರಾಧಿಸುವ ದೇವರು (ಶಕ್ತಿ)ಗಳನ್ನೇ ಬದಲಾಯಿಸಿರುವುದು, ದೇವರ ಸ್ಥಾನಮಾನಗಳೇ ಸ್ಥಿತ್ಯಂತರಗೊಂಡಿರುವುದೆಲ್ಲಾ ಆಗಿಹೋಗಿವೆ. ಅದೇರೀತಿ ಪುರಾಣಗಳು ಚರಿತ್ರೆಯೆಂಬಂತೆ ಬಿಂಬಿತಗೊಳ್ಳುವುದು ಹಾಗೂ ಚಾರಿತ್ರಿಕ ವಾಸ್ತವಾಂಶಗಳು ಪುರಾಣಕತೆಗಳ ಭಾಗವಾಗಿ ಸೇರ್ಪಡೆಗೊಂಡು ರೂಪಾಂತರಗೊಂಡಿರುವುದೆಲ್ಲಾ ಆಗಿವೆ.

ಇಂತಹ ಸ್ಥಿತ್ಯಂತರ, ರೂಪಾಂತರಗಳನ್ನು ಶೋಧಿಸುವ, ತಿಳಿಯುವ ಪ್ರಯತ್ನದಿಂದ ಆಕಾಶವೇನೂ ಕಳಚಿ ಬೀಳುವುದಿಲ್ಲ, ಬ್ರಾಹ್ಮಣ ಪುರೋಹಿತರು ಹೇಳುವ, ನಾವೆಲ್ಲಾ ನಂಬಬೇಕೆಂದು ಬಯಸುವ ಪುರಾಣಕತೆಗಳ ಚೌಕಟ್ಟನ್ನು ಮುರಿಯದಿದ್ದರೆ ನಮಗ್ಯಾರಿಗೂ ನಮ್ಮ ನೆಲದ ಪರಂಪರೆ, ಸಮಾಜ, ಸಂಸ್ಕೃತಿ, ಆಚರಣೆಗಳ ಹಿನ್ನೆಲೆ, ಬೆಳವಣಿಗೆಗಳು ಅರ್ಥವೂ ಆಗುವುದಿಲ್ಲ.

ಬ್ರಾಹ್ಮಣ ಬ್ರಹ್ಮನ ತಲೆಯಿಂದ ಹುಟ್ಟಿದ, ಶೂದ್ರರು ಬ್ರಹ್ಮನ ಪಾದದಿಂದ ಜನಿಸಿದರೆಂಬ ಕಟ್ಟುಕತೆಗಿಂತ ಮನುಷ್ಯ ಜನಾಂಗದ ಉಗಮವು ಮಂಗನನ್ನು ಹೋಲುವ ಚತುಷ್ಪಾದಿ ಪ್ರಾಣಿಯೊಂದರಿಂದ ವಿಕಾಸಗೊಂಡಿತೆಂಬುದು ಸತ್ಯಕ್ಕೆ ಹತ್ತಿರವಾಗಿರುತ್ತದೆ. ಅದರಲ್ಲೂ ಆ ಚತುಷ್ಪಾದಿಯು ಹಲವು ಲಕ್ಷ ವರ್ಷಗಳ ಹಿಂದೆ ತನ್ನನ್ನು ತಾನು ಎರಡು ಕಾಲಿನ ಮೇಲೆ ನಿಲ್ಲುವ, ನಡೆದಾಡುವ ಬದಲಾವಣೆ ಸಾಧಿಸಿದ್ದರಿಂದಾಗಿ ಮನುಷ್ಯನ ಪ್ರಾಣಿ ರೂಪುತಳೆದನೆನ್ನುವುದು



ವೈಜ್ಞಾನಿಕ ತರ್ಕ. **Freeing of hands from walking** ಎಂಬ ಆ ಘಟ್ಟವು ಆಹಾರ ಅನ್ವೇಷಣೆಗೆ, ತನ್ನ ರಕ್ಷಣೆಗೆ, ಯೋಚಿಸುವುದಕ್ಕೆ, ತರ್ಕಕ್ಕೆ ಕಾರಣವಾಗುತ್ತಾ ಅದೇ ಮನುಷ್ಯ ಜನಾಂಗದ ಮೆದುಳಿನ ಬೆಳವಣಿಗೆಗೂ ಕಾರಣವಾಯಿತು. ಅದು ಮುಂದಿನ ಹಂತದಲ್ಲಿ ಆದಿಮ ಸಮಾಜದ ಸ್ವರೂಪ ಪಡೆದು ಬುಡಕಟ್ಟುಗಳಾಗಿ ನಂತರ ಕೃಷಿ ಸಮಾಜವಾಗಿ ಅದು ಊಳಿಗಮಾನ್ಯ ವ್ಯವಸ್ಥೆಯಾಗಿ ವಿಕಾಸ ಹೊಂದಿದ್ದು ಒಂದು ರೋಚಕ ಕತೆ. ಈ ಪ್ರಕ್ರಿಯೆಯಲ್ಲಿ ಒಂದು ಗುಂಪು ಮತ್ತೊಂದನ್ನು ದಮನಿಸಿದ್ದು, ಪ್ರಭಾವಿಸಿದ್ದು, ವಿನಿಮಯ-ವಿಲೀನಗಳೆಲ್ಲಾ ನಡೆದಿವೆ; ಸಾಮಾಜಿಕ-ಧಾರ್ಮಿಕ ನಂಬಿಕೆ ಆಚರಣೆಗಳೆಲ್ಲಾ ಬೆಳೆದು, ಬದಲಾಗಿ ಸಾಗಿ ಬಂದಿವೆ.

ಮಹಾಭಾರತದ ಉದಾಹರಣೆಯನ್ನೇ ನೋಡಿ.

ಅದೊಂದು ಕೌರವ-ಪಾಂಡವರೆಂಬ ಒಂದೇ ಬುಡಕಟ್ಟಿನವರ
ನಡೆದ ಅಧಿಕಾರದ ಕಲಹ. ಅದರಲ್ಲಿ ಭೂಗ್ರಹಣಕ್ಕಿಂತಾ ಗೋ
ಪ್ರಧಾನ ಅಂಶವಾಗಿ ಗೋಚರಿಸುತ್ತದೆ. ಆಗ ಗುಂಪುವಿವಾಹ ಪದ್ಧತಿ ಇತ್ತ
(ದ್ರೌಪದಿ) ನಿರೂಪಿಸುತ್ತದೆ. ಕಾನೀನ ಪುತ್ರ, ನಿಯೋಗ ಪದ್ಧತಿ ಇತ್ತ
ಕುಂತಿ-ಕರ್ಣ, ಗಂಗೆ-ಭೀಷ್ಮರೇ ಉದಾಹರಣೆಯಾಗಿದ್ದಾರೆ. ಬ್ರಾಹ್ಮಣ
ಅಬ್ರಾಹ್ಮಣ ರಾಜರ ಮೇಲೆ ಪೂರ್ಣ ಹತೋಟಿ ಏರ್ಪಟ್ಟಿರಲಿಲ್ಲ
ಕುರುವಂಶದ ಆಸ್ಥಾನ ಪುರೋಹಿತ ದ್ರೋಣಾಚಾರ್ಯನ ಅಭಿಪ್ರಾಯಗಳ
ಕಿಮ್ಮತ್ತು ಸಿಗುತ್ತಿರಲಿಲ್ಲ ಎಂಬ ವಾಸ್ತವವನ್ನು ಗ್ರಹಿಸುವ
ಅರ್ಥಮಾಡಿಕೊಳ್ಳಬಹುದಾಗಿದೆ.

ಅದೇರೀತಿ ರಾಮಾಯಣದ ರಂಜಕ ಅಂಶಗಳನ್ನು ಬದಿಗಿಟ್ಟು ನೋ
ಅದೊಂದು ಪಾತಿವ್ರತ್ಯದ ಹೊಸ ಸಾಮಾಜಿಕ ಆಚರಣೆಯ
ಮಹಿಳೆಯನ್ನು ಒಳಪಡಿಸಿದ ಕಾಲಘಟ್ಟವಾಗಿತ್ತೆಂಬುದ
ಪರಿತ್ಯಾಗ ಹಾಗೂ ಅಹಲ್ಯೆಯ ಶಾಪದ ಪ್ರಕರಣಗಳ
ಗ್ರಹಿಸಬಹುದಾಗಿದೆ. ರಾಮನ ಪಾದುಕೆಗಳನ್ನು
ಭರತನ ನಡವಳಿಕೆ ಹಾಗೂ ರಾಮ ಶೂದ್ರ ಶಂಬ
ಕೊಲ್ಲುವ ಪ್ರಕರಣಗಳು ರೂಪ ತಳೆಯುತ್ತಿದ್ದ ಊಳ
(Feudal) ಹಾಗೂ ಜಾತಿ ಶ್ರೇಣೀಕರಣದ ಪ್ರಕ್ರಿ
ನಿರೂಪಿಸುತ್ತವೆ.

ಇಂಥದ್ದನ್ನೆಲ್ಲ ಚರ್ಚಿಸುವಾಗ ವಿವಾದಗಳು ಆ
ಸಹಜ. ಪುರೋಹಿತರ ಗುಂಪುಗಳು ಮಾತ್ರವಲ್ಲದೆ
ಮಾಧ್ಯಮಗಳೂ ಸಹ ಅವರ ಮನೆಗೇ ಬೆಂಕಿ
ಕಿರುಚಿಕೊಂಡು ಗೊಂದಲ ಎಬ್ಬಿಸುತ್ತಾರೆ. ಮುಖ್ಯವಾ
ಮೀಡಿಯಾಗಳು ಬಹಳ ಸಾರಿ ಆಳುವ ವರ್ಗಗಳ
ಹಾಗೂ ನಿಲುವುಗಳನ್ನೇ ಪ್ರತಿಫಲಿಸುತ್ತವೆ. ಪಂ
ಚಿಂತನೆಗಳನ್ನು ಅವು ಬೆಂಬಲಿಸುವ
ಅಸಂಪ್ರದಾಯಕವಾಗಿರುವ ಹಾಗೂ ಜನರ ನಂ
ವ್ಯತಿರಿಕ್ತವಾಗಿರುವ ವಸ್ತು ವಿಷಯಗಳನ್ನು ಇವರು ತಡ

‘ಧುಂಧಿ’ಯಲ್ಲಿ ಗಣೇಶ ವಿಸ್ಕಿ ಕುಡಿಯುತ್ತಾನೆ
ಬರೆಯಲಾಗಿದೆಯೆಂದು ಕೆಲ ಮೀಡಿಯಾಗಳು ಸು
ಪ್ರಚಾರ ಮಾಡಿದವು. ಇಂತವೇ ಮೀಡಿಯಾಗಳು ಕೆಲ ವರ್ಷಗಳ
‘ಗಣೇಶ ಹಾಲು ಕುಡಿದನಂತೆ’ ಎಂದು ಕೆಟ್ಟ ಸುಳ್ಳನ್ನು ತಾವೇ ಉತ್ಪಾ
ಸುದ್ದಿ ಮಾಡಿದ್ದವು.

ಇಲ್ಲಿ ನಮಗೆ ವಸ್ತು ಮುಖ್ಯವೇ, ನಂಬಿಕೆ ಮಾತ್ರವೇ ಅಥವಾ
ಮುಖ್ಯವೇ ಎಂಬುದನ್ನು ನಿರ್ಧರಿಸಿಕೊಳ್ಳಬೇಕಿದೆ.

ನಂಬಿಕೆ- ಮನೋಭಾವ ಮಾತ್ರ ಮುಖ್ಯ ಎಂದು ಪ್ರತಿಪಾದಿಸ
ಜನರನ್ನು ಧರ್ಮ-ಜಾತಿ, ಕಂದಾಚಾರ ಮೂಢನಂಬಿಕೆಗಳ ಚರಂಡಿಗೆ ದೂ
ವಸ್ತು **(matter)** ಮಾತ್ರ ಮುಖ್ಯ ಎಂದು ನಂಬುವ ಕಟ್ಟರ್ ಭೌತಿಕವಾ
ವೈಚಾರಿಕ ಮನೋಭಾವವನ್ನು ಇನ್ನಷ್ಟು ಉನ್ನತ ಹಂತಕ್ಕೆ ಒಯ
ಉದಾಹರಣೆಗೆ ಹೆಚ್.ನರಸಿಂಹಯ್ಯ ತರದವರು ಸಾಯಿಬಾಬಾನಿಗ

▶▶

ಹರಿಹರಪ್ರಿಯರ ಪುಸ್ತಕ ಮನೆ



“ಹಳೇ ಬಟ್ಟೆ ಹಾಕಿದರೂ ಪರವಾಗಿಲ್ಲ, ಆದರೆ ಹೊಸ ಪುಸ್ತಕ ಕೊಂಡುಕೊ” ಅನ್ನುವುದೊಂದು ಆಡು ಮಾತು.

ಈ ಪುಸ್ತಕಗಳ ಗೀಳು ಇರುವವರು ಇದೇ ತರ ಇರುತ್ತಾರೆಂಬುದೂ ಅಷ್ಟೇ ಸತ್ಯ ಕೂಡಾ. ಒಮ್ಮೆ ಓದಿನ ರುಚಿ ಹತ್ತಿದವರು ಬೇರೆ ರಂಜನೆಗಳತ್ತ ಪೂರ್ತಿ **shift** ಆಗುವ ಸಾಧ್ಯತೆ ಕಡಿಮೆ.

ಕನ್ನಡದಲ್ಲೀಗ ಪ್ರತಿ ವರ್ಷ ಅಂದಾಜು ಏಳೆಂಟು ಸಾವಿರದಷ್ಟು ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ಲೈಬ್ರರಿ ಖರೀದಿ ಯೋಜನೆಯೇನಾದರೂ ರದ್ದಾದರೆ ಇವರಲ್ಲಿ ಅರ್ಧದಷ್ಟು ಲೇಖಕ-ಪ್ರಕಾಶಕರು ಸೀನ್‌ನಲ್ಲೇ ಇರುವುದಿಲ್ಲ, ಅದೊಂದು ಬೇರೆ ವಿಚಾರ ಬಿಡಿ. ಆದರೆ ಒಳ್ಳೆಯ ಪುಸ್ತಕಗಳು ಬಂದರೆ ಕೊಂಡು ಓದುವ ಜನ ಬಹಳ ಇದ್ದಾರೆ. ನಮ್ಮ ಸಂಸ್ಥೆಯ ಪ್ರಕಾಶನಗಳ ಮೂಲಕವೇ ಕಳೆದ ಐದು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳನ್ನು ಮಾರಾಟ ಮಾಡಿದ್ದೇವೆ.

ಪ್ರಗತಿಪರ ವಲಯದ ಬಹುತೇಕರು ತಮ್ಮ ಮನೆಗಳಲ್ಲಿ ಖಾಸಗಿ ಲೈಬ್ರರಿ ಹೊಂದಿರುತ್ತಾರೆ. ಅಂತಹದ್ದನ್ನು ನೋಡುವುದೇ ಒಂಥರಾ ಖುಷಿ.

ಆದರೆ ಒಂದು ಖಾಸಗಿ ಲೈಬ್ರರಿಯನ್ನು ನೋಡುತ್ತಿರುವಾಗ ಖುಷಿಯನ್ನು ಮೀರಿಸುವ ಬೆರಗು ನನಗಾಗಿದ್ದು ಸಾಹಿತಿ ಹರಿಹರಪ್ರಿಯರ ಮನೆಗೆ ಹೋದಾಗ.

ಅವರ ಮನೆಯ ಹೆಸರೇ ಪುಸ್ತಕ ಮನೆ.


ಅದು ಅವರ ಕಾವ್ಯನಾಮದಂತೆ ಈಗ ಪಾಪ್ಯುಲರ್ ಆಗಿಹೋಗಿದೆ. ಇವರ ಸಂಗ್ರಹದಲ್ಲಿರುವ ಪುಸ್ತಕಗಳ ಸಂಖ್ಯೆ ಎಷ್ಟು ಗೊತ್ತೆ?

ಒಂದೂವರೆ ಲಕ್ಷ...!

ವಿಶ್ವವಿದ್ಯಾಲಯಗಳಲ್ಲಿ, ಹಳೆಯ ದೊಡ್ಡ ಗ್ರಂಥಾಲಯಗಳಲ್ಲಿ ದೊಡ್ಡ ಸಂಖ್ಯೆಯ ಪುಸ್ತಕಗಳಿರುವುದು ಸಹಜ. ಆದರೆ ಒಬ್ಬ ವ್ಯಕ್ತಿ ಮತ್ತವರ ಕುಟುಂಬ ಸ್ವಂತ ಪರಿಶ್ರಮ ಹಾಗೂ ಆಸಕ್ತಿಯಿಂದ ಒಂದೂವರೆ ಲಕ್ಷದಷ್ಟು ಪುಸ್ತಕಗಳನ್ನು ಸಂಗ್ರಹಿಸಿ ಇಡುವುದೆಂದರೆ ತಮಾಷೆಯ ಮಾತಲ್ಲ, ಇಲ್ಲಿ ಕುಟುಂಬದ ವಿಚಾರ ಏಕೆ ಬಂತೆಂದರೆ ಹರಿಹರಪ್ರಿಯರ ಈ ಹವ್ಯಾಸಕ್ಕೆ ಅವರ ಪತ್ನಿ ಸುನಂದಾ ಕಾವ್ಯರವರ ಬೆಂಬಲ, ಸಹಕಾರವೂ ಇದೆಯಾದ್ದರಿಂದ. ಇದಕ್ಕೂ ಒಂದು ಹಿನ್ನೆಲೆ ಇದೆ.

ಹರಿಹರಪ್ರಿಯರ ತಂದೆ ಶಂಕರರಾಮ ಶಾಸ್ತ್ರಿ ಕೋಲಾರದವರು. ತಾಯಿ ಆಂಧ್ರದವರು. ಈ ಶಂಕರರಾಮ ಶಾಸ್ತ್ರಿಗಳು ಮಂಡ್ಯದ ಅಕ್ಕಿ ಹೆಬ್ಬಾಳು ಸಮೀಪದ ಗದ್ದೆ ಹೊಸೂರಿನಲ್ಲಿ ಅರ್ಚಕರಾಗಿದ್ದು ಹರಿಕಥೆ ಕಲಾವಿದರಾಗಿಯೂ ಇದ್ದರಾದ್ದರಿಂದ ತಮ್ಮ ಕಥಾಶ್ರವಣಕ್ಕೆ ಬೇಕಾದ ಪುಸ್ತಕ ಓದುವ, ಸಂಗ್ರಹಿಸುವ ಹವ್ಯಾಸ ಬೆಳೆಸಿಕೊಂಡಿದ್ದರು. ಈ ಹವ್ಯಾಸ ಪಿತ್ರಾರ್ಜಿತ ಆಸ್ತಿಯ ರೀತಿ ನಂತರ ಹರಿಹರ ಪ್ರಿಯರಿಗೂ ಬಂತು.

ಕನ್ನಡ ಸಾಹಿತ್ಯದ ಆರಂಭಕಾಲದ ಕವಿರಾಜ ಮಾರ್ಗದ ಮೊದಲ ಮುದ್ರಿತ ಪುಸ್ತಕದ ಪ್ರತಿಯನ್ನು ಒಳಗೊಂಡಂತೆ ಕನ್ನಡದ ಬಹುತೇಕ ಎಲ್ಲಾ ವಿದ್ವಾಂಸರ, ಸಂಶೋಧಕರ, ಸಾಹಿತಿಗಳ ಪುಸ್ತಕಗಳು ಇಲ್ಲಿವೆ. ಇದಲ್ಲದೆ ತಮಿಳು-



ತೆಲುಗು-ಇಂಗ್ಲಿಷ್ ಸಾಹಿತ್ಯದ ಬಹುದೊಡ್ಡ ಸಂಗ್ರ
ಇವೆ. ಜೊತೆಗೆ **250** ವರ್ಷಗಳ ಹಿಂದಿನ ವಿವಿಧ
ಪತ್ರಿಕೆಗಳು, ಜೈ ಕರ್ನಾಟಕ, ಪ್ರಬುದ್ಧ ಕರ
ಮಾಸ್ತಿಯವರ ‘ಜೀವನ’ ಪತ್ರಿಕೆಯ ಎಲ್ಲಾ ಸಂಪು
ಪುಸ್ತಕ ಮನೆಯಲ್ಲಿವೆ. ನಿಮಗೆ ಬೇಕೆನಿಸಿದವುಗಳನ್ನು
ಮಾಡಿಸಿಕೊಳ್ಳಲು ಅವಕಾಶವಿದೆ.

ಇಷ್ಟನ್ನೆಲ್ಲ ಹುಡುಕಿ ತಂದು ಜೋಡಿಸಿ, ಜತ
ಕಾಪಾಡಿಕೊಳ್ಳಲು ಅದೆಷ್ಟು ಸಹನೆ, ಹಠ,
ಇರಬೇಕಾಗುತ್ತದೆಂಬುದನ್ನು ಯೋಚಿಸಿ. ಹರಿಹ
ರವರು ಕಳೆದ ನಲವತ್ತು ವರ್ಷಗಳಿಂದ ಅಪ
ಪುಸ್ತಗಳನ್ನು ಹುಡುಕಿಕೊಂಡು ಸುತ್ತದ ಸ್ಥಳವಿಲ್ಲವೆ
ಎಪ್ಪತ್ತರ ದಶಕದಲ್ಲಿ ಮದ್ರಾಸಿನ ಪ್ರಖ್ಯಾತ
ಮಾರ್ಕೆಟಿನ ಹಳೆಯ ಪುಸ್ತಕದಂಗಡಿಗಳಿಗೆ
ಪ್ರಿಯರದ್ದು ಪರಿಚಿತ ಮುಖವಾಗಿತ್ತು.


ಇದೆಲ್ಲ ಏನೇ ಇರಲಿ. ನೀವೊಮ್ಮೆ ‘ಪುಸ್ತಕ
ಹೋಗಿ ಬನ್ನಿ. ಇತಿಹಾಸ, ಕಲೆ, ಸಾಹಿತ್ಯ,
ಸಂಶೋಧಕರಿಗೆ ನೆರವಾಗಬಲ್ಲ, ಪುಸ್ತಕಪ್ರಿಯರ
ತಣಿಸುವ, ಕುತೂಹಲ ಕೆರಳಿಸುವ ಅದ್ಭುತ ಲೋಕ

ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಬನ
ದಾಟಿದರೆ ವಾಜರಹಳ್ಳಿಯಲ್ಲಿ ಪುಸ್ತಕ ಮನೆ ಇದೆ.
ಹರಿಹರಪ್ರಿಯರನ್ನು ಫೋನ್ ನಂ. **92422215**
ಮಾತಾಡಿಸಬಹುದು.

...ಹಿಳೆಯರನ್ನು ಕೀಳಾಗಿ ನೋಡುವ ವ್ಯವಸ್ಥೆಯನ್ನೇ ಗಲ್ಲಿಗೇರಿಸಬೇಕು

...ಹಲಿ ಯುವತಿಯ ಮೇಲಾದ ಅಮಾನುಷ ...ಹಿಕ ಅತ್ಯಾಚಾರ ಪ್ರಕರಣದಲ್ಲಿ ನಾಲ್ಕು ...ರು ಅಪರಾಧಿಗಳು ಎಂದು ನ್ಯಾಯಾಲಯ ... ನೀಡಿದೆ. ಆದರೆ ಅವರಿಗೆಲ್ಲ ಎಂತಹ ಶಿಕ್ಷೆ ...ಬೇಕೆಂದು ನಾಳೆ ಶುಕ್ರವಾರ, ಪ್ರಕಟಿಸಲಿದೆ. ಈ ...ರ್ಭದಲ್ಲಿ ಬಹುತೇಕ ಜನರು "ಅವರೆಲ್ಲರಿಗೆ ...ದಂಡನೆ ನೀಡಿದರೆ ಮಾತ್ರ ಮುಂದೆ ...ಡಿದಂತಹ ಪ್ರಕರಣಗಳನ್ನು ...ಯುವಂತಾಗುತ್ತದೆ. ಆದ್ದರಿಂದ ಅವರೆಲ್ಲರನ್ನು ...ರಿಸಿ" ಎಂದು ಒತ್ತಾಯಿಸುತ್ತಿದ್ದಾರೆ.

...ರಣದಂಡನೆ ಬಗ್ಗೆ ನಮ್ಮ ಬಳಗದ ನಿಲುವು ...ುದನ್ನು ಈ ಹಿಂದೆ ಹಲವು ಬಾರಿ ...ಡಿಸಿರುವುದರಿಂದ ಅದನ್ನು ಇಲ್ಲಿ ಮತ್ತೊಮ್ಮೆ ...ರ್ಣವಾಗಿ ಬರೆಯುವ ಅಗತ್ಯವಿಲ್ಲ ಎಂದು



...ದ್ದೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ...ಲನೆಯದಾಗಿ ಯಾರ ಜೀವವನ್ನೂ ಬಲಿ ...ಕೊಳ್ಳುವುದಕ್ಕೆ ಯಾರಿಗೂ ಹಕ್ಕಿಲ್ಲ, ...ನೆಯದಾಗಿ ಕೊಲೆ ಮಾಡಿದವನನ್ನು ...ರಿಸಿದರೆ ನಾವೂ ಕೊಲೆಗಡುಕರಾಗುತ್ತೇವೆಯೇ ...ತು ಆತನಿಗೆ ಸೂಕ್ತ ಶಿಕ್ಷೆಯಾಗುವುದಿಲ್ಲ, ...ನೆಯದಾಗಿ ಜಗತ್ತಿನಾದ್ಯಂತ ಯಾವ ದೇಶದಲ್ಲೂ ...ದಂಡನೆಯಿಂದಾಗಿ ಅಪರಾಧಗಳು ...ಯಾಗಿಲ್ಲವಾದ್ದರಿಂದ ಪ್ರಸ್ತುತ ಪ್ರಕರಣದಲ್ಲಿ ...ಧಿಗಳನ್ನು ಗಲ್ಲಿಗೇರಿಸಿದರೆ ಮುಂದೆ ಅತ್ಯಾಚಾರ ...ಗಳನ್ನು ತಡೆಯುವಂತಾಗುವುದಿಲ್ಲ. ...ದಂಡನೆಗೆ ಒತ್ತಾಯಿಸುತ್ತಿರುವವರು ಈ ...ು ಪ್ರಮುಖ ಅಂಶಗಳನ್ನು ...ಲ್ಲಿಟ್ಟುಕೊಳ್ಳುವುದು ಅಗತ್ಯ.

...ಗಾದರೆ ದೆಹಲಿ ಯುವತಿಯ ಮೇಲೆ ...ಾರವೆಸಗಿದ್ದಲ್ಲದೆ, ಆಕೆ ಸಾವನ್ನಪ್ಪುವಂತೆ ದೈಹಿಕ ... ಮಾಡಿದವರಿಗೆ ಎಂತಹ ಶಿಕ್ಷೆ ವಿಧಿಸಬೇಕು? ಹಾಗೆಯೇ ಮುಂದೆ ಇಂತಹ ಕೃತ್ಯಗಳು ನಡೆಯದಂತೆ ತಡೆಯುವುದು ಹೇಗೆ?

ನನ್ನ ಪ್ರಕಾರ ಈ ಅಪರಾಧಿಗಳಿಗೆ ಆಜೀವ ಕಾರಾಗೃಹ ಶಿಕ್ಷೆಯನ್ನು ನೀಡಬೇಕು.

ಸಾಮಾನ್ಯವಾಗಿ ನಮ್ಮಲ್ಲಿ ಜೀವಾವಧಿ ಶಿಕ್ಷೆ ಎಂದರೆ 14 ವರ್ಷ ಜೈಲು ವಾಸ ಎಂಬ ಭಾವನೆ ಇದೆ. (ಈ 14 ವರ್ಷಕ್ಕೂ ರಾಮನ 14 ವರ್ಷ ವನವಾಸಕ್ಕೂ ಎಂತಹದ್ದಾದರೂ ನಂಟಿದೆಯೇ?!) ಅಂದರೆ ಯಾವುದೋ ಕಾರಣಕ್ಕೆ ಕೋಪಗೊಂಡು ಮಾನಸಿಕ ಸ್ತಿಮಿತತೆ ಕಳೆದುಕೊಂಡು ಯಾರನ್ನೋ ಉದ್ದೇಶಪೂರ್ವಕವಾಗಲ್ಲದೆ ಆ ಕ್ಷಣದಲ್ಲಿ ಕೊಲೆ ಮಾಡಿದವರನ್ನು 14 ವರ್ಷಗಳ ಕಾಲ ಜೈಲಿನಲ್ಲಿಟ್ಟು, ಅವರ ವ್ಯಕ್ತಿತ್ವದಲ್ಲಿ ಸುಧಾರಣೆಗಳು ಕಂಡುಬಂದರೆ ಅವರಿಂದ ಇನ್ನು ಮುಂದೆ ಯಾರ ಜೀವಕ್ಕೂ ಅಪಾಯವಿಲ್ಲ ಎಂದು ಅವರನ್ನು ಬಿಡುಗಡೆ ಮಾಡಲಾಗುತ್ತದೆ.

ಆದರೆ ಯಾವುದೇ ಕಾರಣಕ್ಕೂ ದೆಹಲಿ ಪ್ರಕರಣದ ಅಪರಾಧಿಗಳಿಗೆ ಇಂತಹ ರಿಯಾಯಿತಿಯನ್ನು ಕೊಡಲೇ ಕೂಡದು. ಬದಲಾಗಿ ಅವರನ್ನೆಲ್ಲ ಕಠಿಣ ಶಿಕ್ಷೆಗೆ ಗುರಿಯಾಗಿಸಿ, ಎಂದೂ ಅವರಿಗೆ ಪರೋಲ್ ಸೌಲಭ್ಯವಾಗಲಿ, ಇನ್ಯಾವುದೇ ಸವಲತ್ತುಗಳಾಗಲಿ ನೀಡದೆ, ಅವರು ತಮ್ಮ ಜೀವನದ ಕೊನೆ ಉಸಿರು ಎಳೆಯುವವರೆಗೂ ಜೈಲಿನಲ್ಲೇ ಕೊಳೆಯುವಂತೆ ಮಾಡಬೇಕು. ಆಗ ಅವರೆಲ್ಲರೂ ತಮ್ಮ ಉಳಿದ ಜೀವಿತಕಾಲವನ್ನು ತಮ್ಮ ಅಪರಾಧಕ್ಕೆ ಪರಿತಪಿಸುತ್ತಾ ಇರುವಂತಾಗುತ್ತದಲ್ಲದೆ, ಇತರರಿಗೆ ಅತ್ಯಾಚಾರದಂತಹ ಅಪರಾಧ ಮಾಡಿದರೆ ತಮಗೆ ಎಂತಹ ಕಠೋರ ಶಿಕ್ಷೆ ಕಾದಿದೆ ಎಂಬುದಕ್ಕೂ ಉದಾಹರಣೆಯಾಗಿರುತ್ತಾರೆ.

ಇದಿಷ್ಟು ದೆಹಲಿ ಯುವತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಮಾಡಿದರೆ ಸೂಕ್ತ ಎನಿಸುತ್ತದೆ. ಆದರೆ ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ತಡೆಯುವುದು ಹೇಗೆ?

ಇಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಿದರೆ ಸೂಕ್ತ ಎನಿಸುತ್ತಿದೆ. ಮೊದಲನೆಯದಾಗಿ ಆದಿವಾಸಿ ಸಮಾಜದ ವ್ಯವಸ್ಥೆಯಲ್ಲಿ ಅತ್ಯಾಚಾರ ಅಥವಾ ಲೈಂಗಿಕ ಹಿಂಸೆ ಎಂಬ ಪರಿಕಲ್ಪನೆಗಳೇ ಇರಲಿಲ್ಲ. ಈಗಲೂ ನಮ್ಮ ದೇಶದ ಹಲವಾರು ಬುಡಕಟ್ಟು ಸಮುದಾಯಗಳಲ್ಲಿ ಇಂತಹ ಪ್ರಕರಣಗಳು ನಡೆಯುವುದೇ ಇಲ್ಲ. ಯಾಕೆಂದರೆ ಆ ಸಮುದಾಯಗಳಲ್ಲಿ ಮಹಿಳೆಯರಿಗೂ ಸಮಾನತೆ ಇದ್ದು ಅವರ ಮೇಲೆ ಯಾವ ರೀತಿಯಲ್ಲೂ ಬಲಾತ್ಕಾರಕ್ಕೆ ಆಸ್ಪದವೇ ಇರುವುದಿಲ್ಲ.

ಆದರೆ ಯಾವಾಗ ಸಮಾಜದೊಳಗೆ ಊಳಿಗಮಾನ್ಯ ವ್ಯವಸ್ಥೆ ಕಾಲೂರಿತೋ ಆಗ ಮಹಿಳೆಯರಿಗೆ ಸಮಾನ ಸ್ಥಾನವನ್ನು ನಿರಾಕರಿಸಲಾಯಿತು ಮತ್ತು ಆಕೆಯನ್ನು ಸ್ವಂತ ವ್ಯಕ್ತಿತ್ವ, ಹಕ್ಕು, ದನಿ ಇಲ್ಲದ ವಸ್ತುವಿನಂತೆ ಪರಿಗಣಿಸಲಾಯಿತು. ಆಕೆಯ ಮೇಲಿನ ಶೋಷಣೆ ಮತ್ತು ದೌರ್ಜನ್ಯ ಹೆಚ್ಚಾಯಿತು. ಕೊನೆಗೆ ಆಕೆಯನ್ನು ಕೇವಲ ಭೋಗದ ವಸ್ತು ಎಂಬಂತೆ ನೋಡುವ ಮಟ್ಟಕ್ಕೆ ಇದು ಹೋಯಿತು. ಭಾರತದಲ್ಲಂತೂ ಸನಾತನ ಸಂಸ್ಕೃತಿಯ ಹೆಸರಲ್ಲಿ ಮಹಿಳೆಯರನ್ನು ಕಿತ್ತು ತಿನ್ನುವ ಧೋರಣೆ ಶುರುವಾಯಿತು.

ಅದರಲ್ಲೂ ಬಂಡವಾಳಶಾಹಿ ವ್ಯವಸ್ಥೆ ಅಗ್ರಸ್ಥಾನ ಪಡೆದ ನಂತರ ಮಹಿಳೆಯರ ಬಗ್ಗೆ ಪುರುಷರಲ್ಲಿ ಲೈಂಗಿಕ ವಿಕೃತಿ ಹೆಚ್ಚಾಯಿತು. ಬಂಡವಾಳಶಾಹಿ ವ್ಯವಸ್ಥೆಗೆ ಮಾರುಕಟ್ಟೆಯೇ ಮುಖ್ಯವಾದ್ದರಿಂದ ಇದನ್ನು ನಮ್ಮ ಟಿವಿಗಳಲ್ಲಿ ಪ್ರಸಾರಗೊಳ್ಳುವ ಜಾಹೀರಾತುಗಳ ಹಿನ್ನೆಲೆಯಲ್ಲಿ ನೋಡಬಹುದು. ಒಂದು ಕಾಫಿಪುಡಿ ಜಾಹೀರಾತಿನಲ್ಲಿ ನಮ್ಮ ಕನ್ನಡತಿ ದೀಪಿಕಾ ಪಡುಕೋಣೆ ಚೋಟುದ್ದದ, ದೇಹಕ್ಕೆ ಅಂಟಿಕೊಂಡಿರುವ ಉಡುಗೆ ತೊಟ್ಟು, ಕೈಯಲ್ಲಿ ಒಂದು ಲೋಟ ಹಿಡಿದು ಮೈಯೆಲ್ಲಾ ಕುಲುಕಿಸುತ್ತಾ ಕುಣಿಯುತ್ತಾಳೆ. ಕಾಫೀಗೂ ಆಕೆಯ ಈ ವಿಚಿತ್ರ ನೃತ್ಯಕ್ಕೂ ಎತ್ತಿಂದೆತ್ತನ ಸಂಬಂಧ ಎಂಬುದು ನನಗಂತೂ ಇಲ್ಲಿಯತನಕ ಅರ್ಥವಾಗಿಲ್ಲ. ಹಾಗೆಯೇ ಬೆಳ್ಳಗಿನ, ಮೆತ್ತಗಿನ ಮೈಚರ್ಮ ಹೊಂದಿರುವ ಮಹಿಳೆಯರು ಸುಂದರವಾದ, ಮಜಬೂತಾದ ಗಂಡಂದಿರನ್ನು ಪಡೆಯುವ ಜಾಹೀರಾತುಗಳಿಗೆ ಲೆಕ್ಕವಿಲ್ಲ.

ಇನ್ನು ಧಾರಾವಾಹಿಗಳ ವಿಷಯಕ್ಕೆ ಬಂದರೆ ಅವುಗಳಲ್ಲಿರುವ ಮಹಿಳೆಯರು ಒಂದೋ ಅಸಹಾಯಕರು, ಇಲ್ಲ ಕುಟಿಲೆಯರು. ಸಿನಿಮಾಗಳಲ್ಲಂತೂ ಪುರುಷನ ರಕ್ಷಣೆ ಇಲ್ಲದೆ ಅಸ್ತಿತ್ವವೇ ಇಲ್ಲದ ಯುವತಿಯರೇ ಹೀರೋಯಿನ್‌ಗಳು. ಹಾಗೆಯೇ ಮಹಿಳೆಯರಿಗೆಂದೇ ಪ್ರಕಟಗೊಳ್ಳುವ ಪತ್ರಿಕೆಗಳಲ್ಲಿ ಅವರ ವ್ಯಕ್ತಿತ್ವವನ್ನು ಬೆಳೆಸುವ ಬರಹಗಳಿಗೆ ಬರ ಇದ್ದು, ಸಂಸಾರಕ್ಕೆ ಸೇವೆ ಸಲ್ಲಿಸುವ, ಗಂಡನಿಗಾಗಿ ಆಕರ್ಷಕವಾಗಿರುವ, ಹೊಸ ಬಗೆಯ ಅಲಂಕಾರ, ವಸ್ತ್ರ ಇತ್ಯಾದಿಗಳಿಗೆ ಹೆಚ್ಚು ಒತ್ತು ಕೊಡುವ ಲೇಖನಗಳೇ ಇರುತ್ತವೆ. ಸಾರಾಂಶದಲ್ಲಿ ಇವೆಲ್ಲವೂ ಮಹಿಳೆಯರನ್ನು ಇನ್ನೊಂದು ರೀತಿಯಲ್ಲಿ ಶೋಷಿಸುತ್ತವೆ.

ಇನ್ನು ನಮ್ಮ ಜನಪ್ರಿಯ ಪುರಾಣಗಳಲ್ಲೂ ಮಹಿಳೆಯರ ಕತೆಗಳು ಇದಕ್ಕಿಂತ ಭಿನ್ನವಾಗಿಲ್ಲ. ರಾಮಾಯಣದಲ್ಲಿನ ಪ್ರಮುಖ ಮಹಿಳೆಯರನ್ನೇ ಉದಾಹರಣೆಗೆ ನೋಡಿ: ತನ್ನ ಸ್ವಾರ್ಥಕ್ಕಾಗಿ ರಾಮನನ್ನು ಕಾಡಿಗೆ ಅಟ್ಟುವ ಕಪಟಿ ಕೈಕೇಯಿ, ಗಂಡನೇ ಸರ್ವಸ್ವ ಎಂದು ನಂಬಿರುವ-ಸ್ವತಂತ್ರ ವ್ಯಕ್ತಿತ್ವ ಇಲ್ಲದ ಸೀತೆ, ಪತ್ನಿಯಾದ ತನಗಿಂತ ತನ್ನ ಅಣ್ಣನೇ ಮುಖ್ಯ ಎಂದು ಲಕ್ಷ್ಮಣನಿಂದ ತಿರಸ್ಕರಿಸಲ್ಪಡುವ ಊರ್ಮಿಳೆ, ತನ್ನ ಆಶಯವನ್ನು ಅಭಿವ್ಯಕ್ತಿಸಿದ್ದಕ್ಕೆ ಲಕ್ಷ್ಮಣನ ಕೈಯಲ್ಲಿ ಮೂಗು, ಕಿವಿಗಳನ್ನು ಕತ್ತರಿಸಿಕೊಂಡ ಶೂರ್ಪನಖಿ, ತನ್ನ ಗಂಡ ಪರರ ಸ್ತ್ರೀಯನ್ನು ಹೊತ್ತುಕೊಂಡು ಬಂದಿದ್ದರೂ ಅಸಹಾಯಕಳಾದ ಮಂಡೋದರಿ... ಇವರ ಕತೆಗಳನ್ನೆಲ್ಲ ಕೇಳಿ ನಮ್ಮ ಗಂಡು ಮಕ್ಕಳಲ್ಲಿ ಮಹಿಳೆಯರ ಬಗ್ಗೆ ಹೇಗೆ ಗೌರವ ಮೂಡಲು ಸಾಧ್ಯ? ಮಹಿಳೆಯರನ್ನು ಸಮಾನರನ್ನಾಗಿ ನೋಡಲು ಸಾಧ್ಯ?

ಈಗಿನ ದಿನಗಳಲ್ಲಂತೂ ಭಾರತದಲ್ಲಿ ಒಂದೆಡೆ ಮಹಿಳೆಯರನ್ನು ಮಾರಾಟದ ವಸ್ತುವಿನಂತೆ ಪರಿಗಣಿಸುವ ಬಂಡವಾಳಶಾಹಿ ಆರ್ಥಿಕ ನೀತಿ.



ಕಂಡಹಾಗೆ

• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಇನ್ನೊಂದೆಡೆ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ನಿರಾಕರಿಸುವ ಪುರಾತನ ಸನಾತನ ಸಂಸ್ಕೃತಿ-ಇವೆರಡೂ ಅನಿಷ್ಟಗಳು ಜೊತೆಗೂಡಿ ಮಹಿಳೆಯರ ಸ್ಥಿತಿಗತಿಗಳನ್ನು ಮತ್ತಷ್ಟು ದಾರುಣಗೊಳಿಸಿವೆ. ಪರಿಣಾಮವಾಗಿ ಇಂದು ಮಹಿಳೆಯರ ಮೇಲಿನ ದಬ್ಬಾಳಿಕೆ, ದೌರ್ಜನ್ಯ ಮತ್ತು ಅತ್ಯಾಚಾರ ಹೆಚ್ಚಾಗುತ್ತಿದೆ. ಒಂದು ಸಮೀಕ್ಷೆಯ ಪ್ರಕಾರ ಪ್ರತಿ 20 ನಿಮಿಷಕ್ಕೆ ದೇಶದ ಯಾವುದಾದರು ಒಂದು ಭಾಗದಲ್ಲಿ ಓರ್ವ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ. ರಾಜಧಾನಿ ದೆಹಲಿಯಲ್ಲಿ ಅತ್ಯಾಚಾರ ಪ್ರಕರಣಗಳು ಶೇ. 139 ಹೆಚ್ಚಾಗಿದ್ದರೆ ಲೈಂಗಿಕ ಕಿರುಕುಳದ ಪ್ರಕರಣಗಳು ಶೇ. 500 ಏರಿದೆ.




ಇದೆಲ್ಲವನ್ನು ತಡೆಯುವುದು ಹೇಗೆ? ಖಂಡಿತವಾಗಿಯೂ ದೆಹಲಿ ಪ್ರಕರಣದ ಅಪರಾಧಿಗಳನ್ನು ಗಲ್ಲಿಗೇರಿಸುವ ಮೂಲಕ ಅದು ಸಾಧ್ಯವಿಲ್ಲ. ಬದಲಾಗಿ ಮಹಿಳೆಗೆ ಸಮಾನತೆಯನ್ನು ನಿರಾಕರಿಸುವ, ಆಕೆಯನ್ನು ಸ್ವಂತ ವ್ಯಕ್ತಿತ್ವವನ್ನು ಹೊಂದಿರುವ ಓರ್ವ ಜೀವಿ ಎಂದು ನೋಡದ ನಮ್ಮ ಸಮಾಜದ ವಿಕೃತ ಧೋರಣೆಯನ್ನು ಮತ್ತು ಅದನ್ನು ಪೋಷಿಸುವ ವ್ಯವಸ್ಥೆಯನ್ನು ಮೊದಲು ಗಲ್ಲಿಗೇರಿಸಬೇಕಿದೆ.

ಅದು ಹೇಗೆ ಸಾಧ್ಯ?

ಇದು ಸುಲಭದ ಕೆಲಸವಲ್ಲ ಆದರೂ ಇದು ಸಾಧ್ಯ.

ಮೊದಲನೆಯದಾಗಿ ಮಹಿಳೆಯರನ್ನು ಅಸಹಾಯಕರನ್ನಾಗಿ, ಸ್ಥಾನಮಾನವಿಲ್ಲದ ವ್ಯಕ್ತಿಗಳಂತೆ ತೋರಿಸುವ ನಮ್ಮ ಪೌರಾಣಿಕ ಕತೆಗಳಿಗೆ ಮರಣದಂಡನೆ ವಿಧಿಸಬೇಕು. ಜೊತೆಗೆ ಶಾಲಾಮಕ್ಕಳ ಪಠ್ಯ ಪುಸ್ತಕಗಳಲ್ಲಿ ಮಹಿಳೆಯರಿಗೆ ಮುಖ್ಯ ಪಾತ್ರಗಳನ್ನು ಕೊಡಬೇಕು (ಉದಾಹರಣೆಗೆ 'ಅಪ್ಪ ಆಫೀಸಿಗೆ ಹೋಗುತ್ತಾರೆ, ಅಮ್ಮ ಮನೆಯಲ್ಲಿ ಅಡುಗೆ ಮಾಡುತ್ತಾರೆ' ಎಂಬಂತಹ ಸಾಲುಗಳನ್ನು ಪಠ್ಯಪುಸ್ತಕಗಳಿಂದ ಕಿತ್ತೊಗೆಯಬೇಕಿದೆ). ನಮ್ಮ ಮಾಧ್ಯಮಗಳಲ್ಲಿ ಮಹಿಳೆಯರ ಹಕ್ಕುಗಳಿಗೆ ಹೆಚ್ಚು ಒತ್ತುಕೊಡಬೇಕಿದೆ. ನಮ್ಮ ಮನೆಗಳಲ್ಲಿ ನಮ್ಮ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು. ನಮ್ಮ ಆಡಳಿತ ವ್ಯವಸ್ಥೆ ಮಹಿಳೆಯರ ವಿಷಯಗಳ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳಬೇಕು. ಒಟ್ಟಾರೆಯಾಗಿ ನಮ್ಮ ಸಮಾಜದ ಎಲ್ಲ ಸ್ತರಗಳಲ್ಲೂ ಮಹಿಳೆಯರು ಅಬಲೆಯರಲ್ಲ, ಭೋಗದ ವಸ್ತುಗಳಲ್ಲ, ಅವರಿಗೂ ಸಮಾನತೆ, ಹಕ್ಕು, ದನಿ, ಸ್ವಾತಂತ್ರ್ಯ ಎಲ್ಲವೂ ಇದೆ ಎಂಬ ಅಂಶಗಳಿಗೆ ಸತತವಾಗಿ ಒತ್ತು ಕೊಡಬೇಕು.

ದೆಹಲಿ ಅಪರಾಧಿಗಳನ್ನು ಗಲ್ಲಿಗೇರಿಸುವ ಬದಲು ಮಹಿಳೆಯರನ್ನು ಕೀಳಾಗಿ ನೋಡುವ ನಮ್ಮ ಸಮಾಜದ ಮನುಸ್ಮೃತಿಯನ್ನು ಮತ್ತು ಅದಕ್ಕೆ ಕಾರಣವಾದ ವ್ಯವಸ್ಥೆಯನ್ನು ಗಲ್ಲಿಗೇರಿಸಿದರೆ ಮಾತ್ರ ಅತ್ಯಾಚಾರ ಮತ್ತು ಲೈಂಗಿಕ ವಿಕೃತಿಗಳನ್ನು ತಡೆಯಲು ಸಾಧ್ಯ. ■


ಚಿತ್ರದುರ್ಗ: ಜನ ನಾಯಕರ 100 ದಿನಗಳ ಸಾಧ

ಸಿದ್ದರಾಮಯ್ಯನವರ ಸರ್ಕಾರ ನೂರುದಿನದ ಸಾಧನೆಯನ್ನು ಭರ್ಜರಿಯಾಗಿ ಆಚರಿಸಿಕೊಳ್ಳದಿದ್ದರೂ ಭರ್ಜರಿ ಸುದ್ದಿಯಂತೂ ಆಯಿತು. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ನೂರು ದಿನಗಳಲ್ಲಿ ಯಾವ ಶಾಸಕ ಮಂತ್ರಿ ಏನು ಕಡಿದು ಗುಡ್ಡೆ ಹಾಕಿದರೆಂಬುದೇ ಚಿದಂಬರ ರಹಸ್ಯ. 2013ರ ಅಸೆಂಬ್ಲಿ ಚುನಾವಣೆ ಬಂದಾಗ ಜಿಲ್ಲೆಯ ಮತದಾರ ಹೊಸಭರವಸೆ ಹೊತ್ತುಕೊಂಡೇ ಚುನಾವಣೆಯಲ್ಲಿ ಬದಲಾವಣೆಯ ಗಾಳಿಗೆ ಮತ ಚಲಾಯಿಸಿದ್ದ. ಎಲ್ಲ ಭರವಸೆಗಳೂ ನೂರು ದಿನಗಳಲ್ಲೇ ಈಡೇರಬೇಕೆಂದು ಅವಸರಪಡುವುದು ಅಪೇಕ್ಷಣೀಯವಲ್ಲ, ಆದರೆ ಯಾವ ಶಾಸಕರೂ ಜನಸಾಮಾನ್ಯರ ನೋವಿಗೆ ಸ್ಪಂದಿಸದಿರುವುದನ್ನು ಕಂಡು ಮತದಾರರಲ್ಲಿ ಬೇಸರ ಮೂಡಿರುವುದು ಸುಳ್ಳಲ್ಲ.

ಜಿಲ್ಲೆಯ ಮೊಳಕಾಲ್ಮೂರು- ಚಳ್ಳಕೆರೆ, ಹಿರಿಯೂರು ಕ್ಷೇತ್ರಗಳು ಪ್ರತಿ ವರ್ಷದ ಬರಗಾಲದಿಂದ ತತ್ತರಿಸಿಹೋಗುತ್ತಿವೆ. ಮುಂಗಾರುಮಳೆಯೂ ಇಲ್ಲ; ಹಿಂಗಾರು ಮಳೆಯೂ ಕೈಕೊಟ್ಟಿದೆ. ಜಿಲ್ಲೆಯ ಬಹುತೇಕ ಭಾಗ ಮಳೆಯಿಂದ ವಂಚಿತವಾಗಿವೆ. ಚಳ್ಳಕೆರೆ, ಮೊಳಕಾಲ್ಮೂರು ಭಾಗದ ರೈತರು ಈರುಳ್ಳಿ, ಕಡಲೆಕಾಯಿ ಬೆಳೆಯನ್ನೆ ಪ್ರಧಾನ ಬೆಳೆಯಾಗಿ ನಂಬಿ ನೆಲಕ್ಕೆ ಬೀಜ ಚೆಲ್ಲಿ ತಲೆಮೇಲೆ ಕೈಹೊತ್ತು ಕೂರುವಂತಾಗಿದೆ. ಮುಂದಿನ ಭವಿಷ್ಯದ ಪ್ರಶ್ನೆ ರೈತ ಸಮುದಾಯವನ್ನು ಕಂಗಾಲಾಗಿಸಿದೆ. ಇಂಥ ಬರಗಾಲದ ಪರಿಸ್ಥಿತಿ ಇದ್ದರೂ ಉಸ್ತುವಾರಿ ಮಂತ್ರಿ ಆಂಜನೇಯ ಮಾತ್ರ ಕ್ಯಾರೆ ಅಂದಿಲ್ಲ, ಅಂಥಾ ಕ್ಷೇತ್ರಗಳಿಗೆ ದರ್ಶನ ಭಾಗ್ಯ ನೀಡಿಲ್ಲ.

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಅದೇನು ಶಾಪವೋ ಭಗವಂತನೇ ಬಲ್ಲ, ನಾಲ್ಕುಬಾರಿ ಶಾಸಕನಾಗಿದ್ದ ಎನ್.ವೈ. ಗೋಪಾಲಕೃಷ್ಣನ ಕಾಲದಿಂದಲೂ ಅದು ಆಧುನಿಕ ಪ್ರಪಂಚದ ಜೊತೆಗೆ ಅಭಿವೃದ್ಧಿ ವಿಷಯದಲ್ಲಿ ಪೈಪೋಟಿಗೆ ಎದ್ದು ನಿಲ್ಲಲೇ ಇಲ್ಲ, ಇಲ್ಲಿ ಬರೀ ರಾಜಕಾರಣದ ವೈರತ್ವದ ಪ್ರತಿಷ್ಠೆಯೇ ಪ್ರಧಾನವಾಗುತ್ತಲೇ ಪ್ರಗತಿ ಎಂಬುದೇ ಅಡವಿಪಾಲಾಗಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಎಸ್‌ಆರ್ ಪಾರ್ಟಿಯ ನೇರಲಗುಂಟೆ ತಿಪ್ಪೇಸ್ವಾಮಿಯನ್ನು ಗೆಲ್ಲಿಸಿದ್ದಷ್ಟೆ ಬದಲಾವಣೆ. ಈ ಬಾರಿ ಗೆದ್ದಿರುವ ಶಾಸಕರದೂ ಹಳೆಯ ಚಾಳಿಯೇ. ಬರಗಾಲಪೀಡಿತ ಕ್ಷೇತ್ರದ ಮತದಾರರ ಬಗ್ಗೆ ಎಳ್ಳುಕಾಳಿನಷ್ಟು ಕಾಳಜಿಯೂ ಈತನಿಗಿಲ್ಲ.

ಯುವಪೀಳಿಗೆ ನಿರುದ್ಯೋಗ ಸಮಸ್ಯೆಯಿಂದ ಕಂಗಾಲಾಗಿದ್ದಾರೆ, ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಸದ್ದುಮಾಡದಂತಾಗಿವೆ. ಜನಜಾನುವಾರುಗಳು ಜೀವ ಹಿಡಿದುಕೊಳ್ಳುವುದೇ ದುಸ್ತರವಾಗಿದೆ. ಮತ್ತೊಂದು ಕಡೆ ಅಮೃತಮಹಲ್ ಕಾವಲಿನ 10282 ಎಕರೆ ಜಮೀನನ್ನು ಕಸಿದುಕೊಂಡು ಮೊಳಕಾಲ್ಮೂರು ಕ್ಷೇತ್ರದ 80 ಹಳ್ಳಿಗಳ ಬುಡಕಟ್ಟು ಸಮುದಾಯಗಳ ಬದುಕನ್ನೇ ಒಕ್ಕಲೆಬ್ಬಿಸಲು ರಂಗ ಸಜ್ಜಾಗಿದೆ. ಎರಡು ವರ್ಷಗಳಿಂದ ಈ ಭಾಗದ ರೈತ ಸಂಘಟನೆಗಳು ಬೀದಿಗಿಳಿದಿವೆ, ನ್ಯಾಯಾಲಯದಲ್ಲಿ ಕೈಮುಗಿದು ನಿಲ್ಲುವ ಅಸಹಾಯಕ ಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಏನೇ ಆದರೂ ಶಾಸಕ ಮಾತ್ರ ಇದ್ಯಾವುದೂ ತನಗೆ ಸಂಬಂಧಿಸಿದ್ದಲ್ಲ ಎಂಬಂತೆ ಹಾಯಾಗಿದ್ದುಬಿಟ್ಟಿದ್ದಾರೆ.

ಕ್ಷೇತ್ರದ ಕಲ್ಯಾಣದ ಬದಲಿಗೆ ಇವರು ಮಾಡುತ್ತಿರುವುದಾದರೂ ಏನು? ಜೈಲಿನಲ್ಲಿ ಕೂತಿರುವ ತನ್ನ ಸಹೋದರ ಮುತ್ತಯ್ಯನನ್ನು ಬಿಡುಗಡೆ ಮಾಡಿಸಲು ರಾಜಕೀಯ ಲಾಬಿ ಮಾಡುವುದರಲ್ಲೇ ಮೂರು ತಿಂಗಳು ಮುಗಿಸಿದ್ದಾರೆ. ಸದ್ಯಕ್ಕೆ ಇದೇ ಇವರ ಪ್ರಮುಖ ಸಾಧನೆ. ವಿಧಾನ ಪರಿಷತ್ ಮಧ್ಯಂತರ ಚುನಾವಣೆಯಲ್ಲಿ ಮೊದಲಿಗೆ ಬಿಜೆಪಿ ಅಭ್ಯರ್ಥಿಗೆ ಬೆಂಬಲ ಘೋಷಿಸಿ ಏನೂ ಗಿಟ್ಟದ ಕಾರಣ ಪಕ್ಷೇತರ ರಘು ಆಚಾರಿಯ ಕೈಹಿಡಿದು ಬೆಚ್ಚಗಾಗಿದ್ದಾರೆ.

ಚಳ್ಳಕೆರೆಯ ಶಾಸಕ ರಘುಮೂರ್ತಿ ಕೊಂಚ ಭಿನ್ನ. ಮಾಜಿ ಶಾಸಕ ಮಾಜಿ ಮಂತ್ರಿ ಬಿಜೆಪಿ ತಿಪ್ಪೇಸ್ವಾಮಿಯ ದುರಹಂಕಾರ, ಕ್ಷೇತ್ರದ ಬಗೆಗಿನ ದಿವ್ಯ ನಿರ್ಲಕ್ಷಕ್ಕೆ ಹೋಲಿಸಿದರೆ ರಘುಮೂರ್ತಿ ಭಿನ್ನವಾಗಿ ಕಾಣುತ್ತಾರೆ. ನೂರುದಿನಗಳಲ್ಲಿ ಚಳ್ಳಕೆರೆ ವಿಧಾನಸಭಾಕ್ಷೇತ್ರದ ಪ್ರತಿ ಹಳ್ಳಿಗಳನ್ನೂ ಸಂದರ್ಶಿಸಿ ಗ್ರಾಮಸಭೆಗಳನ್ನು ಮಾಡಿದ್ದಾರೆ. ಈಗಾಗಲೇ ಕ್ಷೇತ್ರದಲ್ಲಾಗಬೇಕಾದ ಅಭಿವೃದ್ಧಿ ಕಾಮಗಾರಿಗಳ ಯಾದಿ ತಯಾರಾಗಿದೆ. ತಾಲೂಕಿನ ಅಧಿಕಾರಿವರ್ಗವನ್ನು ಕೂಡಿಕೊಂಡೇ ಗ್ರಾಮಸಭೆಗಳನ್ನು ನಡೆಸುವ ರಘುಮೂರ್ತಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ನೀಲನಕ್ಷೆ ತಯಾರಿಸಿದ್ದಾರೆ. ಇತ್ಯರ್ಥಪಡಿಸಬಹುದಾದ ರೈತರ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಗೆ ಗ್ರಾಮಸಭೆಗಳಲ್ಲೇ ಸೂಚನೆ ನೀಡುತ್ತಾರೆ.

ಇದುವರೆಗೂ ಗೆದ್ದ ಶಾಸಕರೆಲ್ಲಾ ಐದು ವರ್ಷ ಮತದಾರನಿಂದ ಮುಖಮರೆಸಿಕೊಂಡೇ ಚುನಾವಣಾ ರಾಜಕಾರಣ ಮಾಡಿದ ಪರಂಪರೆಯವರು. ಇಂಥದ್ದರಲ್ಲಿ ರಘುಮೂರ್ತಿಯ ಈ ಹಳ್ಳಿದರ್ಶನವೇ ಕ್ಷೇತ್ರದ ಮತದಾರರಿಗೆ ಭರವಸೆಯ ರಾಜಕಾರಣವಾಗಿ ಕಾಣಿಸಿಕೊಂಡಿದೆ.

ಹಿರಿಯೂರು ಶಾಸಕ ಸುಧಾಕರ ಗೆದ್ದುಬಂದದ್ದೇ ಒಂದು ಪವಾಡವಾಗಿದೆ. ಪಕ್ಷೇತರನಾಗಿ ಗೆದ್ದು ಶಾಸಕರಾಗಿದ್ದವನು ಯಡ್ಡಿ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿ ಕ್ಷೇತ್ರದ ತುಂಬಾ ಮೋಜಿನ ಟೂರು ಮಾಡಿದವರು. ಬಫೂನ್ ಪಾಲಿಟಿಕ್ಸ್ ಖ್ಯಾತಿಯ ಸುಧಾಕರ ಸೋಲು ಗ್ಯಾರಂಟಿಯಾದದ್ದೇ ತಡ ಕಾಂಗ್ರೆಸಿನ ಅಂಗಳಕ್ಕೆ ಜಿಗಿದು ಮತ್ತೆ ಶಾಸಕನಾಗಿದ್ದರೂ ತನ್ನ ಹಳೆಯ ಚಾಳಿಯನ್ನೇನು ಬದಲಾಯಿಸಿಕೊಂಡಿಲ್ಲ. ಕ್ಷೇತ್ರದಲ್ಲಿ ಭೀಕರ ಬರಗಾಲವಿದ್ದರೂ ಕ್ಯಾರೆ ಅಂದವರಲ್ಲ. ತನ್ನ ಚೇಲಾಗಳನ್ನು ಕ್ಷೇತ್ರದ ತುಂಬಾ ಬಿಟ್ಟು ಕಳಪೆ ಕಾಮಗಾರಿಯ ಹೊಸಪರ್ವಶುರುಮಾಡಿದ್ದು ಬಿಟ್ಟರೆ ಈತ ಕಿಸಿದಿದ್ದೇನೂ ಇಲ್ಲ. ಜೆಡಿಎಸ್‌ನ ಕೃಷ್ಣಪ್ಪನನ್ನು ಸೋಲಿಸಿದ್ದೇ ತನ್ನ ರಾಜಕೀಯ ಬದುಕಿನ ಮಹತ್ವದ ಸಾಧನೆಯೆಂಬಂತೆ ಬೀಗುತ್ತಾ ಕಾಲಹರಣ ಮಾಡುತ್ತಿದ್ದಾರೆ.

ಸುಧಾಕರನ ನೂರು ದಿನಗಳಲ್ಲಿ ಅಮೋಘ ಸಾಧನೆಯೆಂದರೆ ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ತಮ್ಮದೇ ಪಕ್ಷದ ಅಭ್ಯರ್ಥಿ ಸೇತುರಾಮರನ್ನು ಸೋಲಿಸಲು ಶ್ರಮಿಸಿದ್ದು, ಪಕ್ಷೇತರ ಅಭ್ಯರ್ಥಿ ರಘು ಆಚಾರಿಯ ಪರವಾಗಿ ಒಳಗಿಂದೊಳಗೆ ಪ್ರಚಾರಮಾಡಿದ ವರ್ತಮಾನ ಈಗ ಕಾಂಗ್ರೆ ಪಡಸಾಲೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಗೆದ್ದುಬಂದಿರುವ ತಿಪ್ಪಾರೆಡ್ಡಿಗೆ ನೂರುದಿನಗಳ ಸಾಧನೆ ಎಂಬ ಪ್ರಶ್ನೆಯೇ ಅಪ್ರಸ್ತುತ. ಅದಕ್ಕೂ ಬಲವಾದ ಕಾರಣವಿದೆ. ಅದೇನೆಂದರೆ ಬಿಜೆಪಿ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದು, ತಾನು ಮಂತ್ರಿಯಾಗುವುದು ನಿಶ್ಚಿತವೆಂದೇ ನಂಬಿಕೊಂಡಿದ್ದ ಈ ಆಸಾಮಿ ರಾಜ್ಯದಲ್ಲಿ ಬಿಜೆಪಿ ಧೂಳೀಪಟವಾಗಿದ್ದನ್ನು ಇನ್ನೂ ಜೀರ್ಣಿಸಿಕೊಂಡಿಲ್ಲ. ಅದೇ ಹ್ಯಾಂಗೋ[...] ಹೊರಬರಲಾರದೆ ಒದ್ದಾಡುತ್ತಿದ್ದಾರೆ. ಸಾಲದೆಂಬ[...] ವಿಧಾನಪರಿಷತ್ ಉಪಚುನಾವಣೆಯಲ್ಲಿ ತಾನೆ[...] ಬಿಜೆಪಿ ಅಭ್ಯರ್ಥಿ ಮಕಾಡೆ ಬಿದ್ದ ನಂತ[...] ರಾಜಕೀಯವಾಗಿ ಮತ್ತಷ್ಟು ಹತಾಶೆಗೊಂಡಿದ್ದಾ[...]

ಇಂಥಾ ಸನ್ನಿವೇಶದಲ್ಲಿ ಚಿತ್ರದುರ್ಗ [...] ಗುಂಡಿಗಟಾರಗಳ ನಡುವೆ ರಸ್ತೆ ಹುಡುಕುವಂ[...] ತಲೆದೋರಿದೆ. ಕುಡಿಯುವ ನೀರಿಗೆ ಹಾಹಾ[...] ತರಕಾರಿ ಮತ್ತು ಹೂವು ಮಾರುಕಟ್ಟೆಗಳು [...] ಮಾಡಿ ವರ್ಷಗಳುರುಳಿದ್ದರೂ ಹೊಸಕಟ್ಟಡದ [...] ನೆನೆಗುದಿಗೆ ಬಿದ್ದಿದೆ. ನಗರದಲ್ಲಿನ ಸಂಚಾರ ವ್ಯವ[...] ನರಕ. ಕ್ಷೇತ್ರದಲ್ಲಿ ಬರಗಾಲದ ನೆರಳಿದೆ, [...] ಗುಳೆಹೊರಡಲು ಮನಸು ಮಾಡಿದ್ದಾರೆ. ಆದರೆ [...] ಹಗಲಿರುಳೂ ಮಂತ್ರಿಯಾಗುವ ಕನಸು ಕಾಡಿತ[...] ಕ್ಷೇತ್ರದ ಜನಸಾಮಾನ್ಯರು ಆತನಿಗೆ ಕಾಡಲೇಯಿಲ್ಲ, [...] ಅಭ್ಯರ್ಥಿಯ ಗೆಲುವಿಗೆ ಈತ ಪಟ್ಟ [...] ಕಾಲುಭಾಗದಷ್ಟಾದರೂ ಜನರ ಸಂಕಟಕ್ಕೆ ಸ್ಪ[...] ಮತದಾರರ ಜೊತೆ ಇಷ್ಟೊಂದು ಅಂತರ ಏರ್ಪ[...]

ಹೊಸದುರ್ಗದಲ್ಲಿ ಗೋವಿಂದಪ್ಪ ನಿರಾಳ[...] ಸಿದ್ದರಾಮಯ್ಯ ಮುಖ್ಯಮಂತ್ರಿಯಾದಾಗಿನಿಂದ [...] ಏನೆಲ್ಲ ಮಾಡುವ ತವಕವಿದೆ, ಜಾತಸ್ಥ ಮ[...] ಇರುವುದರಿಂದ ಕ್ಷೇತ್ರಕ್ಕೆ ಅನುದಾನ ತರುವ [...] ವಾರಕ್ಕೊಂದು ಗ್ರಾಮಪಂಚಾಯತಿ ಕ್ಷೇತ್ರದಲ್ಲಿ [...] ಸಭೆಮಾಡುವ ಮೂಲಕ ಜೀವಂತಿಕೆ ಉಳಿಸಿಕೆ[...] ಮಾಜಿ ಶಾಸಕ ಗೂಳಿಹಟ್ಟಿ ಶೇಖರ [...] ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಕ್ಷೇತ್ರಕ್ಕೆ [...] ಅಗತ್ಯ ಕಾಮಗಾರಿಗಳ ನೀಲನಕ್ಷೆ ತಯಾರಿಸಿದ್ದಾ[...] ಅಭಿವೃದ್ಧಿಯ ಕನಸಿನ ನಡುವೆಯೂ ಸ್ವಜನ[...] ಆಪಾದನೆ ಇದ್ದೇ ಇದೆ. ಅದೇನೇ ಇರಲಿ, ಗೆ[...] ತನ್ನ ದುರಹಂಕಾರ ಬದಿಗಿಟ್ಟು ಕ್ಷೇತ್ರದ ಬ[...] ಹರಿಸಿರುವುದಂತೂ ಸದ್ಯಕ್ಕೆ ಸಮಾಧಾನದ [...]

● ಪ[...]

ಬಿಡಿ ಚಿತ್ರಗಳು...

02 ⏮

ಬೂದಿಯ ಬದಲಾಗಿ ಒಂದು ಕುಂಬಳಕಾಯಿ ಕೊಡು' ಅಂತ ಕೇಳಿದ್ದನ್ನೇ ತೆಗೆದುಕೊಳ್ಳೋಣ. ಇದು ವೈಚಾರಿಕತೆಯ ಮೊದಲನೆ ಮೆಟ್ಟಿಲಿನಂತೆ ಕಂಡರೂ ರಂಜನೆಯ ಅಂಶವೇ ಹೆಚ್ಚಾಗಿ ಕಾಣುವಂತಿದೆ.

ಮಾರ್ಕ್ಸಿಸ್ಟ್ ಪರಿಭಾಷೆಯಲ್ಲಿ ಇಂತದ್ದನ್ನು ವಲ್ಗರ್ ಮೆಟರೀಯಲಿಸಂ ಎನ್ನುತ್ತಾರೆ.

ಮನುಷ್ಯನ ಮೆದುಳೂ ಕೂಡಾ ಒಂದು **highest form of material** ಆಗಿರುವುದರಿಂದ ವಸ್ತು ಮತ್ತು ಪ್ರಜ್ಞೆ ಇವೆರಡು ತದ್ವಿರುದ್ಧಗಳ ನಡುವಿನ ಹೋರಾಟ ಹಾಗೂ ಐಕ್ಯತೆಯ ಪ್ರಕ್ರಿಯೆಯಲ್ಲಿ ಮಾತ್ರ ನಮಗೆ ಹೊಸ ಬೆಳಕು ಕಾಣಲು ಸಾಧ್ಯ.

ಪಾರ್ವತಿಯ ದೇಹದ ಕೊಳೆಯಿಂದ ಹುಟ್ಟಿ ಶಿವನಿಂದ ಹತನಾಗಿ ಕೊನೆಗೆ ಆನೆಯ ತಲೆ ಧರಿಸಿ ಪುನರ್ಜನ್ಮ ಪಡೆದನೆಂಬ ಗಣೇಶನ 'ಕಥಾ ವಸ್ತು'ವನ್ನು ನಾವು ಆನೆಗಳನ್ನು ಪಳಗಿಸುತ್ತಿದ್ದ ಮಾತಂಗ ಬುಡಕಟ್ಟು, ನಾಗರು, ಮೂಷಿಕ ಮುಂತಾದ ಗಣ (ಗುಂಪು)ಗಳ ನಾಯಕನಾಗಿದ್ದ ಕಾರಣಕ್ಕಾಗಿ ಗಣಪತಿ (ಗಣಗಳ ಅಧಿಪತಿ)ಯು ಆಯಾ ಬ್ರಾಹ್ಮಣ ವಿರೋಧಿ ಬುಡಕಟ್ಟುಗಳ ಲಾಂಛನಗಳಾಗಿದ್ದ ಆನೆ, ಇಲಿ ಹಾಗೂ ಹಾವುಗಳ ಚಿಹ್ನೆಗಳನ್ನು ಧರಿಸುತ್ತಿದ್ದ ಎಂಬ ಅರಿವನ್ನು ಪಡೆದಾಗ ಹೊಸ 'ಪ್ರಜ್ಞೆ' ಹುಟ್ಟುತ್ತದಷ್ಟೆ.

ಆದರೆ 'ಬ್ರಾಹ್ಮಣ್ಯ'ವು ಇಂತಹ ಯೋಚನೆಯ ಸಾಧ್ಯತೆಗಳನ್ನೇ ನಿರಾಕರಿಸುತ್ತದೆ. ಕಳೆದ ಎರಡು ಸಾವಿರ ವರ್ಷಗಳಿಂದ ತಾನು ಜಾರಿಗೆ ತಂದಿರುವ ಧರ್ಮಾಚರಣೆ -ಜಾತಿ ತಾರತಮ್ಯದ ವ್ಯವಸ್ಥೆಯನ್ನು ಅಬಾಧಿತವಾಗಿ ಮುಂದುವರೆಸಲು ಬಯಸುತ್ತಿದೆ. ಕಾಲ ಬದಲಾದಂತೆ ಈಗ ಅದಕ್ಕೆ 'ಹಿಂದೂ ಧರ್ಮ'ವೆಂದು ಹೆಸರಿಟ್ಟು ಹಳೆಯದರೊಂದಿಗೆ ಕಂದಾಚಾರ, ಮೂಢನಂಬಿಕೆ, ಜಾತಕ, ಜ್ಯೋತಿಷ್ಯ, ವಾಸ್ತುಗಳೆಂಬ ಹೊಸ ರೋಗಗಳನ್ನು ಶೋಧಿಸಿ ಜನರ ಮೇಲೆ ಛೂ ಬಿಟ್ಟಿದೆ. 20ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿರುವ 'ಇಂಡಿಯಾ' ಎಂಬ ಒಂದು ಭೌಗೋಳಿಕ ಹಾಗೂ ಸಾಮಾಜಿಕ ಐಡೆಂಟಿಟಿಯನ್ನು ಹಿಂದೂ ಧಾರ್ಮಿಕ ಐಡೆಂಟಿಟಿಯನ್ನಾಗಿ ರೂಪಾಂತರಿಸಲು ಎಲ್ಲರನ್ನು ಬಲಾತ್ಕರಿಸುತ್ತಿದೆ. ತಾನೇ ಸ್ವತಃ ಹೆಣಗಾಡುತ್ತಿದೆ. ವಿಪರ್ಯಾಸವೇನೆಂದರೆ 'ಹಿಂದೂ ನಾವೆಲ್ಲಾ ಒಂದು' ಎಂಬ ಇವರ ನಾಟಕೀಯ ಸ್ಲೋಗನ್ ಅನ್ನು ಸ್ವತಃ ಈ ಬ್ರಾಹ್ಮಣ್ಯರ ಗುಂಪಿನ ನಾಯಕರಿಗೇ ಆಚರಣೆಗೆ ತರಲು ಸಾಧ್ಯವಾಗುತ್ತಿಲ್ಲ. ಉಡುಪಿಯ ಪೇಜಾವರ ಸ್ವಾಮಿ ಅಲ್ಲಿನ ಕೃಷ್ಣಮಂದಿರಕ್ಕೆ ಬರುವ ಭಕ್ತರಲ್ಲೇ ಬ್ರಾಹ್ಮಣ-ಅಬ್ರಾಹ್ಮಣರೆಂದು ವಿಭಜಿಸಿ ನೋಡುತ್ತಾರೆ. ಈ ಪೇಜಾವರ ಸಮಸ್ತ ಹಿಂದೂಗಳಿಗಿರಲಿ, ಬ್ರಾಹ್ಮಣರಿಗೂ ನಾಯಕನಲ್ಲ, ಮಾಧ್ವರಲ್ಲದವರು ಈ ಹಿಂದೂ ವೀರ ಪೇಜಾವರರಿಗೆ ಕಿಲುಬುಕಾಸಿನ ಬೆಲೆಯನ್ನೂ ಕೊಡುತ್ತಿಲ್ಲ.

ಬ್ರಾಹ್ಮಣ್ಯವು ನಮ್ಮ ಸಮಾಜದಲ್ಲಿ ಕಸಿ ಮಾಡಲೆತ್ನಿಸುತ್ತಿರುವ ಕೋಮುವಾದ, ಜಾತಿ, ಕಂದಾಚಾರಗಳ ಬೇಗುದಿಯು ಶೂದ್ರ-ದಲಿತ-ಮಹಿಳೆ-ಅಲ್ಪಸಂಖ್ಯಾತ ಸಮುದಾಯಗಳಿಗೆ ನೆಮ್ಮದಿ ಇರದಂತೆ ಮಾಡುತ್ತಿದೆ.

ಈ ಪಿಡುಗನ್ನು ಬೇರುಸಮೇತ ಕಿತ್ತೊಗೆಯದೆ ನಮ್ಮ ಪ್ರತಿಭಟನೆಗಳನ್ನು ಕೇವಲ 'ಢುಂಢಿ' ಕಾದಂಬರಿಯ ಸಮರ್ಥನೆ ಹಾಗೂ ಇಲ್ಲವೇ? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಷ್ಟೇ ಮಿತಗೊಳಿಸಿಕೊಂಡರೆ ಪ್ರಯೋಜನವಿಲ್ಲ.

ಕರ್ನಾಟಕದ ಪ್ರಗತಿಪರರು ಈ ಬ್ರಾಹ್ಮಣ್ಯದ ವಿರುದ್ಧ ಅನೇಕ ದಶಕಗಳಿಂದಲೂ ಹೋರಾಡುತ್ತಾ ಬಂದಿದ್ದಾರೆ. 1972ರಲ್ಲೊಮ್ಮೆ ಮೈಸೂರಿನಲ್ಲಿ ನಾಡಿನ ಸಾಹಿತಿ-ಕಲಾವಿದರೆಲ್ಲಾ ಸೇರಿ 'ಜಾತಿವಿನಾಶ ಸಮ್ಮೇಳನ' ನಡೆಸಿದ್ದು ಉಂಟು. ಅಂತದ್ದೊಂದು ಸಂಘಟಿತ ಪ್ರಯತ್ನಕ್ಕೆ ಈಗ ಪುನಃ ಚಾಲನೆ ನೀಡಬೇಕಾಗಿ ಬಂದಿದೆ. ನಾಡಿನ ಎಲ್ಲಾ ಜನಪರ ಪ್ರಗತಿಪರ ಸಂಘಟನೆಗಳು-ವ್ಯಕ್ತಿಗಳು ಸೇರಿ ಬ್ರಾಹ್ಮಣ್ಯದ ಕರಾಳಮುಖವನ್ನು ತೆರೆದಿಡುವ, ಅದರ ಜೀವ ವಿರೋಧಿ ಸಿದ್ಧಾಂತವನ್ನು ಪ್ರತಿರೋಧಿಸುವ ಕೆಲಸ ಮಾಡಬೇಕಿದೆ. ಬ್ರಾಹ್ಮಣ್ಯವು ಕೇವಲ [...] ಸಿದ್ಧಾಂತವಾಗಿ ಮಾತ್ರವಲ್ಲ, ಆಧುನಿಕ ಕಾ[...] ಬಂಡವಾಳಶಾಹಿಗಳೊಂದಿಗೂ ಕೂಡಿಕೆ ಮಾ[...] ಜನರನ್ನು ಹೇಗೆ ನರಳಿಸುತ್ತಿದೆ ಎಂಬುದನ್ನು ಗ್ರ[...] ಜನರಿಗೆ ಹೇಳಬೇಕಿದೆ.

ಈ ನಿಟ್ಟಿನಲ್ಲಿ ಲಂಕೇಶ್ ಬಳಗವು ವ[...] ಅಕ್ಟೋಬರ್ 6 ರಂದು ಚಿತ್ರದುರ್ಗದಲ್ಲಿ [...] ಕುರಿತಂತೆ ಒಂದು ಬೃಹತ್ ಚಿಂತನಾಗೋ[...] ಏರ್ಪಡಿಸುವ ತಯಾರಿ ಆರಂಭಿಸಿದೆ.


ಅದರ ವಿವರಗಳನ್ನು ಮುಂದಿನ ಸ[...] ಪ್ರಕಟಿಸಲಿದ್ದೇವೆ.

ಅದಕ್ಕೆ ಪೂರಕವಾಗಿ ಅಕ್ಟೋಬರ್ [...] ಬರಲಿರುವ 'ಲಂಕೇಶ್' ಸಂಚಿಕೆಯು '[...] ಮುಖವಾಡಗಳನ್ನು ಬಯಲುಗೊಳಿಸುವ ಒಂ[...] ಸಂಚಿಕೆಯಾಗಿ ಪ್ರಕಟಗೊಳ್ಳಲಿದೆ.

ಈ ಕುರಿತಂತೆ ನೀವೂ ಸಹ ಲೇಖನ, [...] ಅನಿಸಿಕೆ-ಪದ್ಯ-ಪತ್ರಗಳ ರೂಪದಲ್ಲಿ ನಿ[...] ಸೇರಿಸಬಹುದು.

ನಿಮ್ಮ ಬರಹ ನಮಗೆ ಸೆಪ್ಟೆಂಬರ್ [...] ತಲುಪಿಸಿ.

ಮೈಸೂರು: ಪ್ಯಾಲೇಸ್ ದರ್ಬಾರ್‌ಗೆ ಬೋಗಸ್ ಬಂಗಾರ!



ಸೂರು ಅರಮನೆ ದಸರಾಕ್ಕೂ ಮುನ್ನವೇ ಸುದ್ದಿ ದೆ. ಆಗ್ರಾದ ತಾಜ್‌ಮಹಲ್ ನಂತರ ಅತಿಹೆಚ್ಚು ರು ಭೇಟಿ ನೀಡುವ ಮೈಸೂರು ಪ್ಯಾಲೇಸ್ ಚಾರಣ, ಅವ್ಯವಹಾರದಿಂದಾಗಿ ಲೋಕಾಯುಕ್ತ ಹತ್ತಾಗುವಂತಾಗಿದೆ. ಅದೂ ತನ್ನ ಅಸ್ತಿತ್ವದ ರ್ಷ ಪೂರೈಸುತ್ತಿರುವ ವೇಳೆಯಲ್ಲೆ ಅರಮನೆ ಆವರಣ ೇಗೊಂದು ರಾಡಿ ಎದ್ದಿರುವುದು ವಿಪರ್ಯಾಸವೇ


ಇನು ಕೆಲವೇ ದಿನಗಳಲ್ಲಿ ಶುರುವಾಗಲಿರುವ ದಸರಾ ಅಬ್ಬರದಲ್ಲಿ ಬರೋಬ್ಬರಿ 3.65 ಕೋಟಿ ರೂ. ಪ್ರೊಂದು ಯಾರ ಗಮನಕ್ಕೂ ಬರುತ್ತಿಲ್ಲ. ಆದರೆ ಯುಕ್ತ ಪೊಲೀಸರು ಮಾತ್ರ ತನಿಖಾ ಕಾರ್ಯಾಚರಣೆ ದ್ದು ದೊಡ್ಡ ದೊಡ್ಡ ತಿಮಿಂಗಿಲಗಳನ್ನೇ ಬಲಿ ಹಾದಿಯಲ್ಲಿದ್ದಾರೆ. ಈ ತಿಮಿಂಗಿಲಗಳ ಪಟ್ಟಿಯಲ್ಲಿ ರಿನ ಹಿಂದಿನ ಡಿಸಿ ಕಮ್ ಅರಮನೆ ಮಂಡಳಿಯ ಟಿವ್ ಆಫೀಸರ್ ಆಗಿದ್ದ ಪಿ.ಎಸ್. ವಸ್ತ್ರದ್ ಮತ್ತು ಮಂಡಳಿಯ ಉಪ ನಿರ್ದೇಶಕ ಟಿ.ಎಸ್. ಣ್ಯರ ಹೆಸರು ಪ್ರಮುಖವಾಗಿ ಕೇಳಿಬರುತ್ತಿವೆ.


ೇ ಅರಮನೆ ಬೆಂಕಿಗೆ ಆಹುತಿಯಾದ ನಂತರ ಲ್ಲಿ ನಿರ್ಮಾಣವಾದ ಈ ಭವ್ಯ ಪ್ಯಾಲೇಸ್ ಇದೇ ತನ್ನ ನೂರನೇ ವರ್ಷ ಪೂರೈಸುತ್ತಿದೆ. ಆದ್ದರಿಂದ ಯನ್ನು ನವೀಕರಿಸಿ ಹೊಸ ರೂಪ ನೀಡಬೇಕೆಂದು ರ್ಕಾರ 45 ಕೋಟಿಯ ನವೀಕರಣ ಯೋಜನೆಗೆ ಲ್ಲಿ ಮುದ್ರೆ ಒತ್ತಿತ್ತು. ಆಗಿನಿಂದಲೂ ಒಂದೊಂದೇ ರಿಗಳು ನಡೆಯುತ್ತಲೇ ಬಂದಿದ್ದವು. 1.5 ಕೋಟಿ ಮೇಲ್ಛಾವಣಿಯ ಪೈಂಟಿಂಗ್‌ಗಳ ನವೀಕರಣ, ಕೋಟಿ ವೆಚ್ಚದಲ್ಲಿ ಕಲ್ಯಾಣ ಮಂಟಪ ಮತ್ತು ್ ಹಾಲ್‌ಗಳ ರಿಪೇರಿ, ಮೂರೂವರೆ ಕೋಟಿ ದರ್ಬಾರ್ ಹಾಲ್ ಮತ್ತು ಕಲ್ಯಾಣ ಮಂಟಪದ ಇರುವ ಕಂಬಗಳಿಗೆ ಬಂಗಾರದ ಪ್ಲೇಟಿಂಗ್ ಬೆಳ್ಳಿಯ ಕುರ್ಚಿಗಳು ಮತ್ತು ಬಾಗಿಲುಗಳ ೇಪನ, 9 ಕೋಟಿ ವೆಚ್ಚದ ಸಿಸಿ ಕ್ಯಾಮೆರಾ ಅಳವಡಿಕೆ, ಟಿ ವೆಚ್ಚದಲ್ಲಿ ಇಡೀ ಅರಮನೆಗೆ ಆಟೊಮ್ಯಾಟಿಕ್ ್ ಮತ್ತು ದೃಶ್ಯಪರದೆಗಳ ಅಳವಡಿಕೆ- ಹೀಗೆ ನವೀಕರಣಗಳು ಚಾಲನೆ ಪಡೆದಿದ್ದವು.

ದರಲ್ಲಿ ದರ್ಬಾರ್ ಹಾಲ್‌ಗೆ ಬಂಗಾರದ ಪ್ಲೇಟಿಂಗ್ ಮಾಡುವ 3.65 ಕೋಟಿ ರೂಪಾಯಿ ವೆಚ್ಚದ ಾರಿಯನ್ನು ರಘುಪತಿ ಭಟ್ ಎಂಬ ಕಲಾವಿದನಿಗೆ ವುದು ವಿವಾದಕ್ಕೆ ಕಾರಣವಾಗಿದೆ. ಈ ಹಿಂದೆ ರ 2011 ಮತ್ತು 2012ರಲ್ಲಿ ಇದೇ ಾರಿಯನ್ನು ಕರ್ನಾಟಕ ರಾಜ್ಯ ಸಾರ್ವಜನಿಕ ಖರೀದಿ ರ್ಶಕತೆ ಕಾಯಿದೆಯಡಿ ಟೆಂಡರ್ ಕರೆದು ಮುಂಬೈ ದ ಪಿಂಕ್-ಸಿಟಿ ಇಂಟರ್‌ನ್ಯಾಷನಲ್ ಎನ್ನುವ ಸಂಸ್ಥೆಗೆ ಕ್ರಮವಾಗಿ 24 ಲಕ್ಷ ಮತ್ತು 55 ಲಕ್ಷ ಯಗಳಿಗೆ ಗುತ್ತಿಗೆ ನೀಡಲಾಗಿತ್ತು. ಆದರೆ ಈ ಸಲ ನ್ನೇ ಕರೆಯದೆ ನೇರವಾಗಿ ಗಂಜೀಫಾ ಕಲೆಯಲ್ಲಿ ತಿ ಪಡೆದಿರುವ ರಘುಪತಿ ಭಟ್‌ಗೆ ೀಡಲಾಗಿತ್ತು. ಅಲ್ಲದೆ ಈ ಕೆಲಸ ಮುಗಿಸಲು ತಿಂಗಳ ಗಡುವು ನೀಡಲಾಗಿತ್ತಾದರು ರಘುಪತಿ ಕೇವಲ ಎರಡೇ ತಿಂಗಳಲ್ಲಿ ಬಂಗಾರ ಲೇಪನದ ವನ್ನು ಫಿನಿಶ್ ಮಾಡಿ ಮನೆ ಸೇರಿದ್ದರು.


ಲೋಕಾಯುಕ್ತಕ್ಕೆ ದೂರು

ರದರ್ಶಕ ಕಾಯ್ದೆಯನ್ನೇ ಉಲ್ಲಂಘಿಸಿ ಟೆಂಡರ್ ದೆ ಗುತ್ತಿಗೆ ನೀಡಿರುವುದರ ಹಿಂದೆ ಭಾರೀ ಅವ್ಯವಹಾರವೇ ಅಡಗಿದೆ ಮತ್ತು ಕಾಮಗಾರಿಗೆ ಬಳಸಿರುವ ಬಂಗಾರ ಕಳಪೆ ಗುಣಮಟ್ಟದ್ದಾಗಿರಬಹುದು ಎಂದು ನಂಜನಗೂಡಿನ ಜವರಾಜ್ ಎಂಬಾತ ಲೋಕಾಯುಕ್ತರಿಗೆ ದೂರು ನೀಡಿದ್ದ. ತನಿಖೆಯ ಜವಾಬ್ದಾರಿ ಹೊತ್ತ ಮೈಸೂರು ವಿಭಾಗದ ಎಸ್.ಪಿ. ಜಗದೀಶ್ ಪ್ರಸಾದ್ ಅರಮನೆಯ ಅವ್ಯವಹಾರವನ್ನು ಗಂಭೀರವಾಗಿ ಪರಿಗಣಿಸಿ ದಾಖಲೆ ತಿರುವಿ ಹಾಕುತ್ತಿದ್ದಂತೆಯೇ ಕೇವಲ ಬಂಗಾರದ ಲೇಪನ ಮಾತ್ರವಲ್ಲ ಒಟ್ಟಾರೆಯಾಗಿ 5.15 ಕೋಟಿ ರೂಪಾಯಿ ಮೊತ್ತದ ಆರು ಕಾಮಗಾರಿಗಳಿಗೆ ಟೆಂಡರ್ ಕರೆಯದೇ ಗುತ್ತಿಗೆ ನೀಡಿರುವುದು ಬಯಲಿಗೆ ಬಂದಿದೆ.





ತಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಸಲುವಾಗಿ 'ಈ ಆರು ಕಾಮಗಾರಿಗಳು ತುರ್ತಾಗಿ ಮುಗಿಯಬೇಕಿತ್ತಾದ್ದರಿಂದ ಸರ್ಕಾರವೇ ಇವುಗಳಿಗೆ ಟೆಂಡರ್ ಬೇಡ, ನೇರವಾಗಿ ಪರಿಣಿತ ವ್ಯಕ್ತಿಗಳಿಗೆ ಗುತ್ತಿಗೆ ನೀಡಿ' ಎಂದು ಅನುಮತಿ ನೀಡಿತ್ತು, ಎಂಬ ಸಬೂಬನ್ನು ಡೆಪ್ಯುಟಿ ಡೈರೆಕ್ಟರ್ ಟಿ.ಎಸ್. ಸುಬ್ರಹ್ಮಣ್ಯ ನೀಡುತ್ತಿದ್ದಾನೆ. ಆದರೆ ತನಿಖೆಯಲ್ಲಿ ಬೆಳಕಿಗೆ ಬಂದಿರುವ ಪ್ರಕಾರ ಸರ್ಕಾರ ಇಂತಹದ್ದೊಂದು ಆದೇಶ ನೀಡುವಂತೆ ತಪ್ಪು ಮಾಹಿತಿಗಳನ್ನು ಆಗಿನ ಡಿಸಿ ವಸ್ತ್ರದ್ ಮತ್ತು ಸುಬ್ರಹ್ಮಣ್ಯ ನೀಡಿರುವುದು ಖಾತ್ರಿಯಾಗಿದೆ. ಹಾಗಾಗಿ ಟೆಂಡರ್ ಕರೆಯಬೇಡಿ ಎಂಬ ಸರ್ಕಾರಿ ಆದೇಶ ವಿದ್ದರೂ ಅಂತಹ ಆದೇಶ ಹೊರಬೀಳು ವಂತೆ ಮಾಡಿದವರ ಮೇಲೆ ಭ್ರಷ್ಟಾಚಾರ ತಡೆಗಟ್ಟುವಿಕೆ ಕಾಯ್ದೆಯ 13(1) ಸಿ ಸೆಕ್ಷನ್ ಅಡಿ ಕೇಸ್ ದಾಖಲಿಸಿಕೊಂಡಿರುವ ಲೋಕಾಯುಕ್ತ ಎಸ್.ಪಿ. ಸಾಹೇಬರು ಮತ್ತಷ್ಟು ಮಾಹಿತಿಗಳನ್ನು ಕಲೆಹಾಕುತ್ತಿದ್ದಾರೆ. ಇದರ ಭಾಗವಾಗಿ ವಸ್ತ್ರದ್ ಜಾಗದಲ್ಲಿ ಈಗ ಡಿಸಿಯಾಗಿರುವ ಮತ್ತು ಅರಮನೆ ಉಸ್ತುವಾರಿ ಸಮಿತಿಯ ಎಕ್ಸಿಕ್ಯೂಟಿವ್ ಆಫೀಸರ್ ಕೂಡಾ ಆಗಿರುವ ಸಿ.ಶಿಖಾ ಅವರಿಗೆ ಪತ್ರ ಬರೆದಿದ್ದ ಎಸ್.ಪಿ. ಜಗದೀಶ್ ಪ್ರಸಾದ್‌ರು 3.65 ಕೋಟಿ ವೆಚ್ಚದ ದರ್ಬಾರ್ ಸಭಾಂಗಣದ ಬಂಗಾರ ಲೇಪನ ಕಾಮಗಾರಿಯ ಧಾಖಲೆಗಳು, ಬಿಲ್‌ಗಳನ್ನು ನೀಡುವಂತೆ ಕೇಳಿದ್ದರು. ಈ ಕೋರಿಕೆಗೆ ಪ್ರತಿಯಾಗಿ 'ಇದಕ್ಕೆ ಸಂಬಂಧಿಸಿದ ದಾಖಲೆಗಳು ಕಳೆದುಹೋಗಿದ್ದು ಮತ್ತೊಮ್ಮೆ ಸಂಗ್ರಹಿಸಿ (ಸೃಷ್ಟಿಸಿ?) ಕೆಲವೇ ದಿನಗಳಲ್ಲಿ ತಲುಪಿಸುತ್ತೇವೆ' ಎಂಬ ಉತ್ತರ ಡಿಸಿ ಕಚೇರಿಯಿಂದ ಬಂದಿತ್ತು!



ಜವಾಬ್ದಾರಿಯುತ ಡಿಸಿ ಕಚೇರಿಯೇ ಪ್ರಮುಖವಾದ ತನಿಖೆಗೆ ಇಷ್ಟೊಂದು ಬೇಜವಾಬ್ದಾರಿಯಾಗಿ ಪ್ರತಿಕ್ರಿಯಿಸುತ್ತದೆಂದರೆ ನಡೆದಿರಬಹುದಾದ ಮತ್ತು ಮುಂದೆ ನಡೆಸಲು ಉದ್ದೇಶಿಸಿರಬಹುದಾದ 'ತಂತ್ರ'ವನ್ನು ಎಂತವರೂ ಅಂದಾಜಿಸಬಹುದು.

ತಜ್ಞ ಸಮಿತಿಯ 'ತಜ್ಞತೆ ಮೇಲೆಯೇ ಡೌಟು!

ತರಾತುರಿಯಲ್ಲಿ ಆಗಬೇಕಾದ ಕೆಲಸವಾದ್ದರಿಂದ ಟೆಂಡರ್‌ಗೆ ಕಾಯದೆ ಕಾಮಗಾರಿ ಶುರು ಮಾಡಿ ಎಂಬ ಆದೇಶ ಸರ್ಕಾರದಿಂದ ಹೊರಬೀಳುವಂತೆ ನೋಡಿಕೊಂಡ ನಂತರ ಐತಿಹಾಸಿಕ ಸ್ಮಾರಕದ ನವೀಕರಣವನ್ನು ಸಮರ್ಥವಾಗಿ ನಿಭಾಯಿಸಬಲ್ಲ ನಿಪುಣ ವ್ಯಕ್ತಿಯನ್ನು ಹುಡುಕಲು ಏಳು ಜನರ 'ತಜ್ಞ' ಸಮಿತಿಯೊಂದನ್ನು ರಚಿಸಲಾಗಿತ್ತು. ಅದಕ್ಕೆ ಅಂದಿನ ಡಿಸಿ ವಸ್ತ್ರದ್‌ರೇ ಅಧ್ಯಕ್ಷ ಮತ್ತು ಅರಮನೆ ಉಸ್ತುವಾರಿ ಸಮಿತಿಯ ಸಿವಿಲ್ ಇಂಜನಿಯರ್‌ಗಳೇ ಸದಸ್ಯರು. ಸಾಮಾನ್ಯವಾಗಿ ಈತನೇ ಈ ಕೆಲಸಕ್ಕೆ ಸೂಕ್ತ ವ್ಯಕ್ತಿ ಎಂದು ಗುರುತಿಸಬೇಕೆಂದರೆ ಆಯ್ಕೆ ಮಾಡುವ 'ಜಡ್ಜ್'ಗಳೂ ಗುರುತಿಸಲ್ಪಡುವ ವ್ಯಕ್ತಿಗಿಂತ 'ಸ್ಮಾರಕ ಸಂರಕ್ಷಣಾ' ಕ್ಷೇತ್ರದ ಉನ್ನತ ಜ್ಞಾನ ಹೊಂದಿರಬೇಕಾಗುತ್ತೆ. ಅಂತಹ ಕೌಶಲ್ಯ ಯಾವೊಬ್ಬ ಸದಸ್ಯನಿಗೂ ಇರಲಿಲ್ಲ. ಯಾಕೆಂದರೆ ಅರಮನೆ ಸಮಿತಿಯಲ್ಲಿರುವ ಬಹುತೇಕ ಇಂಜನಿಯರ್‌ಗಳು ಬೇರೆ ಬೇರೆ ಇಲಾಖೆಗಳಿಂದ ಎರವಲು ಸೇವೆ ಮೇಲೆ ನಿಯುಕ್ತಿಗೊಂಡಿರುವ ಪಿ.ಡಬ್ಲ್ಯೂಡಿ ಸಿವಿಲ್ ಅಭಿಯಂತರರು. ಸಾಂಸ್ಕೃತಿಕ ತಾಣದ ಪುನಶ್ಚೇತನದ ಗಂಧಗಾಳಿಯೂ ಅವರಿಗೆ ತಿಳಿದಿಲ್ಲ. ಇನ್ನು ಡೆಪ್ಯುಟಿ ಡೈರೆಕ್ಟರ್ ಸುಬ್ರಹ್ಮಣ್ಯನಂತೂ ಕಲೆ, ಇತಿಹಾಸ, ಪರಂಪರೆ ಯಾವೊಂದೂ ಗೊತ್ತಿರದ ಎಂ.ಎಸ್ಸಿ (ಇನ್ಫರ್ಮೇಷನ್ ಟೆಕ್ನಾಲಜಿ) ಕ್ಯಾಂಡಿಡೇಟು. ಹೀಗೆ ತಜ್ಞತೆಯೇ ಇಲ್ಲದ ತಂಡ 'ತಜ್ಞ' ಕುಶಲಕರ್ಮಿಯನ್ನ ಹೇಗೆ ಆಯ್ಕೆ ಮಾಡಲು ಸಾಧ್ಯವಾದೀತು?

ಇನ್ನು ಕಾಮಗಾರಿಯ ಗುತ್ತಿಗೆ ಹಿಡಿದ ರಘುಪತಿ ಭಟ್ 'ಗಂಜೀಫಾ' ಕಲೆಯಲ್ಲಿ ಪರಿಣಿತ ವ್ಯಕ್ತಿ. ಗಂಜೀಫಾ ಕಲೆ ಎಂದರೆ ಆಟದ ಎಲೆಗಳ ಮೇಲೆ ನೈಸರ್ಗಿಕ ವರ್ಣಗಳನ್ನು ಬಳಸಿ ಚಿತ್ರಗಳನ್ನು ಬಿಡಿಸುವ ಕಲೆ. ಚಿನ್ನದ ಲೇಪನಕ್ಕೂ ಈ ಕಲೆಗೂ ಅಷ್ಟಾಗಿ ಸಂಬಂಧವೇ ಇಲ್ಲ. ಅಂತಹವರನ್ನು ಆಯ್ಕೆ ಮಾಡಿದ್ದು ಮತ್ತು ಎಂಟು ತಿಂಗಳ ಆ ಕೆಲಸವನ್ನು ಕೇವಲ ಎರಡೇ ತಿಂಗಳಲ್ಲಿ ಮುಗಿಸಿದ್ದೂ ಈಗ ತನಿಖೆಯ ವಿಷಯವಾಗಿದೆ. ಅದೂಅಲ್ಲದೆ ಲೇಪನಕ್ಕೆ ಬಳಸಿರುವ ಚಿನ್ನದ ಗುಣಮಟ್ಟವೂ ಕಳಪೆಯಾಗಿದ್ದಿರ

⏭ 06

...ಂಕರ ಬಿದರಿ ಸೈಕಲ್ ಪಂಚರ್!


ಿಕ್ಕಿಟ್ಟು ಕೂತವರಿಗೆ ಯಾರು ದಿಕ್ಕು? ಈ ಪ್ರಶ್ನೆಗೆ ಸಿಗುವುದು ಅಷ್ಟು ಸುಲಭವಲ್ಲ. ಆದರೆ ರಾಜಕೀಯ ಲ್ಲಿ ದಿಕ್ಕೆಟ್ಟವರಿಗೆ ಒಂದು ಪಾರ್ಟಿ ಅನಾದಿ ದಲೂ ಆಸರೆ ನೀಡುತ್ತಾ ಬಂದಿದೆ. ಅದೇ ಸೈಕಲ್ ದ ಸಮಾಜವಾದಿ ಪಾರ್ಟಿ.

ಬಾರಿ ಅಸೆಂಬ್ಲಿ ಚುನಾವಣೆಯಲ್ಲಿ ಚನ್ನಪಟ್ಟಣದ ಶಿ ಮೂಲಕ ಸೈಕಲ್ ಪಾರ್ಟಿ ಖಾತೆ ತೆರೆದಿದೆ. ಯೋಗೇಶಿಯ ಸ್ವಂತ ಶಕ್ತಿಯ ಗೆಲುವೇ ಹೊರತು ಸೈಕಲ್ ಗುರುತಿನ ಕೊಡುಗೆ ಏನೇನೂ ಇಲ್ಲ. ಗ ಯೋಗೇಶಿ ವಿನಾಕಾರಣ ಸೈಕಲ್ ಬಾವುಟ ಲ್ಲಿ. ಸ್ವತಂತ್ರ ಶಾಸಕ ಎನಿಸಿಕೊಳ್ಳುವುದಕ್ಕಿಂತಲೂ ವಾದಿ ಶಾಸಕ ಎನಿಸಿಕೊಂಡರೆ, ಹಲವು ಪಂಚನೆ ಗಳಲ್ಲಿ ಸಿಲುಕಿರುವ ತನಗೆ ಒಂದು ಗುರಾಣಿಯಂತೆ ಮಾಡುತ್ತದೆ ಎಂಬುದು ಯೋಗೇಶಿ ಲೆಕ್ಕಾಚಾರ. ಾಲದಿಂದಲೂ ಕೇಂದ್ರದಲ್ಲಿ ಸೈಕಲ್ ಪಾರ್ಟಿ ಪವರ್ ಪ್ಲೇಯರ್ ಆಗಿರುವುದನ್ನು ಅರಿತೇ ಸೈಕಲ್ ಏರಿದ್ದು.

ಧಾನಸಭಾ ಚುನಾವಣೆಗೆ ಮುಂಚೆ ಶಂಕರ್ ಕಾಂಗ್ರೆಸ್ ಸೇರಿದ್ದು ಎಂಎಲ್‌ಎ, ಮಿನಿಸ್ಟರ್ ಗುವುದು ಎಂಬ ಹಗಲುಗನಸಿನಿಂದಲೇ ಹೊರತು ಪಕ್ಷದ ಮಹತ್ವದ ಕಾರಣಗಳಿಗೂ ಇರಲಿಲ್ಲ. ಆದರೆ ಕೊಂಡಿದ್ದ ಹೊಳಲ್ಕೆರೆ ಕ್ಷೇತ್ರದ ಟಿಕೆಟ್ ಯಾವಾಗ ಪ್ರೀ ಪಾಲಿಗೆ ದಕ್ಕಿತೋ ಆಗಲೇ ಬಿದರಿಗೆ ನಖಶಿಖಾಂತ ಉರಿದುಹೋಗಿತ್ತು. ಆದರೂ ಚುನಾವಣೆ ನಂತರ ಯಾವುದಾದರೂ ಸ್ಥಾನಮಾನ ಸಿಗಬಹುದೆಂದು ಕಾಯುತ್ತಾ ಕೂತರು. ತಿಂಗಳುಗಳು ಉರುಳಿದರೂ ತಮ್ಮನ್ನು ಕ್ಯಾರೆ ಅನ್ನೋರೆ ಇಲ್ಲದಂತಾಗಿ ದಿಕ್ಕೇ ತೋಚದಂತಾಯ್ತು. ಯಡ್ಡಿಯ ಕೆಜೆಪಿ ಸೇರೆ ಬಿಡುತ್ತಾರೆ ಎಂಬ ಸನ್ನಿವೇಶ ನಿರ್ಮಾಣವಾಗಿತ್ತು. ಕೊನೇ ಘಳಿಗೆಯಲ್ಲಿ ಅದೇನಾಯಿತೋ ಏನೋ? ಇದ್ದಕ್ಕಿದ್ದಂತೆ ಬಿದರಿ ಸೈಕಲ್ ಏರಿ ಕೂತುಬಿಟ್ಟರು

ಕೆಲವರು ಶಂಕರ್ ಬಿದರಿಯನ್ನೇ ರಾಜ್ಯಾಧ್ಯಕ್ಷ ಅಂತ ಘೋಷಿಸಿಬಿಟ್ಟಿದ್ದಾರೆ. ಆದರೆ ಮೂರೂ ಮತ್ತೊಂದು ಜನರಿರುವ ಸೈಕಲ್ ಗುಂಪಿನಲ್ಲಿ ಆಗಲೇ ಒಡಕು ಕಾಣಿಸಿಕೊಂಡಿದೆ. ಅದು ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಸೈಕಲ್ ರ್‍ಯಾಲಿಯ ಸಂದರ್ಭದಲ್ಲಿ ಜಗಜ್ಜಾಹೀರಾಗಿದೆ.

ಸೈಕಲ್ ಗುರುತನ್ನು ಜನಪ್ರಿಯಗೊಳಿಸಲು ಸೈಕಲ್ ರ್‍ಯಾಲಿ ನಡೆಸುವ ಐಡಿಯಾ ಯಾರು ಕೊಟ್ಟರೋ ಗೊತ್ತಿಲ್ಲ. ಅಂತೂ ಬಿದರಿ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ತಯಾರಾಗಿಬಿಟ್ಟಿತು. ಸದ್ಯಕ್ಕೆ ಚಿತ್ರದುರ್ಗದ ಸೈಕಲ್ ಮುಖಂಡ ಗೂಳಿಹಟ್ಟಿ ಶೇಖರ್ ತಾನು ಹೊರಡಿಸಿರುವ ಆದೇಶವನ್ನು ಶಿರಸಾವಹಿಸಿ ಪಾಲಿಸಿ, ಸಾವಿರಾರು ಸೈಕಲ್‌ಗಳನ್ನು ಜಮಾಯಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂಬುದು ಬಿದರಿಯ ಅಪೇಕ್ಷೆ ಹಾಗೂ ನಿರೀಕ್ಷೆಯಾಗಿತ್ತು. ಆದರೆ ಆದದ್ದು ಬಿದರಿಗೆ ಕೇವಲ ಮುಖಭಂಗ ಮಾತ್ರ.




ನಿಗದಿತ ಸಮಯಕ್ಕೆ ಸರಿಯಾಗಿ ಸೈಕಲ್ ರ್‍ಯಾಲಿ ಉದ್ಘಾಟಿಸಲು ಮಾನ್ಯ ಬಿದರಿಯವರು ಸ್ಥಳಕ್ಕೆ ಆಗಮಿಸಿದರು. ಆದರೆ ಬೃಹತ್ ರ್‍ಯಾಲಿಯ ಮಾತು ಹಾಗಿರಲಿ; ಬೆರಳೆಣಿಕೆಯ ಸೈಕಲ್‌ಗಳೂ ಇರಲಿಲ್ಲ. ಮತ್ತೂ ಒಂದೆರಡು ಗಂಟೆ ಕಾದರು. ಸೈಕಲ್‌ಗಳೂ ಇಲ್ಲ; ಶೇಖರ್‌ನ ಸುಳಿವೂ ಇಲ್ಲ. ಕೊನೆಗೆ ಹೇಗೇಗೋ ಮಾಡಿ 10 ಸೈಕಲ್‌ಗಳನ್ನು ಹೊಂದಿಸಿಕೊಂಡು ಮಾಧ್ಯಮದವರೆದುರು ಮೂರು ಮಾರು ಸೈಕಲ್ ತುಳಿದು ಹೆಬ್ಬನೋರೆ ಹಾಕಿಕೊಂಡು ಬಿದರಿ ವಾಪಸ್ಸಾಗಿದ್ದಾರೆ.

ಗೂಳಿಹಟ್ಟಿ ಶೇಖರ್‌ಗೆ ಬಿದರಿಯವರ ಪೊಲೀಸ್ ಭಾಷೆಯ ಬಗ್ಗೆ ಅಸಮಾಧಾನವಿದೆಯೆಂದು ಅವರ ಬೆಂಬಲಿಗರೇ ಹೇಳುತ್ತಿದ್ದಾರೆ. ಕಳೆದ ಮೂರ್‍ನಾಲ್ಕು ದಶಕಗಳ ಕಾಲದಿಂದಲೂ ಪೊಲೀಸ್ ಅಧಿಕಾರ ಚಲಾಯಿಸುತ್ತಾ ಬೆಳೆದು ಬಂದಿರುವ ಬಿದರಿಯವರಿಗೆ ನಡುಗಾಲದಲ್ಲಿ ಅದನ್ನೆಲ್ಲಾ ಬಿಟ್ಟುಬಿಡಲು ಸಾಧ್ಯವಿಲ್ಲ. ತನ್ನ ಆದೇಶಗಳಿಗೆ ಎಲ್ಲರೂ ಜೀಹುಜೂರ್ ಎನ್ನಬೇಕೆಂಬ ಪೊಲೀಸ್ ಅಧಿಕಾರಿಯ ಮನಸ್ಥಿತಿಯಿಂದ ಹೊರಬರದಿದ್ದರೆ ಬಿದರಿ ರಾಜಕೀಯದಿಂದ ನಿವೃತ್ತಿಯಾಗುವ ಕಾಲ ಬೇಗನೇ ಬಂದುಬಿಡಬಹುದು.

ಹೇಳಿಕೇಳಿ ಗೂಳಿಹಟ್ಟಿ ಸಿಕ್ಕ ಅವಕಾಶ ಕೈತಪ್ಪಿಹೋಗದಂತೆ ಬಳಸಿಕೊಳ್ಳುವುದರಲ್ಲಿ ನಿಸ್ಸೀಮ. ಆತ ಸೈಕಲ್ ಏರಿದ್ದೂ ಕೂಡ ಇಂಥ ಒಂದು ವಿಚಿತ್ರ ಲೆಕ್ಕಾಚಾರದ ಹಿನ್ನೆಲೆಯಲ್ಲೇ. ಮುಲಾಯಂಸಿಂಗ್ ಯಾದವ್ ನೇತೃತ್ವದ ಸೈಕಲ್ ಗುರುತಿನಡಿ ಚಿತ್ರದುರ್ಗದಲ್ಲಿ ಎಂಪಿ ಚುನಾವಣೆಗೆ ನಿಂತರೆ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಗೊಲ್ಲರ (ಯಾದವ) ಜಾತಿಯ ಓಟುಗಳು ತನಗೆ ಬಿದ್ದೇಬೀಳುತ್ತವೆಂಬ ಅಚಲ ವಿಶ್ವಾಸ ಆತನದು. ಅಂಥಾ ಮೂಢನಂಬಿಕೆ ಆತನದು. ಅದರ ಜೊತೆಗೆ ತನ್ನ ಸ್ವಜಾತಿ ಬೋವಿ ಜನಾಂಗದ ಓಟುಗಳು ಬಿದ್ದುಬಿಟ್ಟರೆ ತಾನು ಎಂಪಿಯಾಗುವುದು ಗ್ಯಾರಂಟಿ ಎಂಬುದು ಗೂಳಿಹಟ್ಟಿಯ ಲೆಕ್ಕಾಚಾರ!

ಈಗ ಇರೋ ಮೂವರಲ್ಲೇ ತಲೆಗೊಂದು ಲೆಕ್ಕಾಚಾರ. ಹೀಗಾಗಿ ಸೈಕಲ್ ತುಳಿಯೋದಕ್ಕೆ ಮೊದಲೇ ಪಂಚರ್‌ಗಳು ಶುರುವಾಗಿವೆ. ಜನರಿಗೆ ಮತ್ತಷ್ಟು ಮನರಂಜನೆಯಂತೂ ಬಿಟ್ಟಿಯಾಗಿ ಸಿಗಲಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ





ಮಂಡ್ಯ ನಗರಸಭೆಯನ್ನು ಮುಂಡಾಯಿಸಲು ಬರುತ್ತಿದ್ದಾನೆ ಸಿದ್ದರಾಜು

ಮಂಡ್ಯ ನಗರಸಭೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಸೆ.17ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ವಾಮಮಾರ್ಗದಲ್ಲಿ ಗಳಿಸಿರುವ ಹಣದ ದುಡ್ಡು ಚೆಲ್ಲಿ ಆಗಲೇ ನಗರಸಭಾ ಸದಸ್ಯರನ್ನು ತನ್ನ 'ಮನಿಪವರ್'ನಿಂದ ಖರೀದಿಸಿರುವ ಪಕ್ಷೇತರ ಸದಸ್ಯ ಬಿ.ಸಿದ್ದರಾಜು ಶತಾಯಗತಾಯ ನಗರಸಭೆ ಅಧ್ಯಕ್ಷಗಾದಿಗೇರಲು ಹವಣಿಸುತ್ತಿದ್ದಾನೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಸುತ್ತ ಇರುವ ಭಟ್ಟಂಗಿಗಳನ್ನು ತನ್ನ ಹಣದ ಕರಾಮತ್ತಿನಿಂದ ಜೊತೆಗೆ ಹಾಕಿಕೊಂಡಿರುವ ಸಿದ್ದರಾಜು ಅಂಬರೀಶ್ ಅವರ ತಲೆ ಮೇಲೆ ಐಸ್ ಇಟ್ಟು ಆಗಲೇ ಅಧ್ಯಕ್ಷನಾಗಿದ್ದೇನೆಂದು ಬೀಗುತ್ತಿದ್ದಾನೆ. ಈ ಮಧ್ಯೆ ಹೊಸಹಳ್ಳಿ ಬೋರೇಗೌಡ, ಲೋಕೇಶ್, ರಾಮಲಿಂಗಯ್ಯ ಕೂಡ ಸಿದ್ದರಾಜುಗೆ ತೀವ್ರ ಪೈಪೋಟಿ ನೀಡುತ್ತಿರುವುದು ಕದನಕಣ ರಂಗೇರುವಂತೆ ಮಾಡಿದೆ.

ಖತರ್‌ನಾಕ್ ಆಸಾಮಿ

ನಗರಸಭೆಯ 28ನೇ ವಾರ್ಡ್‌ನಿಂದ ಒಂದು ವೋಟ್‌ಗೆ ಒಂದು ಸಾವಿರ ರೂ. ಕನಕಾಂಬರ ನೋಟ್ ಹೊಡೆದು ಗೆದ್ದು ಬಂದಿರುವ ಸಿದ್ದರಾಜು ಖತರ್‌ನಾಕ್ ಆಸಾಮಿ. ಗಾರೆ ಮೇಸ್ತ್ರಿ ಬಸವಯ್ಯ ಎಂಬಾತನ ಮಗನಾದ ಸಿದ್ದರಾಜು 10 ವರ್ಷಗಳ ಹಿಂದೆ ಅಷ್ಟೇನೂ ಸ್ಥಿತಿವಂತ ಆಗಿರಲಿಲ್ಲ. ತನ್ನ ತಂದೆ ಮಾಡಿದ್ದ ಒಂದೆರಡು ಮನೆಗಳನ್ನು ಬಿಟ್ಟರೆ ಈತನ ಬಳಿ ಹೇಳಿಕೊಳ್ಳುವಂತಹ ಆಸ್ತಿ ಇರಲಿಲ್ಲ. ಆದರೆ ದುಡ್ಡು ಮಾಡುವ ಎಲ್ಲಾ ಖತರ್‌ನಾಕ್ ಐಡಿಯಾಗಳು ಈತನಲ್ಲಿತ್ತು. ಅಂತಹದ್ದೇ ಐಡಿಯಾಗಳನ್ನು ಮುಂದಿಟ್ಟುಕೊಂಡು ರಿಯಲ್ ಎಸ್ಟೇಟ್ ದಂಧೆಗಿಳಿದ ನೋಡಿ, ಆಗ ಈತನ ಖದರ್ರೇ ಬದಲಾಗಿಹೋಯಿತು. ಮೊದಮೊದಲು ಸಣ್ಣ ಪುಟ್ಟ ನಿವೇಶನಗಳನ್ನು ಖರೀದಿಸಿ ಮಾರುತ್ತಿದ್ದ ಸಿದ್ದರಾಜು ಜೊತೆಜೊತೆಗೆ ಬಡ್ಡಿದಂಧೆಗೆ ಕೈಹಾಕಿದ. ಹಣಬಲದಿಂದ ಲಿಟಿಗೇಷನ್ ಪ್ರಾಪರ್ಟಿಗಳನ್ನು ಖರೀದಿಸುತ್ತಿದ್ದ ಸಿದ್ದರಾಜು ತಂಟೆ-ತಕರಾರು ಮಾಡಲು ಬಂದವರನ್ನು ತನ್ನ ಬೆಂಬಲಿಗರಿಂದ ಬೆದರಿಸಿ ದಕ್ಕಿಸಿಕೊಳ್ಳುತ್ತಿದ್ದ. ಹಾಗೂ ಬಗ್ಗದೇ ಹೋದರೆ ಅಂತಹವರನ್ನು ಪೊಲೀಸ್ ಮತ್ತು ಕಾನೂನು ವ್ಯವಸ್ಥೆಯ ಮೂಲಕ ಬಗ್ಗಿಸುತ್ತಿದ್ದ. ಮಾನವಂತ ಜನ ಸ್ಟೇಷನ್ನು, ಕೋರ್ಟ್‌ಗಳಿಗೆ ಅಲೆಯಲಾಗದೆ ಈತನ ಉಪಟಳಕ್ಕೆ ಬೇಸತ್ತು ಶರಣಾಗುತ್ತಿದ್ದರು.





ಸಿದ್ದರಾಜು ಖರೀದಿಸಿರುವ ಅಶೋಕನಗರದ ನಿವೇಶನ.. ' ಸದಸ್ಯರಿಗೆ ಸೈಟಿಲ್ಲದಿದ್ದರೂ ಭರ್ಜರಿಯಾಗಿ ಏಳುತ್ತಿರುವ ಸಿದ್ದರಾಜನ ಬಂಗಲೆ.

ಯಾವಾಗ ಅಸಹಾಯಕರ ಆಸ್ತಿ ದಕ್ಕಿಸಿಕೊಳ್ಳುವುದು ನೀರು ಕುಡಿದಷ್ಟು ಸಲೀಸು ಎಂಬುದು ಗೊತ್ತಾಯಿತೋ ಸಿದ್ದರಾಜು ಮತ್ತಷ್ಟು ಜನರಿಗೆ ಮನೆ, ನಿವೇಶನಗಳ ಮೇಲೆ ಮೀಟರ್ ಬಡ್ಡಿ ಲೆಕ್ಕದಲ್ಲಿ ಸಾಲಕೊಟ್ಟು ಅದನ್ನು ಕಟ್ಟಲಾಗದ ಅವರ ಅಸಹಾಯಕತೆಯನ್ನೇ ದುರುಪಯೋಗ ಮಾಡಿಕೊಂಡು ಸಿಕ್ಕಷ್ಟು ಕೊಟ್ಟು ತನ್ನ ಹೆಸರಿಗೆ ಬರೆಸಿಕೊಂಡು ದುಂಡಗಾದ. ನೋಡ-ನೋಡುತ್ತಲೇ ಕೋಟಿ ರೂ.ಗಳ ಒಡೆಯನಾದ.

ಅಸಹಾಯಕರೇ ಟಾರ್ಗೆಟ್

ನಗರಸಭೆ ಮಾಜಿ ಅಧ್ಯಕ್ಷೆಯೊಬ್ಬರಿಗೆ ಬಡ್ಡಿಗೆ ಹಣಕೊಟ್ಟು ಆನಂತರ ಅವರ ಜಮೀನನ್ನೇ ಕಬಳಿಸಿ ಸಿದ್ದರಾಜು ಈಗ ಎಂ.ಸಿ. ರಸ್ತೆಯ ಶಂಕರೇಗೌಡ ನರ್ಸಿಂಗ್ ಹೋಂ ಪಕ್ಕದಲ್ಲಿರುವ ವಿಧವೆಯೊಬ್ಬರ ಮನೆಯನ್ನು ನುಂಗಲು ಕೇಸು ಹಾಕಿ ಆಕೆಯನ್ನು ಅಲೆಸುತ್ತಿದ್ದಾನೆ.

ಅಶೋಕನಗರದ ವಿವೇಕಾನಂದ ರಸ್ತೆಯಲ್ಲಿರುವ 60x40 ಅಳತೆಯ ನಿವೇಶನದಲ್ಲಿರುವ ಮನೆ ಸಾತನೂರಿನ ಕುಟುಂಬಕ್ಕೆ ಸೇರಿದ್ದು, ಮೂವರು ಅಣ್ಣ-ತಮ್ಮಂದಿರ ನಡುವೆ ಪಾಲಾಗಿತ್ತು. ಇವರಲ್ಲಿ ಡಾ.ಜಗದೀಶ್ ಎಂಬಾತನಿಗೆ ಕೆಳ ಅಂತಸ್ತು ನೀಡಿ ವಿಲ್ ಮಾಡಲಾಗಿತ್ತು. ಇಬ್ಬರಲ್ಲಿ ಯಾರೇ ಮನೆ ಮಾರಬೇಕಾದರೂ ಪರಸ್ಪರ ಒಪ್ಪಿಗೆ ಪಡೆದೇ ಮಾರಬೇಕಿತ್ತು. ಮಾರುವ ಸಂದರ್ಭದಲ್ಲಿ ಅಣ್ಣ-ತಮ್ಮಂದಿರಿಗೆ ಮೊದಲು ಆದ್ಯತೆ ನೀಡಬೇಕೆಂದು ವಿಲ್‌ನಲ್ಲಿ ಬರೆಸಲಾಗಿತ್ತು. ಆದರೆ ಡಾ.ಜಗದೀಶ್ ತಮ್ಮ ಪಾಲಿಗೆ ಬಂದಿದ್ದ ಕೆಳ ಅಂತಸ್ತನ್ನು ಸಿದ್ದರಾಜುಗೆ 2003ರಲ್ಲಿ 7.50 ಲಕ್ಷಕ್ಕೆ ಮಾರಿಬಿಟ್ಟರು. ಮಾರುವಾಗ ಅಣ್ಣ-ತಮ್ಮನಿಗೆ ಮೊದಲ ಆದ್ಯತೆ ನೀಡಲಿಲ್ಲ. ಇಂತಹ ವಿವಾದಿತ ಆಸ್ತಿಗಳನ್ನು ಖರೀದಿಸಿ ದಕ್ಕಿಸಿಕೊಳ್ಳುವುದರಲ್ಲಿ ಕುಖ್ಯಾತನಾದ ಸಿದ್ದರಾಜು ನಂತರ ಮೊದಲನೇ ಅಂತಸ್ತಿನಲ್ಲಿದ್ದ ವಿಧವೆ ತಾಯಿ ಹಾಗೂ ಮಗನಿಗೆ ನಾನಾ ರೀತಿಯ ಕಿರುಕುಳ ಕೊಟ್ಟು ಅವರನ್ನು ಖಾಲಿ ಮಾಡಿಸಲು ಪ್ರಯತ್ನಿಸಿದ. ಪ್ರತಿದಿನ ಅವರಿವರನ್ನು ಕರೆತಂದು ಕ್ಯಾತೆ ಜಗಳ ತೆಗೆದು ಮೊದಲನೆ ಅಂತಸ್ತನ್ನು ತನಗೆ ಮಾರುವಂತೆ ಒತ್ತಾಯ ಮಾಡುತ್ತಿದ್ದ. ಯಾವಾಗ ಅವರು ಬಗ್ಗಲಿಲ್ಲವೋ ಪೊಲೀಸರಿಗೆ ಪ್ರಸಾದ ತಿನ್ನಿಸಿ ಕರೆತಂದು ಹಿಂಸೆ ಕೊಟ್ಟ. ಕಡೆಗೆ ಮಾನವಂತ ವಿಧವೆ ತಾಯಿ ಮತ್ತು ಮಗ ತಮಗೆ ಪರಿಚಯವಿದ್ದ ಬೆಂಗಳೂರಿನ ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಮುಂದೆ ಸಂಕಷ್ಟ ಹೇಳಿಕೊಂಡರು. ಆ ಅಧಿಕಾರಿ ಸಿದ್ದರಾಜು ಪರ ವಕಾಲತ್ತುವಹಿಸಿದ್ದ ಮಂಡ್ಯದ ಸಬ್‌ಇನ್‌ಸ್ಪೆಕ್ಟರ್‌ನಿಗೆ ಮಂಗಳಾರತಿ ಎತ್ತಿದನಂತರ ಸಿದ್ದರಾಜು ಸುಮ್ಮನಾದ. ಹೀಗೆ ಅಸಹಾಯಕರನ್ನೇ ಟಾರ್ಗೆಟ್ ಮಾಡುವ ಸಿದ್ದರಾಜು ಭಾನಗಡಿಗಳನ್ನು ಹೇಳುತ್ತಾ ಹೋದರೆ ಮುಗಿಯುವುದೇ ಇಲ್ಲ.

ಸೈಟಿನ ಆಸೆ ಹುಟ್ಟಿಸಿದ

ಲಿಟಿಗೇಷನ್ ಮನೆ, ನಿವೇಶನಗಳನ್ನು ಖರೀದಿಸಿ ಅದನ್ನು ಸುಲಭವಾಗಿ ದಕ್ಕಿಸಿಕೊಂಡಿದ್ದ ಸಿದ್ದರಾಜುವಿನ ಮೇಲೂ ಕೇಸು ಬದ್ದಿದ್ದರಿಂದ ಹುಷಾರಾದ. ಆನಂತರ ಜನರಿಗೆ ಸೈಟು ಕೊಡುವ ಆಸೆ ಹುಟ್ಟಿಸಿ 2006ರಲ್ಲಿ ಮಾಂಡವ್ಯ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಿದ. ತಾನೇ ಅಧ್ಯಕ್ಷನಾಗಿ, ಸುಮಾರು 100 ಮಂದಿಯನ್ನು ಷೇರುದಾರರನ್ನಾಗಿ ಮಾಡಿಕೊಂಡು ಪ್ರತಿಯೊಬ್ಬರಿಂದ 2-3 ಲಕ್ಷ ಅಂತ ಕೋಟ್ಯಾಂತರ ಹಣ ಎತ್ತಿದ. ಗೃಹನಿರ್ಮಾಣ ಸಹಕಾರ ಸಂಘದ ಮೂಲಕ ಷೇರುದಾರರು 10 ಸಾವಿರ ಕಟ್ಟಿಸಿದರೆ 5 ವರ್ಷಕ್ಕೆ 15 ಸಾವಿರ ರೂ. ಕೊಡುತ್ತೇನೆ ಎಂದೂ, ಕಾಸು ಕಟ್ಟಿಸಿದವರಿಗೆ ಕಾರು, ಸ್ಕೂಟರ್‌ಗಳ ಬಹುಮಾನಗಳ ಆಸೆಯನ್ನೂ ತೋರಿಸಿ ಲಕ್ಷಾಂತರ ಡಿಪಾಜಿಟ್ ಎತ್ತಿದ್ದಾನೆ. ಸಂಘದ ಬೈಲಾ ಪ್ರಕಾರ ನಿವೇಶನರಹಿತರಿಗೆ ನಿವೇಶನ ನೀಡಬೇಕು. ಆದರೆ ಈ ಸಂಘದಲ್ಲಿ ಷೇರುದಾರರಾಗಿರುವ ಬಹುತೇಕರಿಗೆ ಮನೆ, ನಿವೇಶನಗಳಿವೆ.

ಯಾವಾಗ ಸಿದ್ದರಾಜು ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಯ ಕ್ಯಾತುಂಗೆರೆ ಗ್ರಾಮದ ಸರ್ವೆ ನಂ. 27ರಲ್ಲಿ 1.35 ಎಕರೆ, ಸರ್ವೆ ನಂ. 116ರಲ್ಲಿ 1.29 ಎಕರೆ ಹಾಗೂ ಸರ್ವೆ ನಂ. 34/1ರಲ್ಲಿ 1.38 ಎಕರೆ ಖರೀದಿಸಿದನೋ, ಆಗ ಷೇರುದಾರರಲ್ಲಿ ಹಲವರು ನಾಳೆಯೇ ತಮಗೆ ಸೈಟು ಸಿಗು[...] ಆಸೆಯಿಂದ ಪೂರ್ತಿ ಹಣ ಕಟ್ಟಿಬಿಟ್ಟರು. ಅದಾಗಿ 5-6 [...] ಕಳೆದರೂ ಒಬ್ಬರಿಗೂ ಸೈಟು ಹಂಚಿಲ್ಲ. "ನಾನು ಖರೀದಿಸಿದ[...] ಎಕರೆ ಜಮೀನು ಇನ್ನೂ ಹಸಿರುವಲಯದಲ್ಲಿದೆ. ನಗರಾ[...] ಪ್ರಾಧಿಕಾರ ಕೂಡ ಹಸಿರುವಲಯದಿಂದ ವಸತಿವಲಯಕ್ಕೆ ಮಾ[...] ಮಾಡಲು ಇಷ್ಟು ವರ್ಷಗಳಾದರೂ ಅನುಮತಿ ನೀಡಿಲ್ಲ" [...] ಸಿದ್ದರಾಜು ಬೂಸಿ ಬಿಡಲು ಆರಂಭಿಸಿದ. ಇದರಿಂದ ಸಿಟ್ಟಾದ [...] ಬಾಲು ಮತ್ತು ಇತರರು ಸಿದ್ದರಾಜು ಜೊತೆ ಜಗಳವಾಡಿ [...] ಕಟ್ಟಿದ್ದ ಹಣವನ್ನು ವಾಪಸ್ ಪಡೆದರು. ಈಗ ಇತರರೂ [...] ಕೇಳಿದರೆ "ಇನ್ನೂ ಸ್ವಲ್ಪ ದಿನ ಕಾಯಿರಿ. ಸೈಟು ಸಿಗುತ್ತದೆ" [...] ಬೆಣ್ಣೆ ಹಚ್ಚುತ್ತಿದ್ದಾನೆ ಸಿದ್ದರಾಜು. ಇಂದಲ್ಲ ನಾಳೆ ಸೈಟು ಸಿ[...] ಎಂಬ ಆಸೆಯಿಂದ ದುಡ್ಡು ಕಟ್ಟಿರುವ ಸದಸ್ಯರು ಇಂಗು [...] ಮಂಗಗಳಂತೆ 6-7 ವರ್ಷಗಳಿಂದ ಕಾಯುತ್ತಿದ್ದಾರೆ. ಸದಸ್ಯರಿಗೆ [...] ಸೈಟು ಕೊಡದ ಸಿದ್ದರಾಜು ಅಶೋಕ್‌ನಗರ ಮೂರನೇ ಕ[...] ಭರ್ಜರಿ ಬಂಗಲೆ ಎಬ್ಬಿಸುತ್ತಿದ್ದಾನೆ.

ರಾಜಕಾರಣಿ ಗೆಟಪ್

ವಾಮಮಾರ್ಗದಲ್ಲಿ ಗಳಿಸಿರುವ ಹಣ-ಆಸ್ತಿಯನ್ನು ಕಾಪಾಡಿ[...] ಉದ್ದೇಶದಿಂದ ರಾಜಕಾರಣಿಯ ಗೆಟಪ್ ಹಾಕಿದ ಸಿದ್ದರಾಜು, [...] ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕನಾಗಿ ಆಯ್ಕೆ[...] ನಂತರ 'ಮನಿಪವರ್' ತೋರಿಸಿ ವಿಧಾನ ಪರಿಷತ್ ಸದಸ್ಯರಾ[...] ಸಂದೇಶ್ ನಾಗರಾಜ್ ಅವರಿಗೆ ಕೈಕೊಟ್ಟು ರಾಜ್ಯ ಅಪೆಕ್ಸ್ ಬ[...] ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ನೇಮಕಗೊಂಡ. ನುರಿತ ರಾಜಕಾರ[...] ಅಂತಹ ಸಂದೇಶ್ ನಾಗರಾಜ್‌ಗೆ ಟಾಂಗ್ ಕೊಟ್ಟ ಸಿದ್ದರಾಜು [...] ಖತರ್ನಾಕ್ ಎಂಬುದು ಜನರಿಗೆ ಗೊತ್ತಾಗಿದೆ.

ಅಧ್ಯಕ್ಷನಾಗಲು ಕಸರತ್ತು

ಕಳೆದ ನಗರಸಭೆ ಚುನಾವಣೆಯಲ್ಲಿ 28ನೇ ವಾರ್ಡ್‌ನಿಂದ ಸ್ಪ[...] ತಯಾರಾದ 'ವೋಟಿಗೆ ನೋಟು' ಸಿದ್ಧಾಂತದ ಪ್ರತಿಪಾದಕನಾದ ಸಿ[...] ಒಂದು ವೋಟಿಗೆ ಸಾವಿರ ಕೊಟ್ಟು ಪಕ್ಷೇತರನಾಗಿ ಗೆದ್ದು ಬಂದ[...] ಅದೇ ಹಣದ ಥೈಲಿಯ ನೆರವಿನಿಂದ ಅಧ್ಯಕ್ಷನಾಗಲು ಸಿದ್ಧವಾ[...] 'ರೊಕ್ಕ ಚೆಲ್ಲಿಯೇ ನಗರಸಭೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಬ[...] ಮಾಡಿಸಿಕೊಂಡು ಬಂದಿದ್ದೇನೆ' ಎಂದು ಡಂಗೂರ ಬಾರಿಸು[...] ಸಿದ್ದರಾಜು ತನ್ನ 'ಮನಿಪವರ್'ನಿಂದ ಕಾಂಗ್ರೆಸ್ ಹಾಗೂ [...] ಸದಸ್ಯರಲ್ಲಿ 7-8 ಮಂದಿ ಬಿಟ್ಟರೆ ಉಳಿದ ಎಲ್ಲಾ ಸದಸ್ಯರಿಗೂ [...] ಲಕ್ಷ ರೂ.ಗಳನ್ನು ನೀಡಿ ಬುಕ್ ಮಾಡಿಕೊಂಡಿದ್ದಾನೆ. ತಾನು ಆ[...] ಆಯ್ಕೆಯಾದ ನಂತರ ಇನ್ನೂ ನಾಲ್ಕು ಲಕ್ಷ ರೂಪಾಯಿಗಳನ್ನು ನೀಡು[...] ಹೇಳಿದ್ದಾನೆಂದು ನಗರಸಭಾ ಸದಸ್ಯರೇ ಪಿಸುಗುಡುತ್ತಿದ್ದಾರೆ. ಜಿಲ್ಲಾ ಉ[...] ಸಚಿವ ಅಂಬರೀಶ್ ಅವರ ಭಟ್ಟಂಗಿಗಳಾದ ಸಾತನೂರು [...] ರವಿಶಂಕರೇಗೌಡ, ಅಂಬುಜಮ್ಮನ ಅಳಿಯ ಚಂದ್ರ, ಪುರುಷೋ[...] ಅಪ್ಪು ಶಂಕರ, ಕಲ್ಲಳ್ಳಿ ಚಂದ್ರ ಮೊದಲಾದವರು ಸಿದ್ದರಾಜುನನ್ನು [...] ಸ್ಥಾನದಲ್ಲಿ ಕೂರಿಸಿ ನಗರಸಭೆ ಮುಂಡಾಮೋಚಲು ಸ್ಕೆಚ್ ಹಾ[...] ಅಂಬಿಯ ಬಲಗೈ ಭಂಟ ಅಮರಾವತಿ ಚಂದ್ರಶೇಖರ್‌ನೊಂದಿಗೆ [...] ಕುದುರಿಸಿಕೊಂಡಿರುವ ಸಿದ್ದರಾಜು ಎಷ್ಟೇ ಖರ್ಚಾದರೂ [...] ಅಧ್ಯಕ್ಷನಾಗಲೇಬೇಕೆಂದು ಹಣದ ಹೊಳೆಯನ್ನೇ ಹರಿಸುತ್ತಿದ್ದಾ[...]

ಅಂಬಿಗೆ ಕೆಟ್ಟ ಹೆಸರು ಗ್ಯಾರಂಟಿ

ಅಂಬಿಗೆ ಆಪ್ತನಾಗಿದ್ದ ಕೆಬ್ಬಳ್ಳಿ ಆನಂದ್ ಮಂಡ್ಯ ನಗರ[...] ಪ್ರಾಧಿಕಾರ ಹಾಗೂ ರಾಮನಗರ-ಚನ್ನಪಟ್ಟಣ ಪ್ರಾಧಿ[...] ಆಯುಕ್ತರೊಂದಿಗೆ ಸೇರಿಕೊಂಡು 21 ಕೋಟಿ ಸಾರ್ವಜನಿಕರ ಹ[...] ತಿಂದು ಹಾಕಿ ಅಂಬಿ ಗೌರವನ್ನು ಅರ್ಧಭಾಗ ಕಳೆದಿದ್ದಾನ[...] ಅಂಬಿಯ ಜೊತೆಗಿರುವ ಭಟ್ಟಂಗಿ ಶಿಷ್ಯ ಪಡೆಯೇ ಸಿದ್ದರಾ[...] ತಾಂಬೂಲ ತಿಂದು ಆತನನ್ನು ನಗರಸಭೆ ಅಧ್ಯಕ್ಷಗಾದಿಗೇರಿಸಿ ಅ[...] ಗೌರವವನ್ನು ಮತ್ತಷ್ಟು ಹಾಳು ಮಾಡಲು ನಿಂತಿದ್ದಾರೆ. ಒಂದ[...] ಅಂಬರೀಶ್ ತನ್ನ ಭಟ್ಟಂಗಿಗಳ ಮಾತು ಕೇಳಿ ರಿಯಲ್ [...] ಹಾಗೂ ಬಡ್ಡಿ ದಂಧೆಯ ಸಿದ್ದರಾಜುನನ್ನು ಅಧ್ಯಕ್ಷರನ್ನಾಗಿ ಮ[...] ನಗರಸಭೆ ಈ ಅವಧಿಯಲ್ಲೂ ನರಕಸಭೆಯಾಗುವುದು ಗ್ಯಾರ[...]

ಈ ಬಗ್ಗೆ ಉಸ್ತುವಾರಿ ಸಚಿವ ಅಂಬರೀಶ್ ಗಂಭೀರವಾಗಿ ಆ[...] ಪಕ್ಷೇತರ ಸದಸ್ಯ ಸಿದ್ದರಾಜುಗೆ ಮಣೆಹಾಕದೆ ಆತನನ್ನು ದೂ[...] ಅವರಿಗೂ ಒಳ್ಳೆಯದು. ಮಂಡ್ಯ ನಗರಕ್ಕೂ ಒಳ್ಳೆಯದು.

● ನಾ[...]



ಬಹುದೆನ್ನುವ ದೂರು ಕೇಳಿಬಂದಿರುವುದರಿಂದ ಲಕ್ನೋದ 'ನ್ಯಾಶನಲ್ ರಿಸರ್ಚ್ ಲ್ಯಾಬೊರೇಟರಿ ಫಾರ್ ಕನ್ಸರ್ವೇಶನ್ ಆಫ್ ಕಲ್ಚರಲ್ ಪ್ರಾಪರ್ಟಿ (NRLC)' ಸಂಸ್ಥೆಯಿಂದ ತಜ್ಞರನ್ನು ಕರೆಸಿ ಬಳಸಲಾಗಿರುವ ಚಿನ್ನದ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತಿದೆ. ಅಂದಹಾಗೆ ದರ್ಬಾರ್ ಹಾಲ್‌ನ ಲೇಪನಕ್ಕೆಂದು ಬಳಕೆಯಾಗಿರೋದು ಎಂಟು ಕೆ.ಜಿ. ಬಂಗಾರ. ಕೆಲವೇ ಗ್ರಾಮ್‌ಗಳಷ್ಟು ಗೋಲ್‌ಮಾಲ್ ನಡೆದರೂ ಲಕ್ಷಾಂತರ ಹಣ ಅನಾಯಾಸವಾಗಿ ಕೈ ಸೇರಿಬಿಡುತ್ತೆ.

ಸ್ಟೆನೋ ಸುಬ್ರಹ್ಮಣ್ಯ ಡೈರೆಕ್ಟರ್ ಆದ!

ಮೈಸೂರು ಅರಮನೆ ಉಸ್ತುವಾರಿ ಸಮಿತಿಯ ಡೆಪ್ಯುಟಿ ಡೈರೆಕ್ಟರ್ ಆಗಿ ಟಿ.ಎಸ್. ಸುಬ್ರಹ್ಮಣ್ಯನನ್ನು ನೇಮಿಸಿರುವುದೆ ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುವಂತಿದೆ. ಯಾಕೆಂದರೆ ಇದಕ್ಕೂ ಮುನ್ನ ಈತ ಬಿ.ಜೆ.ಪಿ.ಯ ಎಂ.ಎಲ್.ಸಿ ತೋಂಟದಾರ್ಯನ ಪರ್ಸನಲ್ ಅಸಿಸ್ಟೆಂಟ್ ಆಗಿದ್ದವ, ಅದಕ್ಕೂ ಮುನ್ನ ಚಾಮರಾಜೇಂದ್ರ ಅಕ್ಯಾಡೆಮಿ ಆಫ್ ವಿಶುಯಲ್ ಆರ್ಟ್ಸ್ (CAVA) ಸಂಸ್ಥೆಯಲ್ಲಿ ಸ್ಟೆನೋಗ್ರಾಫರ್ ಆಗಿದ್ದವ ಅರಮನೆ ಉಸ್ತುವಾರಿ ಸಮಿತಿಯ ಡೆಪ್ಯುಟಿ ಡೈರೆಕ್ಟರ್ ಹುದ್ದೆಗೇರಿದ್ದ. ಹಾಗಾಗಿ ಇಡೀ 'ಗೋಲ್ಡ್ ಪ್ಲೇಟಿಂಗ್'

ಹಗರಣ ವ್ಯವಸ್ಥಿತ ಸಂಚು ಎನ್ನುವಂತೆಯೇ ಕಾಣುತ್ತದೆ. ಲೋಕಾ[...] ಎಸ್.ಪಿ. ಜಗದೀಶ್ ಪ್ರಸಾದ್‌ರು ತನಿಖೆ ಪ್ರಾಮಾಣಿಕವಾಗಿ ಪೂರ್ಣಗೊ[...] ಮಾತ್ರ ಇದರ ಹಿಂದಿರುವ ಘಟಾನುಘಟಿಗಳು ಆಚೆಗೆ ಬರಬ[...] ಅದಕ್ಕೂ ಮುನ್ನ 'ದಸರಾ ಉತ್ಸವ' ಹಾದುಹೋಗುವುದರಿಂದ ಆ ಅ[...] ಪ್ರಕರಣವನ್ನು 'ಡೈಲ್ಯೂಟ್' ಮಾಡುವ ಪ್ರಯತ್ನಗಳು ನಡೆದರೂ ಅಚ್ಚ[...]

– ಗಿರೀಶ್ ತಾಳಿ[...]



...ತ್ತರ ಕನ್ನಡ: ಗೂಟದ ಕಾರಿಗಾಗಿ ಚೋಟುಗಳ ಗುದ್ದಾಟ!



...ತ್ತರ ಕನ್ನಡ ಕಾಂಗ್ರೆಸ್‌ನ ಚೋಟಾ-ಮೋಟಾ ...ಡ ಮಣಿಗಳೀಗ ತೇಜಿಯಲ್ಲಿದ್ದಾರೆ ! ನಿಗಮ-...ಪ್ರಾಧಿಕಾರದ ಗೂಟದ ಕಾರಿನ ಕನಸು ಕಾಣುತ್ತಿರುವ ...ಾರು 500 ಮರಿ ಪುಢಾರಿಗಳು ತರಹೇವಾರಿ ... ಶುರು ಹಚ್ಚಿಕೊಂಡಿದ್ದಾರೆ.

...ತ್ತರ ಕನ್ನಡ ಕಾಂಗ್ರೆಸ್‌ನ ಅನಿವಾರ್ಯ ಅನಿಷ್ಟ ...ಾನರಂತಾಗಿರುವ ಸಚಿವ ಆರ್.ವಿ. ದೇಶಪಾಂಡೆ ... ವೈರಿಣಿ ಸ್ಥಳೀಯ ಮಾಜಿ ಎಂಪಿ-ಹಾಲಿ ರಾಜಸ್ತಾನ ...ಲೆ ಮಾರ್ಗರೆಟ್ ಆಳ್ವರ ಸುತ್ತ ಅಧಿಕಾರ ...ದಾರರು ಗಿರಕಿ ಹೊಡೆಯುತ್ತಿದ್ದಾರೆ.

...ಕಾರ ಇಲ್ಲದೆ 'ಬರ' ಬಿದ್ದಾಗಲೇ ಐರಾವಣ-...ಣ ಮಂಡಳಿಗಳಾಗಿ ಹಗಲಿರುಳೂ ಕಚ್ಚಾಡಿದ ...ದೇಶಪಾಂಡೆ ಅನುಯಾಯಿಗಳು ಅಧಿಕಾರಸ್ಥ ಪಕ್ಷವಾದ ... ಕಾಲದಲ್ಲಿ ಸುಮ್ಮನಿರಲು ಸಾಧ್ಯವಾ? ಈಗ ಈ ... ಗ್ಯಾಂಗ್‌ಗಳ ವಾರ್ ಕ್ಲೈಮಾಕ್ಸ್ ತಲುಪಿಬಿಟ್ಟಿದೆ. ... ಲೋಕಸಭೆ ಎಲೆಕ್ಷನ್‌ಗಾಗಿ ಪಾರ್ಟಿ ಅಭ್ಯರ್ಥಿ ...ವುದಕ್ಕಾಗಿ ಬಣ ಬಡಿದಾಟ ನಡೆಯುತ್ತಿದ್ದರೆ, ...ದೆಡೆ ಕಾರ್ಪೊರೇಷನ್-ಬೋರ್ಡ್ ಗದ್ದುಗೆಗಾಗಿ ದೇಶಪಾಂಡೆ ಕತ್ತಿವರಸೆಗೆ ಇಳಿದಿದ್ದಾರೆ!


...ಕಾರಕ್ಕಾಗಿ ಹಾತೊರೆಯುತ್ತಿರುವ 'ನೋಟೆಡ್' ...ರಲ್ಲಿ ಎದ್ದು ಕಾಣುತ್ತಿರುವಾತ ಜಿಲ್ಲಾ ಕಾಂಗ್ರೆಸ್‌ನ ...ಭೀಮಣ್ಣ ನಾಯ್ಕ್!! ಈತ 'ಬಂ'ರ ಭಾಮೈದ ...ಯ ತಮ್ಮ). 'ಬಂ'ರ ಮನೆ ಮಗನಂತಾಗಿ ಜಿಲ್ಲೆಯ ...ಯ ಪಡಸಾಲೆಯಲ್ಲಿ ಬೆಳೆದವನು. ಆದರೆ ಭಾವ ...ಕೊನೆಗಾಲದಲ್ಲಿ ಜೆಡಿಎಸ್ ಸೇರಿದಾಗ ಕೈಕೊಟ್ಟು ...ಪಾಂಡೆಯ ದಾಸನಾಗಿ ಕಾಂಗ್ರೆಸ್‌ನಲ್ಲೇ ...ಕೊಂಡಿದ್ದ. ಈಗ ದೇಶಪಾಂಡೆಯನ್ನು ನಂಬಿ ಕೆಟ್ಟೆ ... ಹಲಬುತ್ತಿದ್ದಾನೆ ಭೀಮಣ್ಣ ನಾಯ್ಕ್.


...ಗಮ ಅಥವಾ ಮಂಡಳಿಯ ಗೂಟದ ಕಾರಿನ ... ಆಕಾಂಕ್ಷಿಯಾಗಿರುವ ಭೀಮಣ್ಣನಿಗೆ ನಯವಂಚಕ ...ಪಾಂಡೆ ಆ ಸ್ಥಾನ ಕೊಡಿಸಬಹುದೆಂಬ ಭರವಸೆ ...ಲ್ಲ. ಅತ್ತ 'ಬಂ' ಭಾಮೈದನೆಂಬ ಕಾರಣಕ್ಕೆ ...ಯೂ ಈತನಿಗೆ ಹಣಿಯಲು ಹವಣಿಸುತ್ತಿದ್ದಾರೆ. ... ಭೀಮಣ್ಣ ಈಗ 'ಹೋರಾಡಿ' ಅಧಿಕಾರಕ್ಕೇರುವ ...ಕ್ಕೆ ಬಂದಿದ್ದಾರೆ. ಅಂತೆಯೇ ಆತ ತನಗೇ ಕೆನರಾ ...ಸಭೆ ಕಾಂಗ್ರೆಸ್ ಟಿಕೆಟ್ ಬೇಕೆಂದು ದಾಳ ...ಸಿದ್ದಾರೆ. ಇದು ತನ್ನ ಮಗನನ್ನೇ ಪ್ರಶ್ನಾತೀತ ...ಮೆಂಟ್ ಕ್ಯಾಂಡಿಡೇಟಾಗಿಸುವ ಪ್ರಯತ್ನದಲ್ಲಿದ್ದ ...ಂಡೆಯನ್ನು ಬೆಚ್ಚಿಬೀಳಿಸಿದೆ. ಬಹುಸಂಖ್ಯಾತ ದೀವರು ... ಸಮುದಾಯದ ಭೀಮಣ್ಣ ಹೀಗೆ ತಿರುಗಿಬಿದ್ದರೆ ...ಮಗನ ಭವಿಷ್ಯಕ್ಕೆ ಮಾರಕವೆಂಬ ಆತಂಕ ...ಂಡೆಜೀಯದು.


...ಗಂತ ಭೀಮಣ್ಣನಿಗೇನು ಎಂಪಿ ಆಗುವ ಆಸೆಯೂ ...ಕಾಸು ಎಂಪಿ ಟಿಕೆಟ್ ಕೇಳಿದರೆ ದೇಶಪಾಂಡೆ ...ವಾದರೂ ನಿಗಮದ ಅಧ್ಯಕ್ಷತೆ ಕೊಡಿಸುವ ಇಕ್ಕಟ್ಟಿಗೆ ...ತ್ತಾನೆಂಬುದು ಭೀಮಣ್ಣ ಲೆಕ್ಕಾಚಾರ. ಆದರೆ ...ದವರಿಗೆ ಅಲ್ಲಿಂದಿಲ್ಲಿಗೂ ಮೋಸ-ವಂಚನೆ ಮಾಡಿ ... ಪಕ್ಕಿಕ್ಕಿ ಹೊರಿಸಿಕೊಳ್ಳುತ್ತ ಬಂದಿರುವ ...ಂಡೆಯನ್ನು ಭೀಮಣ್ಣನಂಥ ಪೆದ್ದು ಶೂದ್ರನಿಂದ ... ಸಿಂಭಿಕ್ಕಿ ಹಣಿಗಿಸಲು ಸಾಧ್ಯವಿಲ್ಲ. ದೇಶಪಾಂಡೆ-... ಗುಂಪಿನ ಪರಸ್ಪರ ಅಪನಂಬಿಕೆ- ಅಸಮಾಧಾನ ...ಸಿ ಅಂತಿಮವಾಗಿ ಭೀಮಣ್ಣ ಅಳಿಯ ಮಧು ...ಗಳ ಪಾದಕ್ಕೆ ಬಿದ್ದು ಜನತಾದಳ ಸೇರಿ ಕೆನರಾದಿಂದ ... ಎಂಪಿ ಕ್ಯಾಂಡಿಡೇಟಾಗುವ ಸಾಧ್ಯತೆ ಈಗಲೇ ... ಗೋಚರಿಸುತ್ತಿದೆ...


...ಯೆಯ ದಾದಾಗಿರಿಯಿಂದ ಹೈರಾಣಾಗಿರುವ ...ಂಗ್ರೆಸ್‌ನ ಹಿಂದುಳಿದವರು (ಅದರಲ್ಲೂ ...ಗಿ ದೀವರು) ಒಂದಾಗಿ ಆತನ ಮೇಲೆ ಮುಗಿಬೀಳಲು ಅಣಿಯಾಗುತ್ತಿದ್ದಾರೆ. ಆತನ ಮಗನಿಗೆ ಎಂಪಿ ಟಿಕೆಟ್ ಕೊಡಲೇಬಾರದೆಂದು ಕೂಗಾಡುತ್ತಿದ್ದಾರೆ. ದೇವರಾಯನಾಯ್ಕ ನಂತರ- ಅಂದರೆ ಸುಮಾರು ಒಂದೂ ಮುಕ್ಕಾಲು ದಶಕದಿಂದ- ಕಾಂಗ್ರೆಸ್‌ನಲ್ಲಿ ದೀವರಿಗೆ ಎಂಪಿಗಿರಿ ಟಿಕೆಟ್ ಸಿಗದಂತೆ ಮಾಡಲಾಗಿದೆ. ಹೀಗಾಗಿ ದೀವರು ಈ ಸಲ ತಮಗೇ ಛಾನ್ಸ್ ಕೊಡುವಂತೆ ಕೇಳುತ್ತಿದ್ದಾರೆ. ಅವರೆಲ್ಲ ಎಐಸಿಸಿ ಪ್ರಧಾನ ಕಾರ್ಯದರ್ಶಿ-ದಕ್ಷಿಣ ಕನ್ನಡ ಮೂಲದ ಬಿಲ್ಲವ (ಈಡಿಗ) ಬಿ.ಕೆ. ಹರಿಪ್ರಸಾದ್‌ಗೆ ಟಿಕೆಟ್ ಕೊಡುವಂತೆ ಆಗ್ರಹಿಸುತ್ತಿದ್ದಾರೆ. ಈ ಬಂಡಾಯದ ಗುಂಪಿನ ಲೀಡರಿಕೆ ಸಾಕ್ಷಾತ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣನೇ ತೆರೆಮರೆಯಲ್ಲಿ ನಿಭಾಯಿಸುತ್ತಿದ್ದಾರೆ.


ಒಂದು ಕಾಲದಲ್ಲಿ ಮ್ಯಾಗಿ ಕ್ಯಾಂಪಿನ ಸೇನಾಧಿಪತಿಯಂತೆ ಕಂಗೊಳಿಸಿದ್ದ, ಸ್ವಯಂಘೋಷಿತ ಹಿಂದುಳಿದವರ ಛಾಂಪಿಯನ್ ರವೀಂದ್ರನಾಥ್ ನಾಯ್ಕ್ ಯಾನೆ ಎ. ರವೀಂದ್ರ ಎಂಬ ಹಾರಾಟದ ಹುಡುಗನೂ ಈ ಭೀಮಣ್ಣ ಬಳಗ ಸೇರಿಕೊಂಡಿದ್ದಾನೆ. ಮ್ಯಾಗಿ ಕೃಪೆಯಿಂದ ಒಂದು ಬಾರಿ ಶಿರಸಿ ಅಸೆಂಬ್ಲಿ ಟಿಕೆಟ್ ಮತ್ತು ಕಂತೆ-ಕಂತೆ ಹಣ ಕಂಡ ರವೀಂದ್ರ ತಾನೂ ಎಂಪಿಗಿರಿ ಟಿಕೆಟ್ ಆಕಾಂಕ್ಷಿ ಎಂದು ಗುಟುರು ಹಾಕುತ್ತಿದ್ದಾನೆ. ಅಪ್ಪಟ ಸಮಯಸಾಧಕತನವನ್ನೇ ಸಿದ್ಧಾಂತ ಮಾಡಿಕೊಂಡಿರುವ 'ಫ್ಲೋಟೋ ಮೇನಿಯಾ'ದ ರವೀಂದ್ರ ನಾಯ್ಕ ಈಗ ಮ್ಯಾಗಿ ಕೆಂಗಣ್ಣಿಗೆ ತುತ್ತಾಗಿದ್ದಾನೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಿರಸಿಯಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದ ತನ್ನ ಬಲಗೈ ಬಂಟ ದೀಪಕ್ ಹೊನ್ನಾವರನಿಂದ ಕಾಸು ಪಡೆದು ಆತನಿಗೆ ರವೀಂದ್ರ ನಾಯ್ಕ್ ಬತ್ತಿ ಇಟ್ಟಿದ್ದನೆಂಬ ಸಿಟ್ಟು ಮ್ಯಾಗಿಯಲ್ಲಿ ಬುಸುಗುಡುತ್ತಿದೆ. ಇದು ಗೊತ್ತಾಗಿ ಅತಂತ್ರನಾಗಿರುವ ರವಿ ಮ್ಯಾಗಿ ಮಗನಿಗೆ ಎಂಪಿ ಟಿಕೆಟ್ ಬೇಡ, ದೀವರ ಧೀರನಾದ ತನಗೇ ಕೊಡಿ ಎಂದು ದೊಡ್ಡವರ ಮುಂದೆ ಅಳಲು ಮಂಡಿಸಿದ್ದಾರೆ.

















ಹಾಗೆ ನೋಡಿದರೆ ರವಿಯದೂ ಮಂಡಳಿ ಗದ್ದುಗಾಗಿನ ಬೆದರಿಕೆ ತಂತ್ರವೇ. ಎಂಪಿಗಿರಿ ಟಿಕೆಟ್ ಕೇಳಿದರೆ ಕನಿಷ್ಠ ಮಂಡಲಾಧಿಪತಿಯಾದರೂ ಆಗಬಹುದೆಂಬ ದೂ(ದು)ರಾಲೋಚನೆ. ಎಐಸಿಸಿಯಲ್ಲಿ ಪ್ರಬಲವಾಗಿರುವ ಹರಿಪ್ರಸಾದ್ ಎಂಬ ಸ್ವಜಾತಿ ಬಂಧು ಪರ ಲಾಬಿ ಮಾಡಿದರೆ ಕಾರ್ಪೊರೇಷನ್ ಟ್ರಿಕ್ಕು ವರ್ಕ್‌ಔಟ್ ಆಗಬಹುದೆಂಬ ಆಸೆ ರವಿನಾಯ್ಕನಿಗೆ. ಕಳೆದ ಎರಡೂವರೆ ದಶಕದಿಂದ ತರಹೇವಾರಿ ಶೋ ಮಾಡುತ್ತ ಬಂದಿರುವ ರವಿಯ ಥೈಲಿ ಮೂಲ ಇವತ್ತಿಗೂ ನಿಗೂಢವಾಗಿದೆ. ಒಂದು ಕಾಲದಲ್ಲಿ ಹೋ(ಹಾ)ರಾಟಕ್ಕೆಂದು ಅಲ್ಲಿಲ್ಲಿ ಬೇಡುತ್ತಿದ್ದ ರವಿ ಈಗ ಭರ್ಜರಿ ಬಂಗಲೆ ಕಟ್ಟಿಕೊಂಡು, ಕಾರಿಟ್ಟುಕೊಂಡು ಪಾದಯಾತ್ರೆ ರಾಜಕೀಯ ಮಾಡುತ್ತಿರುವುದು ಆತನ ಸ್ವಜಾತಿ ಬಂಧುಗಳಿಗೇ ಬಿಡಿಸಲಾಗದ ಒಗಟಾಗಿದೆ! ಹೀಗಾಗಿ ರವಿಗಿಂತ ಹರಿಯೇ ಎಂಪಿಯಾಗಲು ಅರ್ಹ-ವಿಶ್ವಾಸಾರ್ಹ ಎಂದವರು ಹೇಳುತ್ತಿದ್ದಾರೆ.


ಎಐಸಿಸಿಯಲ್ಲಿ ಅಳಿದುಳಿದಿರುವ ಶಕ್ತಿಯಿಂದ ಹಿಂಬಾಗಿಲ ರಾಜಕಾರಣ ಮಾಡುತ್ತಿರುವ ಮ್ಯಾಗಿ ತನ್ನ ಮಗನಿಗೆ ಎಂಪಿಗಿರಿ ಟಿಕೆಟ್ ತರುವ ಫೈಟಿಂಗ್‌ನಲ್ಲಿ ಬೆಂಬಲಿಸುವವರಿಗೆ ಕಾರ್ಪೊರೇಷನ್ ಮತ್ತಿತರ ಅಧಿಕಾರ ಕುರ್ಚಿ ಕೊಡಿಸಲು ಒಂದು ಲಿಸ್ಟ್ ಮಾಡಿಟ್ಟುಕೊಂಡಿದ್ದಾರೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯ ಕಾಗೇರಿ ಎದುರು ಕೇವಲ ಮೂರೂವರೆ ಸಾವಿರ ಮತದಂತರದಿಂದ ಸೋತಿದ್ದ ಮ್ಯಾಗಿಯ ಶಿಷ್ಯ ದೀಪಕ್ ಹೊನ್ನಾವರ ಸೋತ ಗಳಿಗೆಯಲ್ಲೇ ಕೆಂಪು ದೀಪದ ಸರ್ಕಾರಿ ಕಾರಲ್ಲಿ ಒಂದೇ ಒಂದು ತಿಂಗಳಲ್ಲಿ ಬರ್ತೇನೆಂದು ಅಬ್ಬರಿಸಿದ್ದ. ದೇಶಪಾಂಡೆಗೆ ಮಂತ್ರಿಗಿರಿಯೇ ಕೊಡಬಾರದೆಂದು ಕೂಗಾಡಿದ್ದ. ಈತ ಎಲೆಕ್ಷನ್ ಆದ ಎರಡೇ ತಿಂಗಳಲ್ಲಿ ನಡೆದ ಕಾರ್ ಅಪಘಾತದಲ್ಲಿ ಅಸು ನೀಗಿಬಿಟ್ಟ. ಇಲ್ಲದಿದ್ದರೆ ಮ್ಯಾಗಿ ಈತನಿಗೊಂದು ನಿಗಮದ ಗದ್ದುಗೆ ಖಂಡಿತ ಕೊಡಿಸುತ್ತಿದ್ದರು. ಸಾಯುವ ಹೊತ್ತಲ್ಲಿ ಈತ ಮಹಿಳಾ ಅರಣ್ಯಾಧಿಕಾರಿಯೊಂದಿಗೆ ಗೋವಾದತ್ತ ಏಕೆ ಹೊರಟಿದ್ದನೆಂಬುದು ಇವತ್ತಿಗೂ ಅನೇಕಾನೇಕ ಅರ್ಥ-ಅಪಾರ್ಥಕ್ಕೆಡೆ ಮಾಡಿದೆ. ಇದಕ್ಕೆ ಕಾರಣ ಈ ರೌಡಿಶೀಟರ್‌ನ ರಂಗೀಲಾ ರಗಳೆಗಳು. ಇಂಥವರೇ ಜಿಲ್ಲೆಯಲ್ಲಿ ಮ್ಯಾಗಿ ಬಂಟರೆಂಬುದು ಕಹಿ ವಾಸ್ತವ.

ಮ್ಯಾಗಿ ಈಗ ಬೆಳ್ಳಿ-ಬಂಗಾರ ಕಳ್ಳ ಸಾಗಾಣಿಕೆಯಲ್ಲಿ 'ಹೆಸರು' ಮಾಡಿದ್ದ ಕುಮಟೆಯ ಮೋಂಟಿ ಫರ್ನಾಂಡಿಸ್, ಸಿದ್ಧಾಪುರದ ವಿ.ಎಸ್. ನಾಯ್ಕ್, ಅಂಕೋಲೆಯ ಸಾಯಿ ಗಾಂವ್ಕರ್, ಕಾರವಾರದ ಅಶೋಕ್ ನಾಯಕ್, ಯುವ ಕಾಂಗ್ರೆಸ್‌ನ ನಾಗರಾಜ ಮಡಿವಾಳ... ಮುಂತಾದವರ ಬಯೋಡಾಟಾ ತರಿಸಿಕೊಂಡಿದ್ದಾರೆಂಬ ಸುದ್ದಿ ಹಬ್ಬಿದೆ. ಕುಮಟಾದ 'ಸಿಜರೀನ್' ವೈದ್ಯ ಡಾ. ಜಿ.ಜಿ. ಹೆಗಡೆ ಜೈಪುರಕ್ಕೇ ಹೋಗಿ ಮ್ಯಾಗಿಗೆ ಉದ್ದಂಡ ನಮಸ್ಕಾರ ಮಾಡಿಬಂದಿದ್ದಾರೆ. ಲ್ಯಾಂಡ್ ಟ್ರಿಬ್ಯೂನಲ್ ಮೆಂಬರಿಕೆಗೂ ಅಯೋಗ್ಯನಾದ ಹೆಗಡೆ ನಿಗಮ-ಮಂಡಳಿಗಾಗಿ ಮಸಲತ್ತು ಮಾಡುತ್ತಿರೋದು ಮೋಜಾಗಿದೆ. ಮ್ಯಾಗಿ ಮತ್ತು ದೇಶಪಾಂಡೆ ಇಬ್ಬರಿಗೂ ಸಲ್ಲುವ ಪುಢಾರಿಯಾಗುವ ಭರದಲ್ಲಿ ಹೆಗಡೆ ಎಲ್ಲೂ ಸಲ್ಲದೇ ಆಸ್ಪತ್ರೆಗಷ್ಟೇ ಸೀಮಿತನಾಗುವ ಸಾಧ್ಯತೆಯೇ ಜಾಸ್ತಿ ಬಿಡಿ!

ದೇಶಪಾಂಡೆ ನಂಬಿ ಕೂತವರ ದೊಡ್ಡ ತಂಡವೇ ಇದೆ. ಆತನ ಪೂರ್ವಾಶ್ರಮ (ಜನತಾ ದಳ)ದ ಅನುಯಾಯಿಗಳಾದ ಯಲ್ಲಾಪುರದ ಭಾಷಣಶೂರ ಪ್ರಮೋದ ಹೆಗಡೆ, ಅಂಕೋಲೆಯ ಸಜ್ಜನ್ ರಮಾನಂದ್ ನಾಯಕ್, ಭಟ್ಕಳದ ತಿರಸ್ಕೃತ ಮಾಜಿ ಶಾಸಕ ಜೆ.ಡಿ. ನಾಯ್ಕ್, ಶಿರಸಿಯ ಟಿಎಸ್‌ಎಸ್ ಚೋರ ಶಾಂತಾರಾಮ ಹೆಗಡೆ, ಮುಂಡಗೋಡಿನ ರಸಿಕ ಶಿಖಾಮಣಿ ಎಲ್.ಟಿ. ಪಾಟೀಲ, ಕುಮಟೆಯ ಎಡಬಿಡಂಗಿ ಸುಧಾಗೌಡ (ಕೊಪ್ಪಿಕರ್), ಹೊನ್ನಪ್ಪ ನಾಯಕ್... ಹೀಗೆ ಹಲವರು ತಮಗೊಂದು ಛಾನ್ಸ್ ದೇಶಪಾಂಡೆ ದೇವರು ಕರುಣಿಸಬಹುದೆಂದು ಬಾಯಿ ತೆರೆದುಕೊಂಡು ಕೂತಿದ್ದಾರೆ. ಇವರಲ್ಲಿ ರಮಾನಂದ ನಾಯಕ್ ಒಬ್ಬರ ಬಿಟ್ಟರೆ ಉಳಿದ್ಯಾರಿಗೂ ಕಾರ್ಪೊರೇಷನ್ ಚೇರ್ಮನ್‌ಗಿರಿಗೆ ಏರುವ ಯೋಗ್ಯತೆಯೇ ಇಲ್ಲ.

ರಮಾನಂದ ನಾಯಕ್ ಸುಶಿಕ್ಷಿತ, ಸಜ್ಜನ. ಮೊಟ್ಟಮೊದಲ ಜಿಲ್ಲಾ ಪರಿಷತ್‌ನ ಅಧ್ಯಕ್ಷನಾಗಿ ಸಮರ್ಥವಾಗಿ ಕೆಲಸ ಮಾಡಿದ ಜನಪರ ಧೋರಣೆಯ ಶುದ್ಧ ಹಸ್ತದ ರಮಾನಂದ ನಾಯಕ್‌ನನ್ನು ಕಳೆದ ಬಾರಿ ಅಸೆಂಬ್ಲಿ ಎಲೆಕ್ಷನ್‌ಗೆ ಕಾರವಾರದಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿ ಬಲಿಗೊಡಲಾಗಿತ್ತು. ಇಂಥ ನಿಷ್ಠಾವಂತ ನಾಯಕನಿಗೆ ದೇಶಪಾಂಡೆ ಅವಕಾಶ ಕೊಡುತ್ತಾರೆಂಬ ನಂಬಿಕೆ ಸ್ಥಳೀಯ ಕಾಂಗ್ರೆಸ್‌ನಲ್ಲಿ ಯಾರಿಗೂ ಇಲ್ಲ. ದೇಶಪಾಂಡೆಯ ಜಾತಿ ಪ್ರೀತಿ, ಪುಂಡ-ಪೋಕರಿ ಪ್ರೀತಿ, ಲೂಟಿಕೋರ ಜನ ದ್ರೋಹಿ ಪ್ರೀತಿ ಪುರಾಣವೇ ಅಂಥಾದ್ದು!!

ಯಲ್ಲಾಪುರದ ಪ್ರಮೋದ್ ಹೆಗಡೆ ಎಲ್ಲಿಯೂ ನೆಲೆಯಿಲ್ಲದೆ ದೇಶಪಾಂಡೆ ಪಾದವೇ ಗತಿಯೆಂದು ಕಾಂಗ್ರೆಸ್‌ಗೆ ತೀರಾ ಈಚೆಗಷ್ಟೇ ಸೇರಿಕೊಂಡಾತ. ದಿವಂಗತ ರಾಮಕೃಷ್ಣ ಹೆಗಡೇಜಿಯ 'ನಿಜ ವಾರಸುದಾರ' ತಾನೊಬ್ಬನೇ ಎಂದು ಪೋಸು ಕೊಡುವ ಪ್ರಮೋದ್ ಲೋಕಶಕ್ತಿ, ಜೆಡಿಎಸ್, ಕಾಂಗ್ರೆಸ್ ಎಂದು ಎರಡೆರಡು ಸಲ ಅಲ್ಲಿಗೆ ಹೋಗಿಬಂದಾತ. ದೇಶಪಾಂಡೆಯ ಕಟು ಟೀಕಾಕಾರನಾಗಿದ್ದ ಪ್ರಮೋದ್ ಆತನಿಂದ ಕಂಡ ಕಷ್ಟ-ನಷ್ಟ ಒಂದೆರಡಲ್ಲ. ಪ್ರಮೋದರ ಗತಕಾಲದ ಅಡ್ಡಕಸುಬು ಕತೆ ಏನೇ ಇರಲಿ. ಆತ ಜಿಲ್ಲೆಯ ಜನ ಜೀವನ, ಸಾಂಸ್ಕೃತಿಕ ಪರಂಪರೆಗಳ ಆಳ ಜ್ಞಾನ ಇರುವಾತನೆಂಬುದು ನಿಜ. ಆದರೆ ಬ್ರಾಹ್ಮಣಿಕೆ ದೋಷ ಆತನ ಸಕಲ ಜಾಣ್ಮೆಯನ್ನು ಅನುಮಾನಾಸ್ಪದ ಮಾಡಿಬಿಟ್ಟಿದೆ. ಆತ ಯಾಕೆ ಮತ್ತೆ ದೇಶಪಾಂಡೆ ಬಂಟನಾಗಿದ್ದಾನೋ ಆತನಿಗೊಬ್ಬನಿಗೇ ಗೊತ್ತು. ಲಾಗಾಯ್ತಿನಿಂದ ಪ್ರಮೋದ್ ಬೆಳೆಯದಂತೆ ಹೆಜ್ಜೆ-ಹೆಜ್ಜೆಗೆ ಚಿವುಟಿ ಹಾಕಿದ ದೇಶಪಾಂಡೆ ಈಗಾತನಿಗೆ ನಿಗಮ-ಮಂಡಳಿ ಕಾರು ಕೊಡಿಸಿಯಾರಾ? ಇದು ಮಿಲಿಯನ್ ಡಾಲರ್ ಸಂಶಯ ಕಾಂಗ್ರೆಸಿಗರ ಪಾಲಿಗೆ!!



ಭಟ್ಕಳದಲ್ಲಿ ಸೋತು ಮೂಲೆಗುಂಪಾಗಿರುವ ಮಾಜಿ ಶಾಸಕ ಜೆ.ಡಿ. ನಾಯ್ಕ ನಿಗಮಾಧಿಪತಿಯಾಗುವ ತರಾತುರಿಯಲ್ಲಿದ್ದಾರೆ. ತನ್ನ ವಿರುದ್ಧ ಗೆದ್ದಿರುವ ಬಂಡಾಯ ಕಾಂಗ್ರೆಸಿಗ ಮಂಕಾಳ ವೈದ್ಯನನ್ನು ಕ್ಷೇತ್ರದಲ್ಲಿ ಕಳೆಗುಂದಿಸಬೇಕೆಂದರೆ ನಿಗಮ-ಮಂಡಳಿ ಅಧಿಕಾರವೊಂದೇ ತನಗಿರುವ ಅಸ್ತ್ರ ಎಂಬುದು ಜೆಡಿ ಯೋಚನೆ. ಆದರೆ 'ದೇವ ಪಿತೃ' ದೇಶಪಾಂಡೆಯೂ ಸೋತನಂತರ ಜೆಡಿಯನ್ನು ದೂರ ಮಾಡಿಬಿಟ್ಟಿದ್ದಾರೆ. ಈತನ ಬೆನ್ನಿಗಿಟ್ಟುಕೊಳ್ಳೋದಕ್ಕಿಂತ ಪಕ್ಷೇತರ ಶಾಸಕ ಮಂಕಾಳು ವೈದ್ಯನ ದೋಸ್ತಿ ಮಾಡಿದರೆ ತನ್ನ ಮಗ ಪ್ರಶಾಂತನಿಗೆ ಎಂಪಿ ಟಿಕೆಟ್ ಕೊಡಿಸಲು, ಟಿಕೆಟ್ ಸಿಕ್ಕರೆ ಗೆಲ್ಲಿಸಲು ಅನುಕೂಲಕರ ಎಂಬುದು ದೇಶಪಾಂಡೆಯ ಚಿಂತನೆ. ಹೀಗಾಗಿ ಪಕ್ಷೇತರ ಶಾಸಕ ವೈದ್ಯನನ್ನು ದೇಶಪಾಂಡೆ ಕಂಡ-ಕಂಡಲ್ಲಿ ಅಪ್ಪಿ ಮುದ್ದಾಡುತ್ತ ಸನ್ಮಾನ ಮಾಡುತ್ತ ಕೊಂಡಾಡುತ್ತಿದ್ದಾರೆ. ದೇಶಪಾಂಡೆಯ ಈ ಸಲುಗೆಯಿಂದಲೇ ವೈದ್ಯ ಈಗ ಕಾಂಗ್ರೆಸ್‌ನಲ್ಲಿ ಅನಧಿಕೃತ ಎಂಟ್ರಿ ಹೊಡೆದುಬಿಟ್ಟಿದ್ದಾನೆ. ಪರಾಜಿತ ಜೆಡಿ ನಾಯ್ಕನ ಕೇರ್ ಮಾಡದೇ ಭಟ್ಕಳ-ಹೊನ್ನಾವರ ಕಾಂಗ್ರೆಸ್‌ನಲ್ಲಷ್ಟೇ ಅಲ್ಲ, ಜಿಲ್ಲಾ ಕಾಂಗ್ರೆಸ್‌ನಲ್ಲೂ ರಾಜಾರೋಷವಾಗಿ ನುಗ್ಗುತ್ತಿದ್ದಾನೆ. ಇಂಥ 'ಸಂದರ್ಭ'ದಲ್ಲಿ ದೇಶಪಾಂಡೆ ನಿಗಮ-ಮಂಡಳಿ ಪೀಠದಲ್ಲಿ ಕೆಲಸಕ್ಕೆ ಬಾರದ ಜೆಡಿಯನ್ನು ಕೂಡ್ರಿಸಿ ಪ್ರಬಲ ಮಂಡಾಳು ವೈದ್ಯನನ್ನು ದೂರ ಮಾಡೋದು ಸಾಧ್ಯವಾ? ಹೀಗಾಗಿ ಕಂಗಾಲಾಗಿರುವ ಜೆಡಿ ಮ್ಯಾಗಿ ಕ್ಯಾಂಪ್‌ಗೆ ಹೋದರೆ ಹೇಗೆಂದು ಯೋಚಿಸುತ್ತಿದ್ದಾರೆ. ಆದರೆ ಈಗಾಗಲೇ ಆತನ ಮತ್ತೊಬ್ಬ ಎದುರಾಳಿ ಕೆಜೆಪಿಯ ಮಾಜಿ ಮಂತ್ರಿ ಶಿವಾನಂದ್ ನಾಯ್ಕ್ ಗುರು ಯಡ್ಡಿಯ ಬಿಜೆಪಿ ಸಂಗದಿಂದ ಬೇಸತ್ತು ಮ್ಯಾಗಿ ಶಿಷ್ಯತ್ವದಿಂದ ಕಾಂಗ್ರೆಸ್ ಸೇರಲು ಮುಹೂರ್ತ ಹುಡುಕುತ್ತಿದ್ದಾರೆ. ಒಟ್ಟಿನಲ್ಲಿ ಜೆಡಿಗಿದು ಅವನತಿಯ ಕಾಲ.


ಮ್ಯಾಗಿ-ದೇಶಪಾಂಡೆ ಕೃಪಾಕಟಾಕ್ಷದಿಂದ ನಿಗಮ-ಮಂಡಳಿ ಗದ್ದುಗೆಗಾಗಿ ಗುದ್ದಾಡುತ್ತಿರುವವರೆಲ್ಲರದು ಒಂದು ತೂಕವಾದರೆ, ಸಿಎಂ ಸಿದ್ದರಾಮಯ್ಯರ ಅತ್ಯಾಪ್ತ ಬಂಟ-ಮೈಸೂರಿನ ಟ್ರಾನ್ಸ್‌ಪೋರ್ಟ್ ಉದ್ಯಮಿ ಯಶೋಧರ ನಾಯ್ಕನ ತೂಕವೇ ಒಂದು!! ಈ ಯಶೋಧರ ಹೊನ್ನಾವರದ ಮಾಳ್ಕೋಡ್ ಎಂಬ ಶರಾವತಿ ನದಿಯಲ್ಲಿರುವ ನಡುಗಡ್ಡೆ ಮೂಲದವರು. ಬಾಲ್ಯದಲ್ಲೇ ಬಡತನ ಸಹಿಸಲಾಗದೇ ಬೆಂಗಳೂರಿಗೆ ಡ್ರೈವರಿಕೆಗೆಂದು ಹೋದವರು. ಆ ನಂತರ 'ಫ್ರೆಂಡ್ಸ್ ಟ್ರಾನ್ಸ್‌ಪೋರ್ಟ್' ಶುರು ಮಾಡಿ ಮೈಸೂರಲ್ಲಿ ನೆಲೆ ಕಂಡವರು. ಅಲ್ಲಾತ ಮೈಸೂರು ರಾಜಮನೆತನದ ನರಸಿಂಹದತ್ತ ಒಡೆಯರ್, ತಮಿಳುನಾಡು ಸಿಎಂ ಜಯಲಲಿತಾ, ಸಿಎಂ ಸಿದ್ದುರನ್ನೆಲ್ಲ ತನ್ನ ಕಪ್ಪು-ಬಿಳುಪು-ರಂಗೀಲಾ ದಂಧೆಗಳಿಂದಲೇ ಸೆಳೆದು 'ದೊಡ್ಡ' ಉದ್ಯಮಿಯಾಗಿ ಹೋದ!

ಇಂಥ ಯಶೋಧರ ನಾಯ್ಕ ಒಂದಲ್ಲ ಎರಡು ಬಾರಿ ಸ್ವಕ್ಷೇತ್ರ ಭಟ್ಕಳದಲ್ಲಿ ತನ್ನ ಕಪ್ಪು ಹಣದ ಬಲದಿಂದ ಶಾಸಕನಾಗಲು ವಿಫಲ ಯತ್ನ ಮಾಡಿ ಇಡೀ ಜಿಲ್ಲೆಗೇ ಪರಿಚಿತನಾಗಿದ್ದಾರೆ. ಒಮ್ಮೆ 'ಬಂ' ಪಾರ್ಟಿಯಿಂದ ಸ್ಪರ್ಧಿಸಿದ್ದ ನಾಯ್ಕ್, ಇನ್ನೊಮ್ಮೆ ಜೆಡಿಎಸ್ ಹುರಿಯಾಳಾಗಿದ್ದ. ಈ ಬಾರಿ ಪಕ್ಕದ ಕುಮಟೆಗೆ ವಲಸೆ ಹೋಗಿ ಧನಾಧಾರಿತ ಸಮಾಜ ಸೇವೆ, ಮದುವೆ, ಮುಂಜಿ-ಶೋಭನ, ಸಾಂಸ್ಕೃತಿಕ ಕಾರ್ಯಕ್ರಮ-ಕ್ರೀಡಾ ಚಟುವಟಿಕೆಗೆ ಹಣ ಹರಿಸಿಕೊಂಡಿದ್ದ. ಸಿದ್ದು ಉಪ ಮುಖ್ಯಮಂತ್ರಿಯಾಗಿದ್ದಾಗ ತನ್ನ ಹಳ್ಳಿ ಮನೆಗೆ ಲಾಂಚಲ್ಲಿ ಕರೆದುಕೊಂಡು ಹೋಗಿ 'ಗೆಳೆತನ'ದ ಶೋಕಿ ತೋರಿಸಿಕೊಂಡಿದ್ದ. ಈ ಬಲದಿಂದ ಯಶೋಧರ ನಾಯ್ಕ್, ಒಂದು ನಿಗಮದ ಗೂಟದ ಕಾರು ಹೊಡೆದುಕೊಳ್ಳುವ ಜೋಶ್‌ನಲ್ಲಿದ್ದಾರೆ!

ಯಾರ ನಸೀಬು ಹೇಗಿದೆಯೋ?!

● ಶುದ್ಧೋಧನ

ಜೆಡಿಎಸ್‌ಗೊಬ್ಬ ಡಮ್ಮಿ ಅಧ್ಯ



ಇಷ್ಟೆಲ್ಲಾ ಕಸರತ್ತು ಮಾಡಿ ವಾರಗಟ್ಟಲೆ ಹುಡುಕಾಡಿ ಐಷಾರಾಮಿ ಹೋಟೆಲೊಂದರಲ್ಲಿ ದಿನವಿಡೀ ಚರ್ಚೆ ನಡೆಸಿ; ಕೊನೆಗೂ ಜೆಡಿಎಸ್‌ಗೊಬ್ಬ ಹೊಸ ಅಧ್ಯಕ್ಷ ಸಿಕ್ಕಿದ್ದೇ ಮಹಾಪುಣ್ಯದಂತಾಗಿದೆ!

ವರ್ತೂರು ಕೃಷ್ಣಪ್ಪ ಈಗ ಜೆಡಿಎಸ್‌ನ ಹೊಸ ಅಧ್ಯಕ್ಷ!

ಕಾಂಗ್ರೆಸ್ ತೊರೆದು ತೆನೆಹೊತ್ತ ರೈತಮ್ಮನ ಕೈಹಿಡಿದಿನ್ನೂ ಆರು ತಿಂಗಳಾಗಿಲ್ಲ, ಆಗಲೇ ದೇವೇಗೌಡರ ಪಕ್ಷದ ಅಧ್ಯಕ್ಷನಾಗುವಷ್ಟು ಅದೃಷ್ಟ ಕೃಷ್ಣಪ್ಪನವರದ್ದು. ಜಾತಿಯಲ್ಲಿ ಗೊಲ್ಲರ, ರೊಕ್ಕದಲ್ಲಿ ಭಯಂಕರ. ವರ್ತೂರು ಕೃಷ್ಣಪ್ಪ ಯಾನೇ ಎ. ಕೃಷ್ಣಪ್ಪ ತಾನೇ ಸಾಕಿ ಬೆಳೆಸಿದ ಸುದೀಶ್ ರೆಡ್ಡಿಯಂಥ ಹುಡುಗನೆದುರು ಸೋಲಬೇಕಾಯ್ತು ಕೊನೆಗೆ ಕಾಂಗ್ರೆಸ್ ಟಿಕೆಟ್ ಕೂಡ ಸಿಗದಂತಾಯ್ತು. ಟಿಕೆಟ್ ಕೊಡದ ಕಾಂಗ್ರೆಸ್ ವಿರುದ್ಧ ಸೇಡಿಗೆ ಜೆಡಿಎಸ್ ಸೇರಿ ಹಿರಿಯೂರಿನಿಂದ ಸ್ಪರ್ಧಿಸಿದರೂ ಅಲ್ಲಿನ ಗೊಲ್ಲರು ಕೈಹಿಡಿಯಲಿಲ್ಲ.

ಸೋತುಸೋತು ಸುಣ್ಣವಾದವನಿಗೆ ಅದೇನೋ ನುಸೀಬು ಕೆರಳಿದಂತೆ ಸದ್ಯ ಜೆಡಿಎಸ್ ಅಧ್ಯಕ್ಷಗಿರಿ ಒಲಿದು ಬಂದಿದೆ-

ಎ. ಕೃಷ್ಣಪ್ಪ ಸದ್ಯ ಹಿಂದಿನಂತಿಲ್ಲ, ಸಿಕ್ಕಾಪಟ್ಟೆ ವಯಸ್ಸಾಗಿದೆ. ಹಿಂದಿದ್ದ ಚೈತನ್ಯ ಉತ್ಸಾಹ, ಶ್ರದ್ಧೆ, ಛಲ ಏನೊಂದೂ ಉಳಿದಿಲ್ಲ. ದುಡ್ಡುಬಿಟ್ಟರೆ ಇನ್ನೇನೂ ಉಳಿದಿಲ್ಲ ಎಂದು ಅವರ ಬೆಂಬಲಿಗರೇ ಹಣೆ ಚಚ್ಚಿಕೊಳ್ಳುತ್ತಾರೆ. ವೈಚಾರಿಕವಾಗಿ ನಿಷ್ಠುರಿಯಲ್ಲದ, ವ್ಯಕ್ತಿತ್ವದಲ್ಲಿ ತೀಕ್ಷ್ಣರಲ್ಲದ, ವರ್ಚಸ್ಸು, ತಾಕತ್ತು ಕಿಮ್ಮತ್ತು ಇತ್ಯಾದಿ ಏನೊಂದೂ ಇಲ್ಲದ ಎ. ಕೃಷ್ಣಪ್ಪರನ್ನು ಯಾವ ಮಾನದಂಡದ ಮೇಲೆ ಜೆಡಿಎಸ್ ಅಧ್ಯಕ್ಷರನ್ನಾಗಿ ದೇವೇಗೌಡರು ನೇಮಿಸಿದ್ದು?

ಎತ್ತಿಂದೆತ್ತ ಲೆಕ್ಕ ಹಾಕಿದರೂ ದುಡ್ಡಿನ ಹೊರತಾಗಿ ಇನ್ನಾವುದೇ ಅರ್ಹತೆಯೂ ಕೃಷ್ಣಪ್ಪರಲ್ಲಿ ಕಾಣಿಸುತ್ತಿಲ್ಲ.

ಹಾಗೆ ನೋಡಿದರೆ ಬಸನಗೌಡ ಯತ್ನಾಳ್ ಥರದ ಮುತ್ಸದ್ದಿಯಿದ್ದರು. ಉತ್ತರ ಕರ್ನಾಟಕದ ಲಿಂಗಾಯತ ಓಟ್‌ಬ್ಯಾಂಕ್ ಮೇಲೆ ಕಣ್ಣಿಟ್ಟಾದರೂ ಯತ್ನಾಳರನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆಂದೇ ಅನೇಕರು ನಿರೀಕ್ಷಿಸಿದ್ದರು. ಎಂ.ಸಿ. ನಾಣಯ್ಯನವರ ಬೆನ್ನಿಗೆ ದೊಡ್ಡ ಜಾತಿಯಿಲ್ಲದಿದ್ದರೂ ವರ್ಚಸ್ಸು ಮತ್ತು ಅನುಭವದ ಹಿನ್ನೆಲೆಯಿಂದಾಗಿ ಜೆಡಿಎಸ್‌ಗದು ಲಾಭವಾಗುತ್ತಿತ್ತು. ಯಾರಾದರೂ ಮುಸ್ಲಿಂ ಅಧ್ಯಕ್ಷರ ನೇಮಕವಾಗಿದ್ದರೂ ರಾಜಕೀಯವಾಗಿ ಅದು ಜಾಣ ನಡೆಯಾಗುತ್ತಿತ್ತು.

ಜಾತಿಯಲ್ಲಿ ಹಿಂದುಳಿದವರೆಂಬ ಆರೋಪ ಬಿಟ್ಟರೆ ಕೃಷ್ಣಪ್ಪ ಅಧ್ಯಕ್ಷರಾಗಿ ಜೆಡಿಎಸ್‌ಗಾದ ಲಾಭವಾದರೂ ಏನು?

ಯಾರೇನೇ ಅಂದರೂ ಕೃಷ್ಣಪ್ಪ ನೇಮಕದಿಂದ ಜೆಡಿಎಸ್‌ಗೆ ದೊಡ್ಡಮಟ್ಟದ ಲಾಭವಂತೂ ಆದಂತಿಲ್ಲ.

ವಿರೋಧ ಪಕ್ಷವಾಗಿ ಬಿಜೆಪಿ-ಕಾಂಗ್ರೆಸ್ ವಿರುದ್ಧ ತನ್ನದೇ ಶಕ್ತಿ ರೂಢಿಸಿಕೊಳ್ಳುವ ಎಲ್ಲಾ ಅವಕಾಶಗಳಿದ್ದೂ ಜೆಡಿಎಸ್ ಏಕೆ ಒಂದರಮೇಲೊಂದು ಯಡವಟ್ಟು ಮಾಡಿಕೊಳ್ಳುತ್ತಿದೆ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ. ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರಗಳಲ್ಲಿ ಸೋಲಾಯಿತೆಂದು ಮಹಾನ್ ಹೊಣೆ ಹೊತ್ತಂತೆ ಕುಮಾರಸ್ವಾಮಿ ರಾಜೀನಾಮೆ ಘೋಷಿಸಿಬಿಟ್ಟರು. ಬಹುಶಃ ದೇವೇಗೌಡರ ಬಯಕೆಯೂ ಅದೇ ಆಗಿತ್ತೇನೋ. ಇದೇ ನೆಪದಲ್ಲಿ ಬಿಜೆಪಿ ಸೃಷ್ಟಿದ ಕಳಂಕದಿಂದ ಪಾರಾಗುವ ಎಲ್ಲಾ ಅವಕಾಶಗಳೂ ಜೆಡಿಎಸ್‌ಗಿತ್ತು. ಮುಸ್ಲಿಂ ಓರ್ವನನ್ನು ಜೆಡಿಎಸ್ ಅಧ್ಯಕ್ಷನನ್ನಾಗಿ ಮಾಡಬಹುದಿತ್ತು. ಜಮೀರ್, ಜಫ್ರುಲ್ಲಾ ಖಾನ್‌ರಂಥ ಹುಂಬರಲ್ಲದಿದ್ದರೂ ಅಬ್ದುಲ್ ಅಜೀಮ್‌ರಂಥ ಪ್ರಜ್ಞಾವಂತರಿದ್ದರು.

ಎ. ಕೃಷ್ಣಪ್ಪರಂಥ ರೊಕ್ಕಸ್ಥರಿಗಿಂತ ಅಜೀಮ್ ರಾಜಕೀಯವಾಗಿ ಹೆಚ್ಚು ಲಾಭದಾಯಕವಾಗಿದ್ದರು. ಯತ್ನಾಳ್‌ರನ್ನು ಕಾರ್ಯಾಧ್ಯಕ್ಷರನ್ನಾಗೋ ಅಥವಾ ಕೃಷ್ಣಪ್ಪರನ್ನು ಕಾರ್ಯಾಧ್ಯಕ್ಷರನ್ನಾಗಿ ಮಾಡಿ ಯತ್ನಾಳರನ್ನು ಅಧ್ಯಕ್ಷರನ್ನಾಗೋ ಮಾಡಬಹುದಿತ್ತು. ದಲಿತ ನಾಯಕರೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಸಣ್ಣಪುಟ್ಟ ಜಾತಿಗಳಿಗೆಲ್ಲ ಉನ್ನತ ಸ್ಥಾನಮಾನ ನೀಡಿ ಪಕ್ಷವನ್ನು ಮತ್ತಷ್ಟು ಸದೃಢಗೊಳಿಸುವ ಎಲ್ಲಾ ಅವಕಾಶಗಳೂ ದೇವೇಗೌಡರಿಗಿದ್ದವು.

ಆದರೆ ಜೆಡಿಎಸ್ ಪಾಳಯದಲ್ಲಿ ನಡೆಯುತ್ತಿರುವುದು ಇದಕ್ಕಿಂತ ವ್ಯತಿರಿಕ್ತ ವಿದ್ಯಮಾನಗಳು. ಪಕ್ಷದ ಮುಸ್ಲಿಂ ಓಟ್‌ಬ್ಯಾಂಕ್‌ನ ಆಯಸ್ಕಾಂತವೆಂದೇ ಚಾಲ್ತಿಯಲ್ಲಿದ್ದ ಚಾಮರಾಜಪೇಟೆ ಶಾಸಕ ಜಮೀರ್ ಕುಮಾರಣ್ಣನ ವಿರುದ್ಧ ಮುನಿಸಿಕೊಂಡು ಕಾಂಗ್ರೆಸ್ ಜೊತೆ ಕೈಜೋಡಿಸುತ್ತಿದ್ದಾರೆ. ಜಮೀರ್‌ನ ಮತ್ತೊಂದು ಮುಖದಂತಿದ್ದ ದುಬೈ ಉದ್ಯಮಿ ಜಫ್ರುಲ್ಲಾ ಖಾನ್ ಕೂಡ ಜೆಡಿಎಸ್ ತೊರೆದು ಜಮೀರ್ ಜೊತೆ ಕೈಜೋಡಿಸಿದಂತಿದೆ. ವಿಧಾನ ಪರಿಷತ್ ನಾಯಕ ಪುಟ್ಟಣ್ಣ ಪಾಳೇಗಾರಿಕೆ ವಿರುದ್ಧ ರೋಸತ್ತು ಪಕ್ಷವನ್ನೇ ತೊರೆಯುವ ಮಾತನಾಡಿದರೆ, ಗಂಗಾವತಿ ಶಾಸಕ ಅನ್ಸಾರಿಯಿಂದ ಹಿಡಿದು ಚಲುವರಾಯಸ್ವಾಮಿ ಅಸಮಾಧಾನವೇ ಕುದಿಯುತ್ತಿದೆ.

ಇದೆಲ್ಲ ಜೆಡಿಎಸ್ ಅಂತಃಕ್ಷೋಭೆಯ ಫಲಶ್ರು ಇದರ ಲಾಭ ಪಡೆಯುತ್ತಿರುವುದು ಕೋಮು ಕಾ ಬಿಜೆಪಿ. ಈಶ್ವರಪ್ಪ-ಯಡ್ಡಿ ಜೊತೆ ಸೇರಿದ್ದು, ಜೋಷಿ ರಾಜ್ಯ ಸಂಘಟನೆಗಿಳಿದದ್ದು ಪ್ರತಿ ಸುದ್ದಿಯಾಗುತ್ತಿರುವ ಈ ದಿನಗಳಲ್ಲಿ ಸಮರ್ಥ ಪಕ್ಷವಾಗಿ ಬಿಜೆಪಿಯನ್ನು ಮೀರಿಸಬೇಕಿದ್ದ ಜೆಡಿ ಪಾಳೇಗಾರಿ ಪ್ರವೃತ್ತಿಯಿಂದಾಗಿಯೇ ಹೈರಾಣ ಚನ್ನಪಟ್ಟಣದಲ್ಲಿ ಸ್ಥಳೀಯರ ವಿರೋಧದ ಮ ಅನಿತಾ ಕುಮಾರಸ್ವಾಮಿಯವರನ್ನು ಕಣಕ್ಕಿಳಿಸಿದ್ದು ಪಾಲಿಗೆ ದೊಡ್ಡ ಪಾಠವಾಗಬೇಕಿತ್ತು. ಹಾಗಿದ ಲೋಕಸಭಾ ಉಪಚುನಾವಣೆಗೆ ನಿಲ್ಲಿಸ ಏನಾಗಬೇಕಿತ್ತೋ ಅದೇ ಆಗಿದೆ. ಜೆಡಿಎಸ್‌ನ ಸ್ಥಾನಗಳೀಗ ಕಾಂಗ್ರೆಸ್ ಪಾಲಾಗಿವೆ.

ವಿಪರ್ಯಾಸವೆಂದರೆ; ಇದೇ ಕಾರಣ ಕುಮಾರಸ್ವಾಮಿ ಅಧ್ಯಕ್ಷ ಸ್ಥಾನದಿಂದ ಇಳಿದು ಆ ಬಂದವರಾದರೂ ಎಂಥವರು? ಕುಮಾರ ವರ್ಚಸ್ವಿಯೋ ಪ್ರಭಾವಿಯೋ ಆಗಿದ್ದರೆ ಆ ಮಾ

ಎ. ಕೃಷ್ಣಪ್ಪ ಯಾವ ರೀತಿಯಲ್ಲಿ ಕುಮಾರಸ್ವ ವರ್ಚಸ್ವಿ ಮತ್ತು ಸಮರ್ಥ? ದುಡ್ಡಿನ ಹೊರತಾ ಯಾವ ಕಾರಣಕ್ಕೆ ಅವರನ್ನು ಅಧ್ಯಕ್ಷ ನೇಮಿಸಿರಬಹುದೆಂಬ ಪ್ರಶ್ನೆಗೆ ದೇವೇಗೌಡರು ಹಿ ವರ್ಗದ ಕಾಳಜಿಯ ಕಾರಣ ಕೊಡಬಹುದು. ಮು ಸಿದ್ದರಾಮಯ್ಯನವರ ಅಹಿಂದ ತಂತ್ರಗಾರಿಕೆಗೆ ದೇವೇಗೌಡರು ಹಣೆದ ಪ್ರತಿತಂತ್ರವೇ ಇರಬಹುದ ತಿರುಗುತ್ತಿರುವುದು ಯಾರ ಚಕ್ರ?

ಸಿದ್ದರಾಮಯ್ಯನವರ ಅಹಿಂದ ರಾಜಕಾರಣಕ್ಕೆ ಎಂಬಂತೆ ದೇವೇಗೌಡರ ಯಾಗದ ಕುದುರೆಯಾ ಸಾರಥ್ಯ ವಹಿಸಿದ್ದು ಕೂಡ ಅಹಿಂದ ಪಾಲಿಟಿಕ್

-ರಾ.

ಸುತ್ತಾಮುತ್ತಾ....



ಜಗತ್ತಿನಾದ್ಯಂತ ಕೌಟುಂಬಿಕ ಹಿಂಸೆ ವ್ಯಾಪಕವಾಗಿ ನಡೆಯುತ್ತಿದೆ. ಮಹಿಳೆಯರಿಗೆ 'ದೇವಿ' ಸ್ಥಾನವನ್ನೇ ನೀಡಿರುವ ನಮ್ಮ ದೇಶದಲ್ಲೇ ಪ್ರತಿ ವರ್ಷ ಎರಡು ಲಕ್ಷಕ್ಕಿಂತ ಹೆಚ್ಚು ದೂರುಗಳು ದಾಖಲಾಗುತ್ತವೆ. ದಾಖಲಾಗದೇ ಇರುವ ಕೋಟ್ಯಾಂತರ ಪ್ರಕರಣಗಳೂ ಜರುಗುತ್ತಿರುತ್ತವೆ.

ಈ ಪಿಡುಗನ್ನು ತಡೆಯಲು ಹಲವಾರು ಸಂಘಟನೆಗಳು ಪ್ರಯತ್ನಿಸುತ್ತಿವೆ. ಅಂತಹ ಒಂದು ಪ್ರಯತ್ನದ ಭಾಗವಾಗಿ ಇತ್ತೀಚೆಗೆ ಜಾಹೀರಾತು ಕಂಪನಿಯೊಂದು ಹಲವು ಚಿತ್ರಗಳನ್ನು ಬಿಡುಗಡೆ ಮಾಡಿದೆ. ಆ ಚಿತ್ರಗಳ ಅಡಿಯಲ್ಲಿ "ಇಂತಹ ದಿನವನ್ನು ನಾವು ಕಾಣದಿರಲಿ ಎಂದು ಪ್ರಾರ್ಥಿಸೋಣ. ಇವತ್ತು ಭಾರತದ ಶೇ. 68 ರಷ್ಟು ಮಹಿಳೆಯರು ಕೌಟುಂಬಿಕ ಹಿಂಸೆಗೆ ಗುರಿಯಾಗುತ್ತಿದ್ದಾರೆ. ನಾಳೆ ಇದರಿಂದ ಯಾರೂ ಪಾರಾಗದಿರುವ ಸ್ಥಿತಿ ನಿರ್ಮಾಣವಾಗಬಹುದು. ನಾವು ಪ್ರಾರ್ಥಿಸುವ ದೇವತೆಗಳು ಕೂಡ" ಎಂದು ಪ್ರಕಟಿಸಲಾಗಿದೆ. ಹಾಗೆಯೇ ಆ ಚಿತ್ರಗಳಲ್ಲಿ ದುರ್ಗೆ, ಲಕ್ಷ್ಮಿ ಮತ್ತು ಸರಸ್ವತಿಯರು ಕೌಟುಂಬಿಕ ಹಿಂಸೆಗೆ ಬಲಿಯಾಗಿರುವಂತೆ ಚಿತ್ರಿಸಲಾಗಿದೆ. ಆ ಚಿತ್ರಗಳನ್ನು ಇಲ್ಲಿ ನೀಡಿದ್ದೇವೆ.

ಈಗ ಈ ಚಿತ್ರಗಳ ಸುತ್ತ ಅಂತರಜಾಲದಲ್ಲಿ ದೊಡ್ಡ ಚರ್ಚೆ ನಡೆಯುತ್ತಿದೆ. ಅದರಲ್ಲೂ ಮಹಿಳೆಯರು ಇದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಮಹಿಳೆಯರಿಗೆ 'ದೇವಿ' ಸ್ಥಾನವನ್ನು ಕೊಟ್ಟ ಮಾತ್ರಕ್ಕೆ ಅವರ ಮೇಲಿನ ಕೌಟುಂಬಿಕ ಹಿಂಸೆ ನಿಲ್ಲುವುದಿಲ್ಲ, ಯಾಕೆಂದರೆ ಪುರುಷ ಆಕೆಯನ್ನು ಹೊಡೆಯುವ ಮುನ್ನ ಆಕೆಯು ನ್ನೇನು ದೇವಿ ಎಂದು ಪರಿಗಣಿಸುವುದಿಲ್ಲ ಎಂಬುದು ಹಲವರ ವಾದ.

ಹಾಗೆಯೇ ಹೀಗೆ 'ದೇವಿ' ಸ್ಥಾನವನ್ನು ಕೊಟ್ಟಿರುವುದರಿಂದ ಮಹಿಳೆಯರು 'ದೇವಿ'ಯರಂತೆ ವರ್ತಿಸಿದರೆ ಮಾತ್ರ ಅವರು ರಕ್ಷಣೆಗೆ ಅರ್ಹರು, ಹಾಗೆ ವರ್ತಿಸದೇ ಆಧುನಿಕ ಮಹಿಳೆಯರಂತೆ ಉಡುಗೆಗಳನ್ನು ತೊಡುವ ಹೆಂಗಸರ ಮೇಲೆ ದಾಳಿ ಮಾಡಿದರೆ ಓಕೆ ಎಂಬ ಭಾವನೆಗೆ ಈ ಚಿತ್ರಗಳು ಇಂಬು ಕೊಡುತ್ತವೆ ಎಂಬುದು ಕೆಲವು ಮಹಿಳೆಯರ ತರ್ಕ.

ಅದೆಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರಿಗೆ 'ದೇವಿ' ಸ್ಥಾನವೂ ಬೇಡ, 'ವೇಶ್ಯೆ' ಸ್ಥಾನವೂ ಬೇಡ. ಬದಲಾಗಿ ಆಕೆಯನ್ನು ಓರ್ವ ವ್ಯಕ್ತಿ ಎಂದು ನೋಡುವ ದೃಷ್ಟಿಕೋನವನ್ನು ಸಮಾಜದಲ್ಲಿ ಬೆಳೆಸುವುದು ಎಲ್ಲಕ್ಕಿಂತ ಮುಖ್ಯ ಎಂಬುದು ಇನ್ನೂ ಕೆಲವರ ವಾದ.

ಮೂರನೆ ವಾದವೇ ಸರಿ ಅಲ್ಲವೇ?

******



"ಈ ಸಾಮ್ರಾಟನ (ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ) ಬಟ್ಟೆಯೂ ಹಿಂದಿನ ಸಾಮ್ರಾಟರ ಬಟ್ಟೆಗಳಿಗಿಂತ ವಿಭಿನ್ನವಾಗಿಲ್ಲ. ಈತನೂ ಹಿಂದಿನ ಅಧ್ಯಕ್ಷರಂತೆ ವಾಲ್ ಸ್ಟ್ರೀಟ್ ಮತ್ತು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಉದ್ದಿಮೆಗಳಿಗೆ ಸೇವೆ ಸಲ್ಲಿಸುತ್ತಾನೆ. ಇಸ್ರೇಲ್ ವಿಷಯಕ್ಕೆ ಬಂದರೆ ಬುಷ್ ಮತ್ತು ಕ್ಲಿಂಟನ್‌ನಂತೆ ಗುಲಾಮಗಿರಿಯನ್ನು ಪ್ರದರ್ಶಿಸುತ್ತಾನೆ. ಈ ಹಿನ್ನೆಲೆಯಲ್ಲಿ ಆತ ಸಿರಿಯಾ ದೇಶದ ಮೇಲೆ ದಾಳಿ ಮಾಡಲು ಸಿದ್ಧವಾಗಿರುವುದು ನನಗೆ ಅಚ್ಚರಿ ಮೂಡಿಸುವುದಿಲ್ಲ."

-ಖ್ಯಾತ ಲೇಖಕ ತಾರೀಖ್ ಅಲಿ

******

"ನರೇಂದ್ರ ಮೋದಿಯನ್ನು ಬಿಜೆಪಿಯ ಪ್ರಧಾನಿ ಸ್ಥಾನದ ಅಭ್ಯರ್ಥಿ ಎಂದು ನೇಮಿಸುವ ಮುನ್ನ ಆರೆಸ್ಸೆಸ್ ಮೋದಿಗೆ ನಾಲ್ಕು ಷರತ್ತುಗಳನ್ನು ವಿಧಿಸಿದೆ. ಆ ಷರತ್ತುಗಳು ಯಾವುದೆಂದರೆ

1) ಅಯೋಧ್ಯೆಯಲ್ಲಿ ರಾಮಮಂದಿರವನ್ನು ಸ್ಥಾಪಿಸುವುದಕ್ಕೆ ಬದ್ಧನಾಗಿರುತ್ತೇನೆಂದು ಮಾತು ಕೊಡುವುದು.
2) ತಾನು ಪ್ರಧಾನಿ ಆದರೆ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುತ್ತೇನೆ ಎಂದು ಭರವಸೆ ನೀಡುವುದು.
3) ಆರ್ಟಿಕಲ್ 370 ಅನ್ನು ರದ್ದುಗೊಳಿಸುವ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ಇರುವ ವಿಶೇಷ ಸ್ಥಾನಮಾನವನ್ನು ಕಿತ್ತೊಗೆಯುವುದು.
4) ಗೋ ರಕ್ಷಣೆಗೆ ಸೂಕ್ತ ಕಾನೂನನ್ನು ಜಾರಿಗೆ ತರುವುದು.



ಈ ನಾಲ್ಕು ಷರತ್ತುಗಳ ಹಿಂದಿರುವ ತರ್ಕ ಹಿಂದೂ ಮತಗಳನ್ನು ಗಟ್ಟಿಗೊಳಿಸಿಕೊಳ್ಳುವುದೇ ಆಗಿದೆ. ಯಾಕೆಂದರೆ ಯಾವುದೇ ಕಾರಣಕ್ಕೂ ಅಲ್ಪಸಂಖ್ಯಾತರು ಮತ್ತು ಪ್ರಜ್ಞಾವಂತರ ಮುಂದಿನ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸುವುದಿಲ್ಲ ಎಂಬುದು ಈಗ ಆರೆಸ್ಸೆಸ್ಸಿಗೆ ಮನದಟ್ಟಾಗಿದೆ. ಆದ್ದರಿಂದ ಅದು ಮತ್ತೆ ತನ್ನ ಕಟ್ಟರ್ ಹಿಂದೂತ್ವವಾದಿ ಸಿದ್ಧಾಂತಕ್ಕೆ ಮರಳಿ ಹಿಂದೂತ್ವ ಮತಗಳನ್ನು ಬಿಜೆಪಿ ಪರ ಗಟ್ಟಿಗೊಳಿಸಿಕೊಳ್ಳಲು ಸಜ್ಜಾಗುತ್ತಿದೆ."

- ಇಂಡಿಯಾ ಟುಡೆ ವರದಿ

******

"ಚುನಾವಣೆಗಳಿಂದಾಗಿ ನಿಜವಾಗಲೂ ಬದಲಾವಣೆಗಳು ಆಗುವುದಿದ್ದರೆ ಅದನ್ನೆಂದೋ ನಿಷೇಧಿಸುತ್ತಿದ್ದರು."

-ಎಮ್ಮಾ ಗೋಲ್ಡ್‌ಮನ್, 19ನೇ ಶತಮಾನದ ಲೇಖಕಿ

******

ಬಿಟ್

ಅವತ್ತು ತಮ್ಮ ಹೊಸ ಮನೆಗೆ ಕಾಲಿಟ್ಟಿದ್ದ ನವದ ಅಂದು ತಮ್ಮ ಮನೆಗೆ ಯಾರೇ ಬಂದರೂ ಬ ತೆರೆಯಕೂಡದೆಂದು ಒಪ್ಪಂದ ಮಾಡಿಕೊಂಡರು.

ಕೆಲ ಹೊತ್ತಿನ ನಂತರ ಅವರಿಬ್ಬರನ್ನು ನೋಡಲು ಅಪ್ಪ ಮತ್ತು ಅಮ್ಮ ಬಂದು ಬಾಗಿಲು ತ ಮನೆಯೊಳಗಿದ್ದ ಗಂಡ ಹೆಂಡತಿ ಪರಸ್ಪರ ಮುಖ ನೋ ಬಾಗಿಲನ್ನು ತೆರೆಯಬೇಕೆಂದು ಗಂಡನಿಗೆ ಅನ್ನಿಸಿದರೂ ಹೆಂಡತಿ ಒಪ್ಪಂದ ಮಾಡಿಕೊಂಡಿದ್ದರಿಂದ ಆತ ಬಾಗಿಲನ್ನು ತೆರೆಯಲಿಲ್ಲ. ಸ್ವಲ್ಪ ಕಾದ ಆತನ ಅಪ್ಪ ಅಮ್ಮ ವಾಪಸ್ ತಮ್ಮ ಮನೆಗೆ ಹೋದರು.

ಇದಾದ ಕೆಲವು ಸಮಯದ ನಂತರ ಹೆಂಡತಿಯ ಅಪ್ಪ ಅವ ಬಂದು ಬಾಗಿಲನ್ನು ತಟ್ಟಿದರು. ಗಂಡಹೆಂಡತಿ ಪರಸ್ಪರ ಮುಖ ನೋಡಿದರು. ಕೆಲ ಕ್ಷಣಗಳಲ್ಲೇ ಹೆಂಡತಿಯ ಕಣ್ಣಿಂದ ನೀರು ಹರಿ "ನಾವಿಬ್ಬರೂ ಒಪ್ಪಂದ ಮಾಡಿಕೊಂಡಿದ್ದೆವು ನಿಜ. ಆದರೆ ನನ್ನಿಂದ ಅವರನ್ನು ವಾಪಸ್ಸು ಕಳುಹಿಸಲು ಸಾಧ್ಯವಿಲ್ಲ" ಎನ್ನುತ್ತಾ ಬಾಗಿಲನ್ನು ತೆರೆದಳು. ಆಗ ಆಕೆಯ ಗಂಡ ಏನನ್ನೂ ಹೇಳದೆ ಸುಮ್ಮನಿದ್ದ.




ಹಲವಾರು ವರುಷಗಳು ಉರುಳಿದವು. ಗಂಡ ಹೆಂಡತಿಗೆ ನಾಲ್ಕು ಗಂಡು ಮಕ್ಕಳು ಹುಟ್ಟಿದ ನಂತರ ಓರ್ವ ಮಗಳು ಜ ಆಕೆಯ ನಾಮಕರಣಕ್ಕೆ ಗಂಡ ದೊಡ್ಡ ಕಾರ್ಯಕ್ರಮವನ್ನು ಆ ತನಗೆ ಗೊತ್ತಿದ್ದ ಎಲ್ಲರನ್ನೂ ಆಹ್ವಾನಿಸಿದ.

ನಾಮಕರಣ ಕಾರ್ಯಕ್ರಮ ಮುಗಿದನಂತರ ಹೆಂಡತಿ ಗಂಡನನ್ನು "ನಮ್ಮ ನಾಲ್ವರು ಗಂಡು ಮಕ್ಕಳಿಗೂ ಇಂತಹ ದೊಡ್ಡ ನಾ ಕಾರ್ಯಕ್ರಮವನ್ನು ಆಯೋಜಿಸಿರಲಿಲ್ಲ. ಆದರೆ ಮಗಳಿಗೆ ಮಾತ್ರ ಮಾ ಯಾಕೆ?"


ಅದಕ್ಕೆ ಗಂಡ ಉತ್ತರಿಸಿದ: "ಯಾಕೆಂದರೆ ನನ್ನ ಮಗಳು ಯಾ ತನ್ನ ಮನೆಯ ಬಾಗಿಲನ್ನು ನನಗೆ ತೆರೆಯುತ್ತಾಳೆ ಎಂದು ಗೊತ್ತಿರುವುದರಿಂದ."

ಹೆಣ್ಣು ಮಕ್ಕಳು ಎಷ್ಟು ವಿಶಿಷ್ಟ ಅಲ್ಲವೇ?


ದುರಸ್ತಿ ಕಾಣದ ವಸತಿ ಗೃಹ



ಜೋಗದ ವೈಭವ



ಪಾಳು ಬಿದ್ದಿರುವ ಯಾತ್ರಿ ನಿವಾಸ



ಅಭಿವೃದ್ಧಿ ಜೋಗದ್ದೋ? ಅಧಿಕಾರಿಗಳದ್ದೋ?

...ರೋಬ್ಬರಿ ಒಂದು ವರ್ಷದ ನಂತರ ಅಧಿಕಾರಿಗಳ ...ಮ್ಮದ ಜೋಗ ಅಭಿವೃದ್ಧಿ ಪ್ರಾಧಿಕಾರದ ಸಭೆ ...ಬರ್ 7ರಂದು ನಡೆಯಿತು. ಅಧಿಕಾರಿಗಳೆ ...ಹೋಗಿದ್ದ ಸಭೆಯು ಕಾಟಾಚಾರಕ್ಕೆ ಎರಡೂವರೆ ...ಗಳ ಕಾಲ ನಡೆದು, ಅಧಿಕಾರಿಗಳು ಬರೋಬ್ಬರಿ ...ಂದು ಜಾಗ ಖಾಲಿ ಮಾಡಿದರು.

...ಈ ಸಭೆ ನಡೆದದ್ದು ವಿಧಾನಸಭೆ ಸ್ಪೀಕರ್ ಕಾಗೋಡು ...ಪ್ಪನವರ ಒತ್ತಾಯದ ಮೇರೆಗೆ ವಿನಃ ಅಧಿಕಾರಿಗಳ ... ಪ್ರವಾಸೋದ್ಯಮ ಸಚಿವ ದೇಶಪಾಂಡೆಯ ...ಯಿಂದ ಅಲ್ಲ. ನಿಗದಿತ ಸಮಯಕ್ಕೆ ಸರಿಯಾಗಿ ... ಕಾಗೋಡು ಅವರನ್ನೇ ಸುಮಾರು ಒಂದೂವರೆ ...ಗಳ ಕಾಲ ಕಾಯಿಸಿದ ದೇಶ್‌ಪಾಂಡೆ ಸಭೆಯ ಉದ್ದಕ್ಕೂ ...ದ್ದು ಅಧಿಕಾರಿಗಳ ಒಲೈಕೆಯನ್ನು. ಪರಿಣಾಮವಾಗಿ ... ಫಲಶ್ರುತಿ ಶೂನ್ಯ.

...ನ್ನು ಸಭೆಗೆ ಬಂದಿದ್ದ ಅಧಿಕಾರಿಗಳಲ್ಲಿ ಶಿವಮೊಗ್ಗ ...ಧಿಕಾರಿ ವಿಫುಲ್ ಬನ್ಸಾಲ್ ಬಿಟ್ಟರೆ ಇತರರಿಗೆ ಸಭೆಯ ...ಯಾವುದೇ ತಯಾರಿ ಇರಲಿಲ್ಲ. ತಮ್ಮ ವ್ಯಾಪ್ತಿಯಲ್ಲಿ ...ದ ಕೆಲಸಕಾರ್ಯಗಳ ಬಗ್ಗೆ ವಿವರಗಳೇ ಇರಲಿಲ್ಲ. ... ಅಧಿಕಾರಿಗಳಲ್ಲಿ ಕೆಲವರು ಅರ್ಧ ಲಕ್ಷ ರೂಪಾಯಿ ...ಬಾಳುವ ಮೊಬೈಲ್‌ಗಳಲ್ಲಿ ಬ್ಯುಸಿ ಇದ್ದರೆ, ಇನ್ನು ...ರು ಆಕಳಿಕೆ ತೆಗೆಯುತ್ತ ನಿದ್ದೆ ಮೂಡ್‌ನಲ್ಲಿದ್ದರು.


...ವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳ ಬಹುತೇಕ ... ಇಲಾಖೆಯ ಮುಖ್ಯಾಧಿಕಾರಿಗಳು ಈ ಸಭೆಗೆಂದು ...ರು 100ರಷ್ಟು ಐಷಾರಾಮಿ ಕಾರ್‌ಗಳಲ್ಲಿ ಬಂದಿದ್ದರು. ... ಸಹಾಯಕ್ಕೆಂದು ಇನ್ನಷ್ಟು ಸಿಬ್ಬಂದಿ ವರ್ಗ ಬಂದಿತ್ತು. ...ದರಿಂದಾಗಿ ಈ ನಿರುಪಯುಕ್ತ ಸಭೆಗೆ ಸರ್ಕಾರಿ ...ಸದಿಂದ ವೆಚ್ಚವಾಗಿದ್ದು ಅಂದಾಜು ಎರಡು ಲಕ್ಷ ...ಯಿಗಳು! 'ಜನರ ದುಡ್ಡು ಅಧಿಕಾರಿಗಳ ಜಾತ್ರೆ' ...ಂತಿತ್ತು ಇವರೆಲ್ಲರ ಧೋರಣೆ!!


...ಜೋಗವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಬೇಕೆಂಬ ...ದಾಸೆಯಿಂದ, ಪ್ರವಾಸಿಸ್ನೇಹಿ ತಾಣವನ್ನಾಗಿಸಬೇಕೆಂಬ ...ಶದಿಂದ 14 ವರ್ಷಗಳ ಹಿಂದೆ ಜೋಗ ಅಭಿವೃದ್ಧಿ ...ಕಾರವನ್ನು ಸ್ಥಾಪಿಸಲಾಯಿತು. ಅದರ ಅಧಿಕಾರ ವ್ಯಾಪ್ತಿ ... ಅದು ಒಳಗೊಳ್ಳಬೇಕಾದವರ ಬಗ್ಗೆ ಅಸ್ಪಷ್ಟತೆ ...ದ್ದರಿಂದ ಪ್ರಾಧಿಕಾರ ಮೊದಲಿನಿಂದಲೂ ಕುಂಟುತ್ತಾ ...ತ್ತಾ ಸಾಗಿದೆ. ಅದರಲ್ಲೂ ಪ್ರಾಧಿಕಾರದ ಅಧ್ಯಕ್ಷರಾಗಿ ...ಸೋದ್ಯಮ ಸಚಿವರೇ ಇರಬೇಕೆಂಬ ಕೆಟ್ಟ ನಿಯಮ ...ಕಾರದ ಇಂದಿನ ಸ್ಥಿತಿಗೆ ಕಾರಣವಾಗಿದೆ. ಯಾಕೆಂದರೆ ... ಏನೇ ಮಾಡಬೇಕೆಂದರೂ ಅದಕ್ಕೆ ಸಚಿವರತ್ತ ...ಡಬೇಕು. ಸಚಿವರು ಪುರುಸೊತ್ತು ಮಾಡಿಕೊಂಡು ...ಕರೆಯಬೇಕು. ಅದರಲ್ಲಿ ವಿಷಯಗಳನ್ನು ಮಂಡನೆ ... ತೀರ್ಮಾನ ತೆಗೆದುಕೊಂಡು ಅಧಿಕಾರಿಗಳ ಮೂಲಕ ...ಷ್ಠಾನಗೊಳಿಸಬೇಕು. ಅದರಲ್ಲೇ ಹೊಟ್ಟೆ ತುಂಬಿರುವ ...ಗಟ್ಟಿಹೋಗಿರುವ ಅಧಿಕಾರಿಗಳು ಅಮಾವಾಸ್ಯೆಗೋ, ...ಮೆಗೋ ಪ್ರಾಧಿಕಾರದತ್ತ ಗಮನಿಸುತ್ತಾರೆ. ಮನಸ್ಸಿಗೆ ... ಕೆಲಸಕ್ಕೆ ಮುಂದಾಗುತ್ತಾರೆ.

ಜೋಭದ್ರ ಕೆಪಿಸಿ

...ಈ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವ ಮೊದಲು ಜೋಗ ...ಪಾತದ ಸಮಸ್ತ ಅಭಿವೃದ್ಧಿ ಕಾರ್ಯಗಳನ್ನು ಕರ್ನಾಟಕ ...ಕ್ತಿ ನಿಗಮ ನಿಯಮಿತ(ಕೆಪಿಸಿ)ದಿಂದ ...ಸಲಾಗುತ್ತಿತ್ತು, ಆದರೆ ಕೆಪಿಸಿ ಅಧಿಕಾರಿಗಳು ಏನು ...ತ್ತಿದ್ದಾರೆ ಎಂದು ನೋಡಲು, ಕೇಳಲು ಯಾರೂ ...ದ್ದಿದ್ದರಿಂದ ಜೋಗ ಕುಲಗೆಟ್ಟುಹೋಯಿತು.

...ಹತ್ತಾರು ವರ್ಷಗಳ ಹಿಂದೆ ಇಲ್ಲಿ ಅಂತರರಾಷ್ಟ್ರೀಯ ...ಮಟ್ಟದ ಈಜುಕೊಳ ನಿರ್ಮಾಣ ಕಾರ್ಯ ...ನಡೆಯಿತು. 1970 ರಲ್ಲಿ ಕೆ.ಪಿ.ಸಿ.ಯು ಅದರ ...ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕ ಬಳಕೆಗೆ ...ಲು ಮಾಡಿಕೊಟ್ಟಿತು. ಈಜುಕೊಳ ಕೆಲವೇ ದಿನಗಳಲ್ಲಿ ... ಹೊಸ ಹುಡುಗರು ಈಜುಪ್ರಿಯರನ್ನು ಸೆಳೆಯಲು ...ಲ್ಲಿ, ಅದರ ಇದ್ದಕ್ಕಿದ್ದಂತೆ ಸಕಾರಣವಿಲ್ಲದೆ





ಈಜುಕೊಳವನ್ನು ಮುಚ್ಚಲಾಯಿತು.

ಇನ್ನು ರಾತ್ರಿ ವೇಳೆ ಜಲಪಾತ ವೀಕ್ಷಿಸಲು ಅನುಕೂಲವಾಗುವಂತೆ ಜಲಪಾತದ ಎದುರು 200 ಅಡಿ ತಗ್ಗಿನಲ್ಲಿ ನಾಲ್ಕು ಬೃಹತ್ ಲೈಟ್‌ಗಳ ಅಳವಡಿಕೆ, 200 ವ್ಯಾಟ್‌ಗಳ 21 ಬಣ್ಣದ ಬಲ್ಬ್‌ಗಳನ್ನು ಹೊಂದಿರುವ ತ್ರಿವರ್ಣ ಬಣ್ಣದ ಕಾರಂಜಿಯನ್ನು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಆದರೆ ಸರಿಯಾದ ನಿರ್ವಹಣೆ ಇಲ್ಲದೆ ಈಗ ಇವು ಯಾವುವೂ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ.

ಜೋಗದ ಸುತ್ತ ಬೇಕಾಬಿಟ್ಟಿಯಾಗಿ ಎಲ್ಲೆಂದರಲ್ಲಿ ತಲೆಯೆತ್ತಿದ್ದ ಗೂಡಂಗಡಿಗಳನ್ನು ತೆರವುಗೊಳಿಸಿ, ಆ ಜಾಗದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ, ಸ್ವಾಗತ ಫಲಕ ನಿರ್ಮಾಣ, ಶಿರೂರು ಕೆರೆ ಸಮೀಪ ತೂಗು ಸೇತುವೆ ನಿರ್ಮಾಣದಂತ ಕೆಲಸಗಳನ್ನು ಪ್ರಾಧಿಕಾರ ಮಾಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಜೋಗಕ್ಕೆ ಹರಿದುಬರುವ ಪ್ರವಾಸಿಗರ ಸಂಖ್ಯೆಯನ್ನು ಗಮನಿಸಿದರೆ ಈ ಅಭಿವೃದ್ಧಿ ಕೆಲಸಗಳು ಯಾವ ಲೆಕ್ಕಕ್ಕೂ ಇಲ್ಲ.



ಆಗಬೇಕಾದ ಅಭಿವೃದ್ಧಿ ಕಾರ್ಯಗಳು

ಇಲ್ಲಿಗೆ ಆಗಮಿಸುವ ಪ್ರವಾಸಿಗರಿಗೆ ತಂಗಲು ಸರಿಯಾದ ವ್ಯವಸ್ಥೆಯೇ ಇಲ್ಲ. ಪ್ರವಾಸಿಗರ ಅನುಕೂಲಕ್ಕಾಗಿ ರಾಣಿ ಫಾಲ್ಸ್ ಬಳಿ ನಿರ್ಮಿಸಿದ್ದ ಯಾತ್ರಿ ನಿವಾಸ ಉದ್ಘಾಟನೆಗಾಗಿಯೇ ಕಳೆದ ಆರು ವರ್ಷಗಳಿಂದ ಕಾಯುತ್ತಾ ಇದೆ. ಪರಿಣಾಮವಾಗಿ ಇದು ಈಗ ಭೂತದ ಬಂಗಲೆಯಂತಾಗಿದೆ. ಇತರೆ ವಸತಿಗೃಹಗಳು ಸರಿಯಾದ ನಿರ್ವಹಣೆಯಿಲ್ಲದೆ ತಂಗಲು ಅಯೋಗ್ಯವಾಗಿವೆ.

ಆದರೆ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಗಳಿಗೆ ಬೇಕಾದ ಸೌಲಭ್ಯವನ್ನು ಪ್ರಾಧಿಕಾರ ಬಹಳ ನಿಷ್ಠೆಯಿಂದ ಹಿಂದಿನಿಂದಲೂ ಮಾಡುತ್ತಲೇ ಇದೆ. ಅಧಿಕಾರಿಗಳು-ಮಂತ್ರಿಗಳು ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡುವವರು; ಆದರೆ ಪ್ರವಾಸಿಗರು ಸರ್ಕಾರದ ಬೊಕ್ಕಸವನ್ನು ಭರ್ತಿ ಮಾಡುವವರು ಎನ್ನುವ ಕನಿಷ್ಠ ಜ್ಞಾನವೂ ಪ್ರಾಧಿಕಾರಕ್ಕೆ ಇಲ್ಲದಂತಾಗಿದೆ.

ಜೋಗ ತನ್ನ ಪ್ರಾಕೃತಿಕ ಸೌಂದರ್ಯದಿಂದ ಪ್ರವಾಸಿಗರ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತದೆ ನಿಜ. ಆದರೆ ಇಲ್ಲಿಗೆ ಬಂದವರಿಗೆ ರುಚಿಯಾದ ಊಟ-ತಿಂಡಿ ಇರಲಿ, ಶುದ್ಧ ಕುಡಿಯುವ ನೀರೂ ಸಹ ಪುಕ್ಕಟೆ ದೊರಕುವುದಿಲ್ಲ. ಪ್ರವಾಸೋದ್ಯಮ ಇಲಾಖೆ ನಡೆಸುವ 'ಮಯೂರ' ಹೋಟೆಲ್‌ನ ತಿಂಡಿ ಊಟಗಳು ಬಾಯಿಗೆ ಹಾಕುವಂತೆ ಇರುವುದಿಲ್ಲ. ಇನ್ನು ಪ್ರಾಧಿಕಾರ ನಿರ್ಮಿಸಿರುವ ಮಳಿಗೆಗಳಲ್ಲಿ ದೊರಕುವ ತಿಂಡಿ, ಪಾನೀಯ ಮುಂತಾದವುಗಳಿಗೆ ಸ್ಟಾರ್ ಹೋಟೆಲ್ ದರ. ಇವೆಲ್ಲವಕ್ಕೂ ಕಡಿವಾಣ ಅಗತ್ಯ.

ಮಳೆಗಾಲದ ರಜೆದಿನಗಳಲ್ಲಿ ದಿನವೊಂದಕ್ಕೆ ಕನಿಷ್ಟ ಎಂದರೂ 5-6 ಸಾವಿರ ವಾಹನಗಳು ಬರುತ್ತವೆ ಎಂದು ಪೊಲೀಸ್ ಮೂಲಗಳು ಹೇಳುತ್ತವೆ. ಆದರೆ ಇಲ್ಲಿ ವಾಹನ ನಿಲುಗಡೆಯೇ ದೊಡ್ಡ ಸಮಸ್ಯೆ ಆಗಿದೆ. ರಸ್ತೆಯ ಮೇಲೆ ವಾಹನಗಳನ್ನು ನಿಲ್ಲಿಸಬೇಕಿದೆ. ಒಮ್ಮೊಮ್ಮೆ ವಾಹನಗಳ ಕ್ಯೂ 5-6 ಕಿ.ಮಿ.ವರೆಗೆ ಸಾಗುತ್ತದೆ. ಜನ ನಡೆದು ಸುಸ್ತಾಗಿ ಜೋಗದ ಸಹವಾಸವೇ ಬೇಡ ಎಂದುಕೊಳ್ಳುತ್ತಾರೆ.

ಇದಲ್ಲದೆ ಸುತ್ತಮುತ್ತಲಿನ ಜನರ ಅನುಕೂಲತೆಗೆ ಬಸ್ ಸ್ಟ್ಯಾಂಡ್ ನಿರ್ಮಾಣ, ಟ್ಯಾಕ್ಸಿ ಮತ್ತು ಆಟೋ ಸ್ಟ್ಯಾಂಡ್‌ಗಳನ್ನು ಅಗತ್ಯವಾಗಿ ಮಾಡಬೇಕಾಗಿದೆ. ಹಾಗೆಯೇ ಜಲಪಾತದ ಸುತ್ತಮುತ್ತ ಪ್ಲ್ಯಾಸ್ಟಿಕ್ ನಿಷೇಧ ಮಾಡಬೇಕೆಂಬ ಆದೇಶವಿದ್ದರೂ ಅದು ಕೇವಲ ಕಾಗದದಲ್ಲೇ ಉಳಿದಿದೆ. ಇಂತಹ ಒಂದು ಸರಳ ಆದೇಶವನ್ನೂ ಅಧಿಕಾರಿಗಳು ಸರಿಯಾಗಿ ನಿರ್ವಹಿಸಿಲ್ಲ ಎಂದರೆ ಇವರು ಇನ್ನು ಏನು ಮಾಡಿಯಾರು ಊಹಿಸಿ!

ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣ ಸಂದರ್ಭದಲ್ಲಿ ಮುಳುಗಡೆಯಾದ ಸುಮಾರು ಐದನೇ ಶತಮಾನದಿಂದ 18 ನೇ ಶತಮಾನದವರೆಗಿನ ವೀರಗಲ್ಲುಗಳು, ಬಸ್ತಿ ಕಲ್ಲು ಹಾಗೂ ಅನೇಕ ದೇವತೆಗಳ ವಿಗ್ರಹಗಳು ಈಗ ಲಿಂಗನಮಕ್ಕಿ ಮಾಡೆಲ್ ಹೌಸ್‌ನಲ್ಲಿ ಇವೆ. ಇವೆಲ್ಲವೂ ಸಾರ್ವಜನಿಕ ವೀಕ್ಷಣೆಗೆ ದೊರಕುವಂತಾಗಬೇಕು. ಇದರಿಂದ ಇತಿಹಾಸ ಸಂಶೋಧಕರು, ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಾಯ ಮಾಡಿದಂತೆ ಆಗುತ್ತದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಆಗಿನ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಸಚಿವರು, ಶಾಸಕರು ಮತ್ತು ಅಧಿಕಾರಿಗಳು ಕಳೆದ ವರ್ಷ ಅಕ್ಟೋಬರ್ 7 ರಂದು ಸಭೆ ನಡೆಸಿ ಹಲವಾರು ನಿರ್ಣಯಗಳನ್ನು ಕೈಗೊಂಡಿದ್ದರು. ಆದರೆ ಅವುಗಳಲ್ಲಿ ಯಾವ ಕೆಲಸಗಳೂ ಕಾರ್ಯರೂಪಕ್ಕೆ ಬಂದಿಲ್ಲ, ಎಂದಿನಂತೆ

ಇಂಗ್ಲಿಷ್‌ನ ತುಂಡುಗಳಾ?

ಇತ್ತೀಚೆಗೆ ನಡೆದ ಜೋಗ ಅಭಿವೃದ್ಧಿ ಪ್ರಾಧಿಕಾರದ ಸಭೆಗೆ ನೆರೆದಿದ್ದ ಅಧಿಕಾರಿಗಳು ಮತ್ತು ಸ್ವತಃ ಸಚಿವ (ಪಿ)ದೇಶ್‌ಪಾಂಡೆ ಇಂಗ್ಲಿಷ್‌ನ ತುಂಡುಗಳಂತೆ ವರ್ತಿಸುತ್ತಿದ್ದರು. ಅದರಲ್ಲೂ ಪ್ರವಾಸೋದ್ಯಮ ಇಲಾಖೆಯ ಅಪರ ಕಾರ್ಯದರ್ಶಿ ಅರವಿಂದ್ ಜಾದವ್ ಕನ್ನಡ ಗೊತ್ತಿಲ್ಲದಂತೆ ನಾಟಕವಾಡುತ್ತಾ ತಿಣುಕಾಡುತ್ತ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದದ್ದು ಮಜಬೂತಾಗಿತ್ತು. ಒಂದೆಡೆ ತಮ್ಮ ಸರ್ಕಾರದಲ್ಲಿ ಕನ್ನಡಕ್ಕೆ ಆದ್ಯತೆ, ಸಮಾನ ಶಿಕ್ಷಣಕ್ಕೆ ಒತ್ತು ಎಂದೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳುತ್ತಿರುವಾಗ ಇನ್ನೊಂದೆಡೆ ಇವರದೇ ಮಂತ್ರಿಮಂಡಲದ ಹಿರಿಯ ಸಚಿವ (ಪಿ)ದೇಶ್‌ಪಾಂಡೆ ಮತ್ತು ಅಧಿಕಾರಿಗಳು ಕನ್ನಡವನ್ನು ಅಡ್ಡಡ್ಡ ಕೊಯ್ದು ಹಾಕಿದ್ದು ಒಂದು ದುರಂತವೇ ಸರಿ.

ಆ ಸಭೆಯೂ ಮಂತ್ರಿಗಳ ಮತ್ತು ಅಧಿಕಾರಿಗಳ ಮೋಜಿನಾಟವಾಗಿತ್ತು, ಆದ್ದರಿಂದ ಪ್ರಾಧಿಕಾರದ ಸಭೆಯೆಂದರೆ ಜೋಗದ ಅಭಿವೃದ್ಧಿಯಲ್ಲ ಬದಲಾಗಿ ಅಧಿಕಾರಿಗಳ ಅಭಿವೃದ್ಧಿ ಎಂದು ಹೇಳದೆ ಬೇರೆ ದಾರಿಯಿಲ್ಲ.

ಕಳೆದ ಬಾರಿ ನಡೆದ ಸಭೆಯಲ್ಲಿ ಜೋಗ ಜಲಪಾತದಲ್ಲಿ ಸಿಸಿಟಿವಿ, ವೈಫೈ ಅಳವಡಿಕೆ, ಜಲಪಾತವನ್ನು ವಿಭಿನ್ನ ದೃಷ್ಟಿಕೋನಗಳಿಂದ ವೀಕ್ಷಿಸಲು ಅನುವಾಗುವಂತೆ ವೀಕ್ಷಣಾ ಗೋಪುರ, ಅಪಾಯದ ಸ್ಥಳಗಳಲ್ಲಿ ಮಾಹಿತಿ ಫಲಕ ಅಳವಡಿಕೆ, ಪ್ರವಾಸಿಗರಿಗೆ ಮಳೆಗಾಲದಲ್ಲಿ ನಿಲ್ಲಲು ಅನುಕೂಲವಾಗುವಂತೆ ಬಸ್ ನಿಲ್ದಾಣ, ಪಾಳು ಬಿದ್ದಿರುವ ಯಾತ್ರಿ ನಿವಾಸ ಮತ್ತು ಜಲಪಾತದ ಮೇಲ್ಭಾಗದಲ್ಲಿರುವ ರಾಜಾ ಫಾಲ್ಸ್‌ನ ಬಳಿಯ ಪ್ರವಾಸಿಮಂದಿರವನ್ನು ಸಮರ್ಪಕವಾಗಿ ನಿರ್ವಹಿಸುವುದು, ಜೋಗ ಜಲಪಾತ ವೀಕ್ಷಣೆಗೆ ತಡೆಗೋಡೆ, ಪೊಲೀಸ್ ಔಟ್‌ಪೋಸ್ಟ್ ನಿರ್ಮಾಣ ಮತ್ತು ಇನ್ನಿತರ ಹಲವಾರು ವಿಷಯಗಳು ಚರ್ಚೆಗೆ ಬಂದಿದ್ದವು. ಆದರೆ ಅವೆಲ್ಲವುಗಳಲ್ಲಿ ಕಾರ್ಯರೂಪಕ್ಕೆ ಬಂದಿದ್ದು ಮಾತ್ರ ಪೊಲೀಸ್ ಔಟ್‌ಪೋಸ್ಟ್ ನಿರ್ಮಾಣ. ಅದೂ ಸಹ ಇದ್ದ ಹಳೆಯ ಪೊಲೀಸ್ ಔಟ್‌ಪೋಸ್ಟ್‌ಗೆ ಸುಣ್ಣ-ಬಣ್ಣ ಹೊಡೆದು ಉದ್ಘಾಟಿಸಲಾಗಿತ್ತೇ ಹೊರತು ಇವತ್ತಿಗೂ ಅಲ್ಲಿನ ಸಿಬ್ಬಂದಿಗೆ ಶೌಚಾಲಯವೂ ಇಲ್ಲ.

ತಾಳಗುಪ್ಪ-ಹಿರೇಮನೆ-ಕಾರ್ಗಲ್‌ಗೆ ಹೋಗುವ ರಸ್ತೆಗಳು ಮತ್ತು ಜೋಗ ಜಲಪಾತದಿಂದ ಐತಿಹಾಸಿಕ ರಾಜಾ ಕಲ್ಲು, ದ್ವಿಮುಖ ಚಾಮುಂಡೇಶ್ವರಿ ದೇವಾಲಯಕ್ಕೆ ಸಾಗುವ ರಸ್ತೆಗಳೂ ಎಷ್ಟು ಎಕ್ಕುಟ್ಟಿಹೋಗಿವೆಯೆಂದರೆ ಅವುಗಳ ಮೇಲೆ ನಡೆದಾಡಲು ಜನ ಹೆದರುವಂತಾಗಿದೆ.

ಪರಿಹಾರ ಏನು?

ಜೋಗ ಅಭಿವೃದ್ಧಿಯಾಗಬೇಕೆಂದರೆ ಇದರಲ್ಲಿ ಸ್ಥಳೀಯರ ಪಾಲ್ಗೊಳ್ಳುವಿಕೆ ಇರಬೇಕು. ಸರ್ಕಾರ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸ್ವರೂಪದಲ್ಲಿ ಜೋಗ ಅಭಿವೃದ್ಧಿ ಪ್ರಾಧಿಕಾರವನ್ನು ರೂಪಾಂತರಿಸಬೇಕು. ಇದಕ್ಕೆ ಪ್ರವಾಸೋದ್ಯಮ ಸಚಿವರು ಅಧ್ಯಕ್ಷರಾಗುವ ಬದಲು ಸ್ಥಳೀಯವಾಗಿ ಪರಿಸರ, ಸಾಮಾಜಿಕ ಸೇವೆಯಲ್ಲಿ ಸಕ್ರಿಯರಾಗಿ ರುವವರನ್ನು ಗುರುತಿಸಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಬೇಕು. ಜೊತೆಗೆ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ಸೇರಿದಂತೆ ವಿವಿಧ ರಂಗಗಳಲ್ಲಿ ಸಕ್ರಿಯವಾಗಿರುವವರನ್ನು ಸದಸ್ಯರನ್ನಾಗಿ ನೇಮಿಸಬೇಕು. ಜಿಲ್ಲಾಧಿಕಾರಿಗಳು ಇದರ ಕಾಯಂ ಕಾರ್ಯದರ್ಶಿಯಾಗಿ ರಬೇಕು. ಆಗ ಪ್ರಾಧಿಕಾರ ಕಾಲಕಾಲಕ್ಕೆ ಸಭೆ ಸೇರಿ ಅವಶ್ಯವಿರುವ ತೀರ್ಮಾನ ತೆಗೆದುಕೊಂಡು ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಮನಸ್ಸು ಮಾಡುವಂತೆ ಸ್ಪೀಕರ್ ಕಾಗೋಡರು ತಮ್ಮ ಪ್ರಭಾವವನ್ನು ಬಳಸಿದರೆ ಜೋಗ ಅಭಿವೃದ್ಧಿಗೆ ಕಾಯಂ ಪರಿಹಾರ ದೊರಕೀತು.

• ವರದಿಗಾರ






ರಾಜ್ ಸ್ಮಾರಕಕ್ಕೆ ಸರ್ಕಾ
ಭೂಮಿ ಕೊಟ್ಟಿತೆಂದು ನಮಗ
ಕೊಡಿ, ರಾಜ್ ಸ್ಮಾರಕಕ್ಕೆ ಸರ್ಕಾ
ಹಣ ಕೊಟ್ಟಂತೆ ನಮಗೂ ಹ
ಕೊಡಿ, ರಾಜ್ ಹೆಸರನ್ನು ರಸ
ಇಟ್ಟಂತೆ ಅದಕ್ಕಿಂತ ದೊಡ್ಡ ರಸ
ಹೆಸರಿಡಿ; ಎಂದೆಲ್ಲ ಹಠಕ್ಕೆ ಬಿ
ಅದೇ ಹಾಸ್ಯಾಸ್ಪದವಾಗುತ್ತ
ಭಾರತಿಯವರಾಗಲಿ, ವಿ
ಅಭಿಮಾನಿಗಳಾಗಲಿ ಪರಿಸ್ಥಿತಿ
ಸತ್ಯ ಅರಿಯಬೇಕು. ಪ್ರಕರ
ಕೋರ್ಟಿನಲ್ಲಿರುವಾಗ ಸರ್ಕಾ
ತಾನೇ ಏನು ಮಾಡಲು ಸಾಧ
ಅಷ್ಟಕ್ಕೂ ವಿಷ್ಣು ಸ್ಮಾರ
ಅಷ್ಟೊಂದು ಸರ್ಕಾರಿ ಭೂಮಿ
ಬೇಕು? ಅಷ್ಟೊಂದು ವಿಶಿ
ಸ್ಮಾರಕ ನಿರ್ಮಿಸಲೇಬೇಕೆಂದಿ
ತಮ್ಮ ಸ್ವಂತ ಜಮೀನಿನಲ್ಲಿ ಸ್ವ
ಹಣದಲ್ಲಿ ನಿರ್ಮಿಸಲು ಅ
ಮಾಡಿದವರ್ಯಾರ

ಸಮಾಧಿ ಬೇಗುದಿ

● ರಾ.ಸೋಮನಾ



ಸತ್ತ ನಂತರವೂ ಸಮಾಧಿಯ ಕಾಟ ತಪ್ಪಲಿಲ್ಲ ಸಾಹಸ ಸಿಂಹ ವಿಷ್ಣುವರ್ಧನ್‌ಗೆ!

ಚಿತೆಗೂ ಚಿಂತೆ ಎಂಬಂತೆ ವಿಷ್ಣು ಕಾಲೈಕ್ಯರಾಗಿ ನಾಲ್ಕು ವರ್ಷಗಳಾದರೂ ನೆಟ್ಟಗೊಂದು ಸಮಾಧಿ ಕೂಡ ಕಟ್ಟುವುದಕ್ಕಾಗದೆ ಹೆಣಗಾಡಬೇಕಾದ ದುರ್ಗತಿಯಂತೂ ತಪ್ಪಲೇ ಇಲ್ಲ. ಕೆಂಗೇರಿಯ ಅಭಿಮಾನ್ ಸ್ಟುಡಿಯೋದ ಖಾಲಿ ಜಾಗದಲ್ಲಿ ಅತ್ತ ಸಮಾಧಿಯೂ ಅಲ್ಲ, ಇತ್ತ ಸ್ಮಾರಕವೂ ಇಲ್ಲ ಎಂಬಂಥ ಸ್ಥಿತಿಯಲ್ಲೇ ಸಾಹಸ ಸಿಂಹನ ಪಾರ್ಥಿವ ನರಳುತ್ತಿದೆ. ಚಿತಾವಶೇಷಗಳನ್ನು ಮೈಸೂರಿಗೆ ಹೊತ್ತೊಯ್ದು ಅಲ್ಲೇ ಸ್ಮಾರಕ ಮಾಡಿ ಯಜಮಾನರ ಆತ್ಮಕ್ಕೆ ಶಾಂತಿ

ಕಲ್ಪಿಸುತ್ತೇನೆಂದು ಪತ್ನಿ ಭಾರತಿ ಸರ್ಕಾರದ ವಿ
ಗೋಣಗಾಡುತ್ತಿದ್ದಾರೆ. ಹಾಗಂತ ಅಭಿಮಾನಿಗಳು ಬಿಡಬ
ಅಣ್ಣನ ಶವಸಂಸ್ಕಾರವಾದ ಸ್ಥಳದಲ್ಲೇ ವಿಷ್ಣು ಸ್ಮಾರ
ಆಗಬೇಕೆಂದು ಭಾರತಿ ವಿರುದ್ಧವೇ ಬೀದಿಗಿಳಿಯು
ಮತ್ತೊಂದೆಡೆ ವಿಷ್ಣು ಕುಚಿಕೂ ಪಾತ್ರಧಾರಿ ಅಂಬರ
ಇದೆಲ್ಲಕ್ಕೂ ದಿವಂಗತ ನಟ ಬಾಲಕೃಷ್ಣರ ಪುತ್ರಿ
ಕಾರಣಳೆಂದು ಉಪಾಯವಾಗಿ ನುಣುಚಿಕೊಳ್ಳ
ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗಿದು ನುಂಗಲ
ಬಿಡಲಾಗದ ಪೇಚಾಟ.

ಬಹುಶಃ ಸತ್ತ ನಂತರವೂ ಸಮಾಧಿಗಾಗಿ ಈ

ಭಾರತಿ ಪಟಾಲಂನಿಂದ ಗೀತಾ ಬಾಲಿಗೆ ಬೆದರಿಕ



ವಿಷ್ಣು ಸ್ಮಾರಕಕ್ಕೆ ಸಂಬಂಧಪಟ್ಟಂತೆ ಪ್ರತಿಯೊಬ್ಬರೂ ದೂಷಿಸುತ್ತಿರುವುದು ದಿವಂಗತ ಬಾಲಕೃಷ್ಣರ ಮೂರನೇ ಪುತ್ರಿ ಗೀತಾಬಾಲಿಯನ್ನು. ಮೊನ್ನೆಯಷ್ಟೇ ಸಚಿವ ಅಂಬಿ ಕೂಡ ಬಾಲಕೃಷ್ಣರ ಪುತ್ರಿಯನ್ನು ಫೋನ್ ಮಾಡಿ ಹೇಳಿಕೆ ಕೊಟ್ಟಿದ್ದಾರೆ. ಈ ಬಗ್ಗೆ ಗೀತಾಬಾಲಿಯವರೇ ತಮ್ಮ ಅಳಲು ತೋಡಿಕೊಂಡಿದ್ದಾರೆ-

..... ನೋಡಿ ಸಾರ್; ಯಾರೋ ಗೊತ್ತುಗುರಿಯಿಲ್ಲದವರು ಈ ರೀತಿ ಹೇಳಿದ್ದರೆ ನಾನು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಅಂಬರೀಶ್ ಕನ್ನಡ ಚಿತ್ರರಂಗದ ಹಿರಿಯ ನಟರು, ಓರ್ವ ಜವಾಬ್ದಾರಿಯುತ ಮಂತ್ರಿ ಕೂಡ. ವಿಷಯದ ತಲೆ ಬುಡ ಗೊತ್ತಿಲ್ಲದೆ ಬಾಲಕೃಷ್ಣರ ಮಗಳು ಕೋರ್ಟಿನಲ್ಲಿ ಕೇಸು ಹಾಕಿರುವುದೇ ವಿಷ್ಣು ಸ್ಮಾರಕ ತಡವಾಗಲು ಕಾರಣ ಎಂದು ಹೇಳಿಕೆ ಕೊಡುತ್ತಾರಲ್ಲ; ಅದು ನ್ಯಾಯವಾ?

ನಾನು ಕೋರ್ಟ್ ಮೆಟ್ಟಿಲೇರಿದ್ದು 2004ರಲ್ಲಿ, ಅಂದರೆ ವಿಷ್ಣು ಸಾರ್ ತೀರಿಕೊಳ್ಳುವುದಕ್ಕೂ, ಐದು ವರ್ಷದ ಮೊದಲೇ ಕೋರ್ಟಿನಿಂದ ಇಂಜಂಕ್ಷನ್ ತಂದಿದ್ದೆ. ಈಗ ನೋಡಿದರೆ ಭಾರತಿಯವರಿಂದ ಹಿಡಿದು ಅಂಬರೀಶ್‌ರ ತನಕ ಪ್ರತಿಯೊಬ್ಬರೂ ನನ್ನನ್ನೇ ವಿಲನ್ ಮಾಡುತ್ತಿದ್ದಾರೆ. ಇಂಥಾ ದಿನಕ್ಕೇ ವಿಷ್ಣು ಸಾರ್ ತೀರಿಕೊಳ್ತಾರೆ, ಅವರನ್ನು ಅಭಿಮಾನ್ ಸ್ಟುಡಿಯೋದಲ್ಲೇ ಸುಡುತ್ತಾರೆ ಎಂದು ನನಗೇನಾದ್ರೂ ಕನಸು ಬಿದ್ದಿತ್ತಾ? ಯಾಕೆ ಪ್ರತಿಯೊಬ್ಬರೂ ಸತ್ಯ ಮುಚ್ಚಿಟ್ಟು ನನ್ನನ್ನು ಅನ್ಯಾಯವಾಗಿ ಖಳನಾಯಕಿಯಂತೆ ಚಿತ್ರಿಸುತ್ತಿದ್ದಾರೆ?

ವಿಷ್ಣು ಸಾರ್ ಬಗ್ಗೆ ನನಗೆ ಅಪಾರ ಗೌರವವಿದೆ ನಿಜ. ಹಾಗಂತ ನಮ್ಮ ತಂದೆಯವರ ಪಾಲಿಗಿರುವ ಏಕೈಕ ಆಸ್ತಿಯನ್ನು ಬಿಟ್ಟುಕೊಡು ಅನ್ನೋದು ಯಾವ ನ್ಯಾಯ? ಅಭಿಮಾನ್ ಸ್ಟುಡಿಯೋದ 20 ಎಕರೆಯಲ್ಲಿ ಉಳಿದಿರೋದು ಹತ್ತು ಎಕರೆ ಮಾತ್ರ. ನನ್ನ ತಮ್ಮಂದಿಬ್ಬರೂ ಶೋಕಿಗೆ ಬಿದ್ದು ಸ್ಟುಡಿಯೋದ ಅರ್ಧ ಭೂಮಿ ಮಾರಿಕೊಂಡಿದ್ದರ ವಿರುದ್ಧವಷ್ಟೇ ನಾನು ಕೋರ್ಟ್ ಮೊರೆ ಹೋಗಿರುವುದು. ಉಳಿಕೆ ಹತ್ತು ಎಕರೆಯಲ್ಲಾದರೂ ತಂದೆಯ ಕನಸನ್ನು ಈಡೇರಿಸಬೇಕೆಂಬುದು ನನ್ನಾಸೆಯೇ ಹೊರತು ಜಮೀನನ್ನು ನನ್ನ ಸ್ವಂತ ಆಸ್ತಿಯನ್ನಾಗಿ ಮಾಡಿಕೊಳ್ಳುವುದಲ್ಲ, ಏಕೆಂದರೆ ಉಳಿದ ಹತ್ತೆಕರೆಯಲ್ಲೇ ನಮ್ಮ ತಂದೆ ಮತ್ತು ತಾಯಿಯವರ ಸಮಾಧಿಯಿದೆ. ಇಲ್ಲೇ ಸ್ಟುಡಿಯೋ ಮತ್ತು ಬಾಲಕೃಷ್ಣರ ಸ್ಮಾರಕ ನಿರ್ಮಿಸಬೇಕೆಂಬುದು ನನ್ನಾಸೆ.

ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಮನೆಗೆ ಬಂದು ಹಾಸಿಗೆ ಹಿಡಿದಿದ್ದ ತಂದೆಯವರನ್ನು ಕಂಡಾಗಲೂ ತಮ್ಮ ಸ್ಟುಡಿಯೋ ಕನಸನ್ನು ನನಸು ಮಾಡುವಂತೆ ಕೈಮುಗಿದು ಬೇಡಿಕೊಂಡಿದ್ದರು!

ಅದು ನಮ್ಮ ತಂದೆಯವರಿಗೆ ಅಭಿಮಾನ ಸ್ಟುಡಿಯೋ ಬಗೆಗಿದ್ದ ಕಾಳಜಿಯಾಗಿತ್ತು, ಒಬ್ಬ ಮಗಳಾಗಿ ಅವರ ಕನಸನ್ನು ನನಸು ಮಾಡಲು ನಾನು ಕೋರ್ಟ್ ಮೊರೆ ಹೊಕ್ಕಿದ್ದೇನೆಯೇ ಹೊರತು ಯಾರ ವಿರುದ್ಧವೂ ಅಲ್ಲ. ವಿಷ್ಣು ಅಂತ್ಯಕ್ರಿಯೆಗೂ ಮುನ್ನ ಸರ್ಕಾರ ಕೋರ್ಟ್ ಆದೇಶದ ಬಗ್ಗೆ ಅರಿಯಬೇಕಿತ್ತು, ಇನ್ನೊಬ್ಬರ ಸೊತ್ತಿನಲ್ಲಿ ಯಾರದೋ ಶವ ತಂದು ಅಂತ್ಯಕ್ರಿಯೆ ಮಾಡಿದ್ದೂ ಅಲ್ಲದೆ ಈಗ ಆ ಜಮೀನನ್ನೇ ಬಿಟ್ಟುಕೊಡಿ ಅನ್ನೋದು ಯಾವ ನ್ಯಾಯ?

ವಿಷ್ಣು ಸಮಾಧಿಯಿರಲಿ ನಾನು ಬೇಡ ಅನ್ನುವುದಿಲ್ಲ, ಆದರೆ ಅದಕ್ಕೊಂದು ಎರಡು ಎಕರೆ ಕೇಳೋದು ಯಾವ ನ್ಯಾಯ? ಇರೋ ಹತ್ತು ಎಕರೆಯಲ್ಲಿ ಎರಡು ಎಕರೆ ಇದಕ್ಕೆಂದೇ ಹೋದರೆ ಉಳಿಕೆ ಎಂಟೆಕರೆಯಲ್ಲಿ ಏನು ಮಾಡಲು ಸಾಧ್ಯ?

ವಿಷ್ಣು ದೊಡ್ಡ ನಟರು. ಅವರ ಬಳಗ ಕೂಡ ದೊಡ್ಡದು. ಅಂಥ ಮಹಾನ್ ನಟನ ಸ್ಮಾರಕವನ್ನು ಮತ್ತೊಬ್ಬ ಹಿರಿಯ ನಟನಿಗೆ ಅನ್ಯಾಯ ಮಾಡಿ ದೌರ್ಜನ್ಯದಿಂದ ನಿರ್ಮಿಸುವುದು ಯಾವ ನ್ಯಾಯ? ಸಮಾಧಿ ಬೇಕಿದ್ದರೆ ಇಲ್ಲೇ ಇರಲಿ. ಆದರೆ ಸ್ಮಾರಕವನ್ನು ಬೇರೆಡೆ ನಿರ್ಮಿಸಬಹುದಲ್ಲ!

ಇದನ್ನೇ ನಾನು ಭಾರತಿಯವರಿಗೂ, ಅಂಬರೀಶ್ ಸರ್‌ಗೂ ಅರ್ಥ ಮಾಡಿಸಲು ಪ್ರಯತ್ನಿಸಿದ್ದು. ನೀವು ನಂಬಲಿಕ್ಕಿಲ್ಲ ಆದ್ಯಾರೋ ಮಂಜು ಅಂಥ ವಿಷ್ಣು ಅಭಿಮಾನಿಯಂತೆ. ನಮ್ಮ ಮನೆಗೆ ಏಳೆಂಟು ಆಟೋಗಳಲ್ಲಿ ರೌಡಿಗಳನ್ನು ಕರೆತಂದು ಬೆದರಿಕೆ ಹಾಕಿದ. ರೌಡಿಗಳ ಕಾಟದಿಂದ ಪಾರಾಗಲು ಅಂಬರೀಶ್ ಮೊರೆ ಹೊಕ್ಕರೆ ಅಲ್ಲೂ ವಿಷ್ಣು ಸಾರ್ ಬಳಗದವರಿಂದ ನನಗೆ ಬೆದರಿಕೆ ಹಾಕಲಾಯ್ತು. ಮಂಜು ಅನ್ನೋ ಆಸಾಮಿ ನೇರವಾಗಿ ಭಾರತಿಯವರಿಗೇ ನನ್ನೆದುರು ಫೋನ್ ಮಾಡಿ ನನ್ನನ್ನು ಮುಗಿಸಿ ಬಿಡ್ತೀನಿ ಅನ್ನೋ ಮಾತಾಡುತ್ತಾನೆ. ರಾತ್ರಿ ಹನ್ನೊಂದೂವರೆ ಹೊತ್ತಿಗೆ 20 ಮಂದಿ ಗಂಡಸರು ನಾನೊಬ್ಬ ಮಹಿಳೆ ಅನ್ನೋದನ್ನೂ ಲೆಕ್ಕಿಸದೆ ಮನೆಗೆ ನುಗ್ಗಿ ಬೆದರಿಕೆ ಹಾಕುತ್ತಾರೆಂದರೆ ಇದು ವಿಷ್ಣು ಮೇಲಿನ ಅಭಿಮಾನದ ವೈಖರಿಯಾ?

ಒಬ್ಬ ಅಸಹಾಯಕ ಮಹಿಳೆಗೆ ತನ್ನ ಬೆಂಬಲಿಗರು ನಡುರಾತ್ರಿ ಮನೆಗೆ ನುಗ್ಗಿ ಕೊಂದು ಹಾಕುವ ಮಾತಾಡುವುದನ್ನು ಕೇಳಿಸಿಕೊಂಡೂ ಭಾರತಿಯವರು ಅದನ್ನು ತಡೆಯುವುದಾಗಲಿ, ಖಂಡಿಸುವುದಾಗಲಿ ಮಾಡುವುದಿಲ್ಲ ಎಂದರೆ ಮನೆಗೆ ನುಗ್ಗಿದವರಿಗೂ ಭಾರತಿಯವರಿಗೂ ಏನು ವ್ಯತ್ಯಾಸ ಬಂತು? ಅಂಬರೀಶ್ ಎದುರಿಗೇ ಅವರ ಮನೆಯಲ್ಲಿ ರೌಡಿಗಳು ನನಗೆ ಬೆದರಿಕೆ ಹಾಕುತ್ತಾರೆಂದರೆ ಅದು ಗೂಂಡಾಗಿರಿಯಲ್ಲದೆ ಮತ್ತೇನು?

ವಿಷ್ಣು ಸಾರ್ ನಮಗಾಗಲಿ, ನಮ್ಮ ತಂದೆಯವರಿಗಾಗಲಿ ನಯಾ ಪೈಸೆಯ ಸಹಾಯವನ್ನೂ ಮಾಡಿಲ್ಲ ಎಂದಮೇಲೆ



ನಾವ್ಯಾಕೆ ಅವರ ಸ್ಮಾರಕಕ್ಕೆ ನಮ್ಮ ಆಸ್ತಿ ಬಿಟ್ಟುಕೊಡಬ
ಇಷ್ಟೆಲ್ಲ ವಿಷ್ಣು ಬಗ್ಗೆ ಮಾತಾಡ್ತಾರಲ್ಲಾ; ಅವರ್ಯಾಕೆ
ಕೈಯಿಂದ ದುಡ್ಡು ಹಾಕಿ ಭೂಮಿ ಖರೀದಿ
ಸ್ಮಾರಕ ನಿರ್ಮಿಸುತ್ತಿಲ್ಲ? ವಿಷ್ಣು ಬಗೆಗಿನ ಅವರ ಅಭಿ
ಏನಿದ್ದರೂ ಕಂಡೋರ ಮೇಲೆ ದಬ್ಬಾಳಿಕೆಗಷ್ಟೇ ಸೀಮಿ

ನೋಡಿ ಸಾರ್... ಈಗಾಗಲೇ ನಾನು ತ
ನೊಂದಿದ್ದೀನಿ. ಕೋರ್ಟಿನಲ್ಲಿ ನಮ್ಮ ಪರ ವಾದಿ
ವಕೀಲರನ್ನು ಕೂಡ ಆಮಿಷವೊಡ್ಡಿ ವಾದಿಸದ
ವಾಡಿದ್ದಾರೆ. ಕೋರ್ಟಿಗೆ ಬರದಂತೆ ನನ
ಬೆದರಿಸುತ್ತಿದ್ದಾರೆ. ಸರ್ಕಾರ ಈಗಾಗಲೇ ಹತ್ತು
ಘೋಷಣೆ ಮಾಡಿ ಐದು ಕೋಟಿ ಮುಂಗಡವನ್ನು
ಸ್ಮಾರಕಕ್ಕೊಂದು ಬಿಡುಗಡೆ ಮಾಡಿರುವಾಗ ಅದೇ ದ
ಜಮೀನು ಖರೀದಿಸಬಹುದಲ್ಲವೆ? ವಿಷ್ಣು ಸ್ಮಾರಕಕ್ಕೆ ಹಿ
ನಟ ಬಾಲಕೃಷ್ಣರ ಆಸ್ತಿಯೇ ಬೇಕೆ?

ವಿಷ್ಣು ಬಗ್ಗೆ ಇವರಿಗೆಲ್ಲ ಅಷ್ಟೊಂದು ಪ್ರಾಮಾಣಿ
ಅಭಿಮಾನವಿದ್ದರೆ ಏಕೆ ಕೈಯಿಂದ ದುಡ್ಡು ಹಾಕಿ
ಮಾಡುತ್ತಿಲ್ಲ?

- ಇದು ಬಾಲಕೃಷ್ಣರ ಪುತ್ರಿ ಗೀತಾಬಾಲಿಯ ಅ
ಕನಿಷ್ಠ ಸರ್ಕಾರಕ್ಕಾದರೂ ಅರ್ಥವಾದೀತೆ?



ಸಿದ್ದರಾಮಯ್ಯನವರ ಜೊತೆ ಭಾರತಿ ವಿಷ್ಣುವರ್ಧನ್....



ವಿಷ್ಣು ಸಮಾಧಿ

, ಪರದಾಟದ ಹೆಣಗಾಟದ ಕರ್ಮ ನಿತ್ತೋ!

ವಿಷ್ಣು ಸ್ಮಾರಕವನ್ನು ಮೈಸೂರಿಗೆ ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಮುಖ್ಯಮಂತ್ರಿ ಯ್ಯನವರೇ ಹೇಳಿಕೆ ಕೊಡಬೇಕಾಯ್ತು. ಇದಕ್ಕೂ ಂದರೆ ಮೊನ್ನೆ ಸೆಪ್ಟೆಂಬರ್ ಏಳರಂದು ವಿಷ್ಣು ರತಿ ವಿರುದ್ಧವೇ ರೊಚ್ಚಿಗೆದ್ದ ಅಭಿಮಾನಿಗಳು ು ಪ್ರತಿಭಟಿಸಬೇಕಾಯ್ತು. ಇದೇ ಸೆಪ್ಟೆಂಬರ್ ಂದರೆ ವಿಷ್ಣೂರ 64 ನೇ ಹುಟ್ಟುಹಬ್ಬ. ವಿಷ್ಣು ಲಿಗೆ ಅದೇ ಗಣರಾಜ್ಯೋತ್ಸವ, ಸ್ವಾತಂತ್ರೋತ್ಸವ ಡ ರಾಜ್ಯೋತ್ಸವ!

ಸೆಪ್ಟೆಂಬರ್ 18!

64ನೇ ಹುಟ್ಟುಹಬ್ಬವನ್ನು ಹಿಂದೆಂದಿಗಿಂತಲೂ ಾಗಿ ಆಚರಿಸಲು ಸಮಸ್ತ ವಿಷ್ಣು ಪರಿವಾರವೇ ಡಿದಂತಿದೆ. ಬನಶಂಕರಿಯಿಂದ ಕೆಂಗೇರಿ ತನಕದ ಿ. ಉದ್ದದ ಪೆರಿಫೆರಲ್ ರಿಂಗ್ ರಸ್ತೆಗೆ ನ್ ಹೆಸರು, ತನ್ನಿಮಿತ್ತ ಅದೇ ರಸ್ತೆಯುದ್ದಕ್ಕೂ ಮೆರವಣಿಗೆ, ತದನಂತರ ಅಭಿಮಾನ್ ಸ್ಟುಡಿಯೋ ಲ್ಲಿರುವ ವಿಷ್ಣು ಸಮಾಧಿಗೆ ವಿಶೇಷ ಪೂಜೆ, ದ ಮೇಲೆ ವಿಷ್ಣು ಮಹಾತ್ಮೆಯನ್ನು ಸಾರುವ ನರಂಜನಾ ಕಾರ್ಯಕ್ರಮ, ಅದಕ್ಕೆ ಪೂರಕವೆಂಬಂತೆ ನೇತ್ರದಾನ, ಉಚಿತ ಆರೋಗ್ಯ ತಪಾಸಣೆ, ಅನ್ನದಾನ ಕಾರ್ಯಕ್ರಮಗಳನ್ನೆಲ್ಲ ಖುದ್ದು ವಿಷ್ಣು ಅಳಿಯ ರುದ್ಧನೇ ಅತ್ತೆ ಭಾರತಿ ಜೊತೆ ನಿಂತು ವ್ವಾನೆ. ರಾಜ್ಯಪಾಲ ಹಂಸರಾಜ್ ಭಾರದ್ವಾಜ್‌ರನ್ನೇ ವಿಷ್ಣು ಹೆಸರಿಡುವ ಕಾರ್ಯಕ್ರಮವನ್ನು ವಿಷ್ಣು ವೇ ಖುದ್ದಾಗಿ ಆಯೋಜಿಸಿದೆ. ಇಷ್ಟೆಲ್ಲಕ್ಕೂ ಸರ್ಕಾರದ ಸಚಿವ ಅಂಬರೀಶ್‌ರೇ ಶಕ್ತಿ ಮೀರಿ ುತ್ತಿದ್ದಾರೆ ನಿಜ.

ಅಭಿಮಾನ್ ಸ್ಟುಡಿಯೋ ಆವರಣದ ವಿಷ್ಣು ೇನಾದರೂ ಸಚಿವ ಅಂಬರೀಶ್ ಆಗಲಿ, ರಾಗಲಿ, ಇನ್ನಾರೇ ಭಕ್ತರಾಗಲಿ, ಖುದ್ದು ಪತ್ನಿ ಆಗಲಿ ಪೂಜೆಗೆ ಕಾಲಿಟ್ಟರೆಂದರೆ ಅದು ತ ಕ್ರಿಯೆ' ಎನಿಸಿಕೊಳ್ಳುತ್ತದೆ. ಈ ಬಗ್ಗೆ ಆಕ್ಷೇಪಣೆ-ದೂರು ಸಲ್ಲಿಸದೇ ಹೋದರೂ ಪ್ರಕಾರ ಅದು ಅಕ್ರಮವಾಗಲಿದೆ. ಅಸಲಿಗೆ ದ, ಸರ್ಕಾರದ್ದೂ ಅಲ್ಲದ ಇನ್ನಾರದೋ ಖಾಸಗಿ ವಿಷ್ಣು ಕಳೇಬರದ ಅಂತ್ಯಕ್ರಿಯೆ ಮಾಡಿ ಅಲ್ಲಿ ಾಗಲಿ, ಸ್ಮಾರಕ ನಿರ್ಮಿಸಲಿಕ್ಕಾಗಲಿ ಕಾನೂನಿನ ಲ್ಲ!

ನಾಳೆ ಕೋರ್ಟು ವ್ಯತಿರಿಕ್ತ ತೀರ್ಪೇನಾದರೂ ಅಲ್ಲಿರುವ ವಿಷ್ಣು ಸಮಾಧಿಯನ್ನೂ ಕಿತ್ತೆಸೆಯುವ ನಟ ಬಾಲಕೃಷ್ಣರ ಕುಟುಂಬಕ್ಕೆ ದಕುತ್ತದೆ!

ವಿವಾದಿತ ಜಾಗ

ದೊಂದು ವಿಲಕ್ಷಣ ಅಡಕತ್ತರಿಗೆ ಸಿಲುಕಿದ ವಿಷ್ಣು ಮತ್ತ ದಿನಕ್ಕೊಂದು ವಾದ, ವಿವಾದ, ಗುತ್ತಿರುವುದಕ್ಕೆ, ಹಾಸ್ಯಬ್ರಹ್ಮ ದಿವಂಗತ ನಟ ಪುತ್ರಿ ಗೀತಾಬಾಲಿ ಹೈಕೋರ್ಟ್‌ನಲ್ಲಿ ಕೇಸು ಕಾರಣವೆಂಬ ವಾಂತಿ, ಅಂಬರೀಶ್‌ರ ದರ ಅರ್ಥವಿದೆಯೇ?

ಕೊನೆಯುಸಿರೆಳೆದದ್ದು 2009 ರ ಡಿಸೆಂಬರ್ , ಮುಖ್ಯಮಂತ್ರಿ ಯಡಿಯೂರಪ್ಪನವರ ರಾಜ್ ವಿರುದ್ಧ ಕತ್ತಿ ಮಸೆಯುತ್ತಿದ್ದ ಬ್ರಾಹ್ಮಣ ಮತ್ತು ... ಲಾಬಿಯ ಒತ್ತಡಕ್ಕೂ ... ಸರ್ಕಾರ ಆತುರಾತುರವಾಗಿ ಕೆಂಗೇರಿಯ

ಅಭಿಮಾನ್ ಸ್ಟುಡಿಯೋ ಆವರಣದಲ್ಲಿ ವಿಷ್ಣು ಅಂತ್ಯಕ್ರಿಯೆ ನಡೆಸಿಬಿಟ್ಟಿತು. ರಾಜ್ ಕಳೇಬರವನ್ನು ಸರ್ಕಾರಿ ಸ್ವಾಧೀನದ ಕಂಠೀರವ ಸ್ಟುಡಿಯೋದ ಆವರಣದಲ್ಲಿ ಹೂತಂತೆ ವಿಷ್ಣು ಪಾರ್ಥಿವ ಶರೀರಕ್ಕೂ ಇದಕ್ಕೆ ಪರ್ಯಾಯವಾದ ಸರಿಸಮನಾದ ಗೌರವ, ಮಹತ್ವ ಕಲ್ಪಿಸುವ ಮಡಿವಂತ ಮನಸ್ಥಿತಿಯ ಆತುರಗೇಡಿತನದಿಂದಾಗಿ ಬಾಲಕೃಷ್ಣರ ಅಭಿಮಾನ್ ಸ್ಟುಡಿಯೋದ ಅಸಲೀ ಮರ್ಮ ಕೂಡ ಅರ್ಥವಾಗಲಿಲ್ಲ.

ಅಭಿಮಾನ್ ಸ್ಟುಡಿಯೋಗೆಂದು ಕರ್ನಾಟಕ ಸರ್ಕಾರ ಕೆಂಗೇರಿ ಸಮೀಪ ಬಾಲಕೃಷ್ಣರಿಗೆ ಆ ಕಾಲದಲ್ಲೇ 20 ಎಕರೆ ಭೂಮಿ ಮಂಜೂರು ಮಾಡಿತ್ತಾದರೂ 2003 ರ ಹೊತ್ತಿಗೆ ಅದರ ಹತ್ತೆಕರೆಯನ್ನು ಬಾಲಕೃಷ್ಣರ ಮಕ್ಕಳು ಮಾರಿ ಹಾಕಿದ್ದರು. ಬಾಲಕೃಷ್ಣರ ಕೊನೇ ಮಗ ಶ್ರೀನಿವಾಸ್ ಮತ್ತಾತನ ಅಣ್ಣ ಗಣೇಶ್ ಸೇರಿಕೊಂಡು ಮಾಜಿ ಎಮ್ಮೆಲ್ಸಿ ಬಾಲಕೃಷ್ಣರಿಗೆ ಹತ್ತೆಕರೆಯನ್ನು ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಮಾರಿದ್ದೇ ಕಾನೂನುಬಾಹಿರವಾಗಿತ್ತು. ಇದರ ವಿರುದ್ಧ ಬಾಲಕೃಷ್ಣರ ಮೂರನೇ ಮಗಳು ಗೀತಾಬಾಲಿ 2004 ರಲ್ಲೇ ಕೋರ್ಟ್ ಮೆಟ್ಟಿಲೇರಿದ್ದರು.

ಬಾಲಕೃಷ್ಣರ ಐವರು ಮಕ್ಕಳ ಪೈಕಿ ಮೊದಲ ಮಗಳು ಬೃಂದಾ ಮತ್ತು ಎರಡನೇ ಪುತ್ರಿ ಭಾರತಿ ಸದ್ಯ ಚೆನ್ನೈನಲ್ಲಿ ವಾಸಿಸುತ್ತಿದ್ದಾರೆ. ಮೂರನೆಯವರು ಗೀತಾಬಾಲಿ. 1994 ರಲ್ಲಿ ತಮ್ಮ ಪತ್ನಿ ತೀರಿಕೊಂಡ ನಂತರ ಬದುಕಿನ ಕೊನೆಗಾಲವನ್ನೆಲ್ಲ ಬಾಲಕೃಷ್ಣ ಕಳೆದದ್ದು ವಿಲ್ಸನ್ ಗಾರ್ಡನ್ನಿನ ಮೂರನೇ ಮಗಳ ಮನೆಯಲ್ಲೇ. ಪತ್ನಿ ತೀರಿಕೊಂಡ 10 ತಿಂಗಳಿಗೇ ಬಾಲಕೃಷ್ಣ ಕೂಡ ಕೊನೆಯುಸಿರೆಳೆದರು. ಅಭಿಮಾನ್ ಸ್ಟುಡಿಯೋ ಆವರಣದಲ್ಲೇ ಪತ್ನಿ ಸಮಾಧಿಯ ಪಕ್ಕ ಬಾಲಕೃಷ್ಣರ ಸಮಾಧಿಯನ್ನು ನಿರ್ಮಿಸಲಾಯ್ತು. ಆದರೆ ತಂದೆ ತೀರಿಕೊಂಡಿದ್ದೇ ತಡ ಮೊದಲ ಮಗ ಗಣೇಶ್ ಮತ್ತು ಕೊನೇ ಮಗ ಶ್ರೀನಿವಾಸ್ ಸ್ಟುಡಿಯೋದ 20 ಎಕರೆಯನ್ನು ತಲಾ ಹತ್ತೆಕರೆಯಂತೆ ವಿಭಾಗ ಪತ್ರ ಮಾಡಿಕೊಂಡರು. ಈ ಪೈಕಿ ಹತ್ತೆಕರೆಯನ್ನು ಶ್ರೀನಿವಾಸ್ ಅದೆಷ್ಟೋ ಕೋಟಿಗೆ ಮಾರಿ ಹಾಕಿ ನಾಪತ್ತೆಯಾಗಿಬಿಟ್ಟ.

ಬಿಜೆಪಿ ಸರ್ಕಾರದ ಆತುರ

ಸ್ಟುಡಿಯೋದ ಹತ್ತೆಕರೆಯನ್ನು ಮಾರಿದ್ದೇ ಕಾನೂನುಬಾಹಿರವಾಗಿತ್ತು. ಸರ್ಕಾರ ಜಮೀನು ನೀಡುವಾಗಲೇ ಚಿತ್ರರಂಗದ ಉದ್ದೇಶವಲ್ಲದೆ ಬೇರೆ ಉದ್ದೇಶಕ್ಕೆ ಬಳಸದಂತೆ ಷರತ್ತು ವಿಧಿಸಿತ್ತು. ಜೊತೆಗೆ ಮಂಜೂರಾದ ಜಮೀನಿನ ಮೇಲೆ ಬಾಲಕೃಷ್ಣರ ಐವರೂ ಮಕ್ಕಳಿಗೆ ಸಮಾನ ಹಕ್ಕಿತ್ತು. ಇದೆಲ್ಲ ಕಾನೂನು ಅವಕಾಶಗಳನ್ನು ಬಳಸಿಕೊಂಡೇ ಗೀತಾಬಾಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ ವಿಷ್ಣು ಮೈಸೂರಲ್ಲಿ ಅಕಾಲಿಕ ಮರಣಕ್ಕೀಡಾಗಿದ್ದೇ ಬ್ರಾಹ್ಮಣ ಲಾಬಿಗೆ ಮಣಿದ ಬಿಜೆಪಿ ಸರ್ಕಾರ ರಾಜ್‌ಗೆ ಸರಿಸಮವಾಗಿ ವಿಷ್ಣುವನ್ನು ಬಿಂಬಿಸಲೆತ್ನಿಸಿ ಪೇಚಿಗೆ ಸಿಲುಕಿತು.

ಅಭಿಮಾನ್ ಸ್ಟುಡಿಯೋ, ಅದರ ಭೂವಿವಾದ, ಬಾಲಕೃಷ್ಣರ ಮಕ್ಕಳ ಕಚ್ಚಾಟ, ಇದೆಲ್ಲದರ ಹಿಂದಿರುವ ರಿಯಲ್ ಎಸ್ಟೇಟ್ ಮಾಫಿಯಾ ಯಾವುದನ್ನೂ ಗಮನಿಸದೆ ರಾತ್ರೋರಾತ್ರಿ ಮೈಸೂರಿನಿಂದ ಬೆಂಗಳೂರಿಗೆ ವಿಷ್ಣು ಕಳೇಬರವನ್ನು ತರಲಾಯ್ತು. ಬಿಜೆಪಿಯ ಬ್ರಾಹ್ಮಣ ನೇತಾರನೊಬ್ಬನ ಆಣತಿಯಂತೆ ರಾಜ್ ಸ್ಮಾರಕಕ್ಕೆ ಸರಿಸಮನಾಗಿ ಅಭಿಮಾನ್ ಸ್ಟುಡಿಯೋದಲ್ಲಿ ಅಂತ್ಯಕ್ರಿಯೆಗೆ ಯೋಜಿಸಲಾಯ್ತು.

ವಾಸ್ತವವಾಗಿ ವರನಟ ರಾಜ್ ಮತ್ತು ವಿಷ್ಣುವನ್ನು ಪರಸ್ಪರ ಹೋಲಿಕೆ ಮಾಡುವುದೇ ಮೂರ್ಖತನ. ರಾಜ್ ಹಿನ್ನೆಲೆ, ವ್ಯಕ್ತಿತ್ವ, ಪ್ರತಿಭೆ, ಮಾಡಿದ ಪಾತ್ರಗಳು, ಕನ್ನಡ ಜನಮಾನಸದಲ್ಲಿ ಅವರಿಗಿರುವ ಸ್ಥಾನ, ಕನ್ನಡಕ್ಕಾಗಿ ನಡೆಸಿದ ಹೋರಾಟ ಇತ್ಯಾದಿಗಳನ್ನು ವಿಷ್ಣು ಯಾವ ಕಾಲಕ್ಕೂ ಸರಿಗಟ್ಟಲು ಸಾಧ್ಯವಿಲ್ಲ. ಚಿತ್ರಗಳ ಸಂಖ್ಯೆಯ ದೃಷ್ಟಿಯಿಂದಾಗಲೀ, ಅಭಿಮಾನಿಗಳ ಸಂಖ್ಯೆಯಿಂದಾಗಲೀ, ವಿಷ್ಣುವನ್ನು ರಾಜ್‌ಗೆ ಸರಿಸಮರೆಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನವಷ್ಟೇ.

ಇಂಥದ್ದೇ ಅಚಾತುರ್ಯಕ್ಕೆ ಬಿದ್ದ ವಿಷ್ಣು ಲಾಬಿಗೆ ತನ್ನ ತಪ್ಪಿನ ಅರಿವಾಗಿದ್ದು ಅಭಿಮಾನ್ ಸ್ಟುಡಿಯೋ ಒಡೆತನಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್ ನೀಡಿದ್ದ ಇಂಜಂಕ್ಷನ್ ಆದೇಶವನ್ನು ಕಂಡಾಗಲೆ. ವಿಷ್ಣು ಕೊನೆಯುಸಿರೆಳೆದದ್ದು 2009 ರಲ್ಲಾದರೆ ಬಾಲಕೃಷ್ಣರ ಮಗಳು ಗೀತಾಬಾಲಿ ಪರ 2004 ರಲ್ಲೇ ಹೈಕೋರ್ಟ್ ಇಂಜಂಕ್ಷನ್ ಆದೇಶ ನೀಡಿತ್ತು. ಸರ್ಕಾರದ ಆತುರದ ಒತ್ತಡಕ್ಕೆ ಸಿಲುಕಿದ ವಾರ್ತಾ ಇಲಾಖೆ ಅಭಿಮಾನ್ ಸ್ಟುಡಿಯೋದಲ್ಲಿ ಅವಸರದ ಅಂತ್ಯಸಂಸ್ಕಾರಕ್ಕೆ ಕೈಯಿಟ್ಟಿತು. ಎಲ್ಲಾ ಮುಗಿದು ಇನ್ನೇನು ವಿಷ್ಣು ಸ್ಮಾರಕಕ್ಕೆ ಸರ್ಕಾರ ಮುಂದಾಗಬೇಕೆನ್ನುವಷ್ಟರಲ್ಲಿ ಕೋರ್ಟ್ ಆದೇಶ ಎದುರಿಗಿತ್ತು.



ಅಂಬಿಯ ಅಜ್ಞಾನ

ಇಡೀ ಪ್ರಕರಣದಲ್ಲಿ ಬಾಲಕೃಷ್ಣರ ಪುತ್ರಿ ಗೀತಾಬಾಲಿಯನ್ನು ಸಚಿವ ಅಂಬರೀಶ್ ಸೇರಿದಂತೆ ಅನೇಕರು ಖಳನಾಯಕಿಯಂತೆ ಭಾವಿಸಿದರೇ ಹೊರತು ಆಕೆ ವಿಷ್ಣು ಸಾವಿಗಿಂತಲೂ ಐದು ವರ್ಷಗಳ ಮೊದಲೇ ಕೇಸು ಹಾಕಿದ್ದ ವಾಸ್ತವವನ್ನು ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಮೈಸೂರಿನಲ್ಲಿ ಕೊನೆಯುಸಿರೆಳೆದಿದ್ದ ವಿಷ್ಣು ಕಳೇಬರವನ್ನು ಬೆಂಗಳೂರಿಗೆ ತಂದಿದ್ದೇ ಸರ್ಕಾರ ಮಾಡಿದ ಮೊದಲ ತಪ್ಪಾಗಿತ್ತು. ಅಭಿಮಾನ್ ಸ್ಟುಡಿಯೋ ಒಡೆತನಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್ ನೀಡಿದ್ದ ಇಂಜಂಕ್ಷನ್ ಬಗ್ಗೆ ತಲೆ ಕೆಡಿಸಿಕೊಳ್ಳದೆ ಹೋಗಿದ್ದು ಸರ್ಕಾರದ ಎರಡನೇ ಯಡವಟ್ಟಾಗಿತ್ತು. ಇಲ್ಲಿ ಅಸಲಿ ಅಪರಾಧಿಯೆಂದರೆ ಕೋರ್ಟ್ ಆದೇಶವನ್ನು ಸರ್ಕಾರದ ಗಮನಕ್ಕೆ ತಾರದೆ ಒಳಗಿಂದೊಳಗೇ ವಿಷ್ಣು ಸ್ಮಾರಕಕ್ಕೆಂದು ಸರ್ಕಾರದಿಂದ ಎರಡು ಕೋಟಿ ಲಪಟಾಯಿಸಲು ಯತ್ನಿಸಿದ ಬಾಲಕೃಷ್ಣರ ಹಿರಿಮಗ ಗಣೇಶ್!

ಹಾಗೆ ನೋಡಿದರೆ ಬಾಲಕೃಷ್ಣರ ಮಗಳು ಗೀತಾಬಾಲಿಯದು ಏನೇನೂ ತಪ್ಪಿರಲಿಲ್ಲ. ವಿಕಟವೆಂದರೆ ಈಗ ಏಕಾಏಕಿ ಜ್ಞಾನೋದಯವಾದಂತೆ ಭಾರತಿಯವರು ಸರ್ಕಾರ ಮತ್ತು ಸಚಿವ ಅಂಬರೀಶ್‌ಗೆ ಹಿಡಿಶಾಪ ಹಾಕುತ್ತಾ ವಿಷ್ಣು ಸ್ಮಾರಕವನ್ನು ಮೈಸೂರಿಗೆ ಸ್ಥಳಾಂತರಿಸುವ ಬೆದರಿಕೆ ಹಾಕುತ್ತಿರುವುದು-

ವಿಷ್ಣು ಕುರಿತ ಪ್ರತಿಯೊಂದು ವಿಷಯಕ್ಕೂ ವರನಟ ರಾಜ್ ವಿರುದ್ಧ ಪೈಪೋಟಿಗೆ ಬಿದ್ದರೆ ಇಂಥ ಯಡವಟ್ಟು ಗಳಲ್ಲದೆ ಮತ್ತೇನೂ ಸಾಧ್ಯವಿಲ್ಲ. ರಾಜ್ ಸ್ಥಾನಮಾನವೇ ಬೇರೆ, ವಿಷ್ಣು ವ್ಯಕ್ತಿತ್ವವೇ ಬೇರೆ. ತನ್ನ ಕಠಿಣ ಪರಿಶ್ರಮ ಮತ್ತು ಛಲದಿಂದ ಇಡೀ ಚಿತ್ರರಂಗವನ್ನು ಮುನ್ನಡೆಸಿದ್ದು ರಾಜ್. ಆದರೆ ವಿಷ್ಣು ಅವರಿಗೆ ಆ ಮಟ್ಟದ ಪರಿಶ್ರಮವಿಲ್ಲದೆ ಸಾಂದರ್ಭಿಕ ಲಾಭದ ಅನುಕೂಲವಿತ್ತು. ಜೊತೆಗೆ ಬ್ರಾಹ್ಮಣ ಪತ್ರಕರ್ತರ ಲಾಬಿ ಕೂಡ ಬೆನ್ನಿಗಿತ್ತು. ರಾಜ್ ಕನ್ನಡಕ್ಕಾಗಿ ಬೀದಿಗಿಳಿದಿದ್ದರ ವ್ಯತಿರಿಕ್ತ ಪರಿಣಾಮದ ಫಲವಾಗಿ ಕನ್ನಡ ದ್ವೇಷಿ ಲಾಬಿ ಕೂಡ ವಿಷ್ಣು ಬೆಂಬಲಕ್ಕೆ ನಿಂತಿತು. ವಿಷ್ಣು ಉತ್ತಮ ನಟ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ ನಿಜ. ಹಾಗಂತ ಅವರ ಕುಟುಂಬದವರು ರಾಜ್‌ಗೆ ತಾವೇ ಪರ್ಯಾಯ ಅಥವಾ ರಾಜ್‌ಗಿಂತ ತಾವೇ ಶ್ರೇಷ್ಠ ಎಂದು ಭಾವಿಸಬೇಕಿಲ್ಲ. ಹಾಸ್ಯನಟ ಬಾಲಕೃಷ್ಣ ಕೂಡ ಪ್ರತಿಭೆ ಮತ್ತು ನಟನೆಯಲ್ಲಿ ರಾಜ್‌ಗಿಂತ, ವಿಷ್ಣುಗಿಂತ ಕಮ್ಮಿಯೇನಲ್ಲ.

ರಾಜ್ ಸ್ಮಾರಕಕ್ಕೆ ಸರ್ಕಾರ ಭೂಮಿ ಕೊಟ್ಟಿತೆಂದು ನಮಗೂ ಕೊಡಿ, ರಾಜ್ ಸ್ಮಾರಕಕ್ಕೆ ಸರ್ಕಾರ ಹಣ ಕೊಟ್ಟಂತೆ ನಮಗೂ ಹಣ ಕೊಡಿ, ರಾಜ್ ಹೆಸರನ್ನು ರಸ್ತೆಗೆ ಇಟ್ಟಂತೆ ಅದಕ್ಕಿಂತ ದೊಡ್ಡ ರಸ್ತೆಗೆ ಹೆಸರಿಡಿ; ಎಂದೆಲ್ಲ ಹಟಕ್ಕೆ ಬಿದ್ದರೆ ಅದೇ ಹಾಸ್ಯಾಸ್ಪದವಾಗುತ್ತದೆ. ಭಾರತಿಯವರಾಗಲಿ, ವಿಷ್ಣು ಅಭಿಮಾನಿಗಳಾಗಲಿ ಪರಿಸ್ಥಿತಿಯ ಸತ್ಯ ಅರಿಯಬೇಕು. ಪ್ರಕರಣ ಕೋರ್ಟಿನಲ್ಲಿರುವಾಗ ಸರ್ಕಾರ ತಾನೇ ಏನು ಮಾಡಲು ಸಾಧ್ಯ? ಅಷ್ಟಕ್ಕೂ ವಿಷ್ಣು ಸ್ಮಾರಕಕ್ಕೆ ಅಷ್ಟೊಂದು ಸರ್ಕಾರಿ ಭೂಮಿ ಏಕೆ ಬೇಕು? ಅಷ್ಟೊಂದು ವಿಶಿಷ್ಟ ಸ್ಮಾರಕ ನಿರ್ಮಿಸಲೇಬೇಕೆಂದಿದ್ದರೆ ತಮ್ಮ ಸ್ವಂತ ಜಮೀನಿನಲ್ಲಿ ಸ್ವಂತ ಹಣದಲ್ಲಿ ನಿರ್ಮಿಸಲು ಅಡ್ಡಿ ಮಾಡಿದವರ್ಯಾರು?

ಇದ್ದಕ್ಕಿದ್ದಂತೆ ಮೈಸೂರಿಗೆ ವಿಷ್ಣು ಸ್ಮಾರಕ ಸ್ಥಳಾಂತರಿಸುತ್ತೇನೆಂದು ಸರ್ಕಾರವನ್ನು ಬ್ಲ್ಯಾಕ್‌ಮೇಲ್ ಮಾಡುವುದು, ಅಭಿಮಾನ್ ಸ್ಟುಡಿಯೋದಲ್ಲಿ ವಾಸ್ತು ಸರಿಯಿಲ್ಲವೆಂದು ಯಾರೋ ಜ್ಯೋತಿಷಿ ಹೇಳಿದ್ದನ್ನು ನಂಬಿ ಸರ್ಕಾರದ ವಿರುದ್ಧ ಗೊಣಗುವುದು, ಪ್ರಕರಣ ನ್ಯಾಯಾಲಯದಲ್ಲಿರುವುದು ಗೊತ್ತಾಗಿಯೂ ಸಚಿವ ಅಂಬರೀಶ್ ಏನೇನೂ ಮಾಡುತ್ತಿಲ್ಲ ಎನ್ನುವುದು ಭಾರತಿಯವರಿಗಾಗಲಿ, ವಿಷ್ಣು ಅಭಿಮಾನಿಗಳಿಗಾಗಲಿ ಥರವಲ್ಲ. ವಿಷ್ಣು ಕುರಿತಂತೆ ಉಳಿದಿರುವ ಗೌರವಕ್ಕೂ ಚ್ಯುತಿ ಬರಬಾರದಲ್ಲವೆ?

ವೈಚಾರಿಕತೆಯನ್ನು ಹುಟ್ಟು ಹಾಕಿದ್ದರೆ ಭಾರತದಲ್ಲಿ ಇಂದಿಗೂ ಮೂಲಭೂತ ಸಮಸ್ಯೆಗಳು ಇರುತ್ತಿರಲಿ

ಸುದ್ದಿಗನ್ನಡಿ

ಸಾಹಿತಿ-ಕಲಾವಿದ-ಚಿಂತಕರ

ಸಂದರ್ಶನ

- ಸಂದರ್ಶನ: ಪಾರ್ವತೀಶ

ಡಾ. ವಸು ವ

ಕರ್ನಾಟಕದ ಯುವ ಚಿಂತಕರಲ್ಲಿ ಒಬ್ಬರಾಗಿರುವ ಡಾ. ವಸು ಮಳಲಿ ಚರಿತ್ರೆಯ ಅಧ್ಯಯನ, ಸ್ತ್ರೀವಾದಿ ಚಿಂತನೆ, ಸಾಹಿತ್ಯ ಹಾಗೂ ಸಿನಿಮಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿರುವ, ಆ ಮೂಲಕ ಅನೇಕರಲ್ಲಿ ಕುತೂಹಲಕ್ಕೂ ಕಾರಣರಾಗಿರುವ ಮಹಿಳೆ.

ಡಾ. ವಸುರೊಂದಿಗೆ 'ಲಂಕೇಶ್' ನಡೆಸಿದ ಸಂದರ್ಶನವು ಅವರ ಆಸಕ್ತಿ ಹಾಗೂ ಕ್ರಿಯಾಶೀಲತೆಗಳನ್ನು ಬಿಂಬಿಸುವಂತಿದೆ.

1. ಮೌಖಿಕ ಚರಿತ್ರೆ ಕುರಿತ ಅಧ್ಯಯನ ನಿಮ್ಮ ಗಮನ ಸೆಳೆದಿದ್ದು ಹೇಗೆ? ಯಾಕೆ?

ಸಂಶೋಧನಾ ವಿದ್ಯಾರ್ಥಿಯಾಗಿ 'ಮೌಖಿಕ ಚರಿತ್ರೆ'ಯನ್ನು ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೆ. ಅಮೆರಿಕದ ಸಂಶೋಧನಾ ಮಾದರಿಯನ್ನು ಅಳವಡಿಸಿಕೊಂಡು ಸಂದರ್ಶನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಲಿಖಿತ ದಾಖಲೆಗಳಿಗೆ ಹೋಲಿಸಿ ನೋಡುವ ಪ್ರಯತ್ನ ಮಾಡಿದೆ. ಆದರೆ ಆನಂತರದ ಓದು ಮೌಖಿಕ ಸಂಪ್ರದಾಯಗಳಲ್ಲಿ (Oral Tradition) ಅಂದರೆ ಜನಪದ ಸಾಹಿತ್ಯವನ್ನು ಚರಿತ್ರೆಯ ಆಕರವಾಗಿ ನೋಡುವುದು ಹೆಚ್ಚು ಅಗತ್ಯವೆನಿಸುತ್ತಿದೆ. ಜನಪದ ಸಾಹಿತ್ಯದ ಅಧ್ಯಯನಗಳ ಓದು ಇಂದು ವಿಪುಲವಾಗಿ ಸಾಗಿದೆ. ಆದರೆ ಅದನ್ನು ಚರಿತ್ರೆಯ ದಾಖಲೆಗಳಾಗಿ ನೋಡಲು ಹೊಸ ರೀತಿಯ ಸಂಶೋಧನಾ ಕ್ರಮವನ್ನೇ ಅಳವಡಿಸಿಕೊಳ್ಳಬೇಕಾಗುತ್ತದೆ.

ಭಾರತದಂತಹ ದೇಶಗಳ ಚರಿತ್ರೆಯನ್ನು ಕಟ್ಟಲು ನಾವು ಹೆಚ್ಚೆಚ್ಚು ಜನಪದ ಆಕರಗಳನ್ನೇ ಬಳಸಿಕೊಳ್ಳಬೇಕಾಗುತ್ತದೆ. ಅದರಲ್ಲೂ ಜನರ ಚರಿತ್ರೆಯನ್ನು ಕಟ್ಟಲು ಮೌಖಿಕ ಆಕರಗಳು ಬಹುದೊಡ್ಡ ಸಂಪತ್ತು, ಇದೊಂದು ಹೊಸ ರೀತಿಯ ಚರಿತ್ರೆಯನ್ನು ಕಟ್ಟಲು ಸಾಧ್ಯವಿದೆ. ಈ ಎಲ್ಲಾ ಕಾರಣಗಳಿಂದ 'ಮೌಖಿಕ ಚರಿತ್ರೆ' ನನ್ನಲ್ಲಿ ಆಸಕ್ತಿಯನ್ನು ಹುಟ್ಟುಹಾಕಿದೆ.

2. ಇಂದಿನ ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ(ನಿರ್ದಿಷ್ಟವಾಗಿ ಕರ್ನಾಟಕದಲ್ಲಿ) ಸಂಸ್ಕೃತಿಯ ಬಗ್ಗೆ ನಿಮ್ಮ ಅನಿಸಿಕೆಗಳು ಹಾಗೂ ಸಲಹೆಗಳೇನು?

ವಿ.ವಿ. ಶೈಕ್ಷಣಿಕ ಸಂಸ್ಕೃತಿ: ವಿಶ್ವವಿದ್ಯಾಲಯಗಳು ನಾಡಿನ ಬಹಳ ದೊಡ್ಡ ಯೋಜನೆ. ಅದಕ್ಕಾಗಿ ಸುರಿಯುತ್ತಿರುವ ಹಣದ ಮೊತ್ತವೂ ದೊಡ್ಡದು. ಅಡೆತಡೆಯಿಲ್ಲದೆ ವಿದ್ಯಾರ್ಥಿಗಳು ಸರ್ಟಿಫಿಕೇಟ್ ಪಡೆದುಕೊಂಡು ಹೊರಹೋಗುತ್ತಾರೆ.

ಆದರೆ ವಾಸ್ತವದಲ್ಲಿ ಅವರು ಕಲಿತದ್ದೇನು ಎಂಬ ಪ್ರಶ್ನೆ ಸದಾ ಕಾಡುತ್ತದೆ. ಒಂದು ವ್ಯವಸ್ಥೆಯಾಗಿ ಪಠ್ಯಕ್ರಮ, ವೇಳಾಪಟ್ಟಿ, ಪರೀಕ್ಷೆ ಮೌಲ್ಯಮಾಪನ ಇವೆಲ್ಲಾ ಎಡೆಬಿಡದೆ ಸಾಗುತ್ತಿವೆ. ವಿದ್ಯಾರ್ಥಿಗಳು ಅಥವಾ ಸಮಾಜ ಉದ್ಯೋಗಕ್ಕಾಗಿ ಶಿಕ್ಷಣ ಪಡೆಯುತ್ತಿದ್ದಾರೆ. ವ್ಯಕ್ತಿತ್ವವನ್ನು ರೂಪಿಸುವಾಗ ಇಡೀ ವ್ಯವಸ್ಥೆಗೆ ಬದ್ಧತೆ, ಪ್ರಾಮಾಣಿಕತೆ ಎರಡೂ ಬೇಕು.

ಹಿಂದೆ ಬೋಧಿಸುತ್ತಿದ್ದ ಬೋಧಕರನ್ನು ಕುರಿತು ಆ ಕಾಲ ಉತ್ತಮವಾಗಿತ್ತೆಂದು ಹೇಳುವವರಿದ್ದಾರೆ. ಶಿಕ್ಷಣದ ಅಂದಿನ ಗುರಿ ಸಮಾಜದ ಹಿತಾಸಕ್ತಿಯಾಗಿತ್ತು, ಇಂದು ಜಾಗತಿಕ ಮಾರುಕಟ್ಟೆಗೆ ಸಮಾಜವನ್ನು ಹದಗೊಳಿಸುತ್ತಿದ್ದೇವೆ ಎನಿಸುತ್ತದೆ. ವಿದ್ಯಾರ್ಥಿಗಳು ಶಿಕ್ಷಕರು ಹೇಳಿದ್ದನ್ನು ಪ್ರಶ್ನಾತೀತವಾಗಿ ಒಪ್ಪಿಕೊಳ್ಳುತ್ತಿದ್ದಾರೆ.

ಅವರಲ್ಲಿ ವೈಚಾರಿಕತೆಯನ್ನು ಹುಟ್ಟುಹಾಕಲು ಸಾಧ್ಯವಾಗಿದ್ದರೆ ಭಾರತದ ಮೂಲಭೂತ ಸಮಸ್ಯೆಗಳು ಇಂದಿಗೂ ಹಾಗೆ ಮುಂದುವರೆಯುತ್ತಿರಲಿಲ್ಲ.

3. ನಿಮ್ಮನ್ನು ಚಿಂತನೆ ಹಾಗೂ ಬರವಣಿಗೆಗೆ ಪ್ರೇರೇಪಿಸಿದ ಸಂದರ್ಭಗಳಾವುದು?

ಬೆಂಗಳೂರು ವಿ.ವಿ.ದ ಸ್ನಾತಕೋತ್ತರ ಕೇಂದ್ರ, ತುಮಕೂರಿನಲ್ಲಿ ಚರಿತ್ರೆ ವಿಭಾಗಕ್ಕೆ ನೇಮಕಗೊಂಡಿದ್ದೆ. ತುಮಕೂರಿನಲ್ಲಿ ಎಲ್ಲಾ ಪ್ರಗತಿಪರ ಸಂಘಟನೆಗಳೂ ನನಗೆ ವೇದಿಕೆಯನ್ನು ಕಲ್ಪಿಸಿವೆ. ತುಮಕೂರು ಜಿಲ್ಲೆಯಾದ್ಯಂತ ಹಳ್ಳಿಹಳ್ಳಿಗಳನ್ನು ಭಾಷಣದ ನೆಪದಲ್ಲಿ ಸುತ್ತಿದ್ದು ವಿಚಾರ, ಅನುಭವ ಎರಡನ್ನೂ ಗಟ್ಟಿಗೊಳಿಸಿತು. ಇದೇ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯ ಸಂಪರ್ಕವಾಯಿತು ತುಮಕೂರಿನಲ್ಲಿ, ಆ ಮೂಲಕ ಕೆ. ನೀಲಾ, ಮೀನಾಕ್ಷಿ ಬಾಳಿ ಹಾಗೂ ಗುಲ್ಬರ್ಗಾದ ಚಳವಳಿಕಾರರು ನನ್ನ ವಿಚಾರಕ್ಕೆ ಒತ್ತಾಸೆಯಾಗಿದ್ದಾರೆ. ದಲಿತ ಬಂಡಾಯ ಚಳವಳಿಗಳು ಕ್ರಿಯಾಶೀಲವಾಗಿದ್ದ ಪ್ರದೇಶ. 2000ದ ಹೊತ್ತಿಗೆ ಹೋರಾಟ ಕ್ಷೀಣವಾಗಿದ್ದರೂ ಜನರಲ್ಲಿ ವಿಚಾರಗ್ರಹಿಕೆ ಇತ್ತು. ಜಿ.ಎಂ. ಶ್ರೀನಿವಾಸಯ್ಯ, ಎಸ್.ಜಿ. ಸಿದ್ದರಾಮಯ್ಯ, ದೊರೆರಾಜ್, ಯತಿರಾಜ್, ಬ.ಹ. ರಮಾಕುಮಾರಿ, ಶೈಲಾ ನಾಗರಾಜ್ ಇವರೆಲ್ಲಾ ನಾನಿರುವಾಗ ತುಮಕೂರಿನಲ್ಲಿ ಕ್ರಿಯಾಶೀಲರಾಗಿದ್ದವರು. ಸಾರ್ವಜನಿಕ ವೇದಿಕೆಯನ್ನು ಎಕ್ಸಟೆಂಷನ್ ಆಫ್ ಕ್ಲಾಸ್‌ರೂಮ್ ಆಗಿಯೇ ನೋಡುತ್ತೇನೆ; ಯುವ ಪತ್ರಕರ್ತರೂ ಸದಾ ನನ್ನೊಡನೆ ಚರ್ಚಿಸಿದ್ದಾರೆ. ಜೆ.ಎನ್.ಯು ಸಂಪರ್ಕ ವಿಚಾರ ಗ್ರಹಿಕೆಗೆ ಓರಿಯೆಂಟೇಷನ್ ಕೊಟ್ಟಿದೆ.

ವಿಚಾರಸಂಕಿರಣಗಳಲ್ಲಿ ನಿರಂತರವಾಗಿ ಪಾಲ್ಗೊಂಡಿದ್ದೇನೆ. ಅದರಲ್ಲೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಸಾಕಷ್ಟು ಅವಕಾಶ ನೀಡಿದೆ. ನಾಡಿನಾದ್ಯಂತ ಇರುವ ವಿದ್ವಾಂಸರ ಜೊತೆಗೆ ಒಂದಲ್ಲ ಒಂದು ಸಂದರ್ಭದಲ್ಲಿ ವಿಚಾರ ಹಂಚಿಕೆಗೆ ಅವಕಾಶ ಸಿಕ್ಕಿದೆ. ನನ್ನ ವಿಚಾರಗಳಲ್ಲಿ ಸತ್ವವಿದ್ದರೆ ಅದರ ಹೆಗ್ಗಳಿಕೆ ಅವರೆಲ್ಲರಿಗೂ ಸೇರಬೇಕು.

ಬರವಣಿಗೆಯಲ್ಲಿ ಸೋಮಾರಿತನವಿದ್ದರೂ ಸಾಕಷ್ಟು ಜನ ಬರವಣಿಗೆಗೆ ಹಚ್ಚಿದ್ದಾರೆ.

4. ನಿಮ್ಮ ಬಾಲ್ಯ ಕೌಟುಂಬಿಕ ಹಿನ್ನೆಲೆ ಹಾಗೂ ಶೈಕ್ಷಣಿಕ ಹಿನ್ನೆಲೆ ಬಗ್ಗೆ ಹೇಳುವಿರಾ?


ನಾನು ಹುಟ್ಟಿ ಬೆಳೆದದ್ದು ಮೈಸೂರಿನಲ್ಲಿ, ನನ್ನ ತಂದೆ ಮಳಲಿ ವಸಂತಕುಮಾರ್, ಮೈಸೂರು ವಿ.ವಿ.ದ ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರಾಗಿದ್ದರು ಮತ್ತು ಸಾಹಿತಿಯೂ ಆಗಿದ್ದರಿಂದ ಒಂದು ಸಾಹಿತ್ಯಕ ವಾತಾವರಣ ಬಾಲ್ಯದಲ್ಲಿಯೇ ನನಗೆ ಸಿಕ್ಕಿದೆ. ಚಿಕ್ಕವಯಸ್ಸಿನಿಂದ ಸಾಹಿತ್ಯಕ ಓದು ಸಾಧ್ಯವಾಗಿದೆ.

ತಂದೆಯಿಂದಾಗಿ ಹಳೆಗನ್ನಡದ ಓದು ಮತ್ತು ಜನಪದ ಸಾಹಿತ್ಯದ ಬಗ್ಗೆ ಸಹಜದ ಪ್ರೀತಿ ಸಾಧ್ಯವಾಗಿದೆ. ಡಿ.ಎಂ.ಎಸ್., ಭಗಿನಿ ಸೇವಾ ಸಮಾಜ, ಮಹಾರಾಣಿ ಕಲಾ ಕಾಲೇಜು, ಮಾನಸಗಂಗೋತ್ರಿ ಇವು ನನಗೆ ಶಿಕ್ಷಣ ನೀಡಿದ ಸಂಸ್ಥೆಗಳು. ಇತಿಹಾಸ, ಕನ್ನಡ, ಅರ್ಥಶಾಸ್ತ್ರ ಇವು ನನ್ನ ಆಯ್ಕೆಯ ವಿಷಯಗಳು. ಮಹಾರಾಣಿ ಕಲಾ ಕಾಲೇಜಿನಲ್ಲಿ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷೆಯಾಗಿ ಚುನಾಯಿತಳಾಗಿದ್ದೆ. ಯೂನಿಯನ್ ನಿಜವಾಗಿಯೂ ವಿದ್ಯಾರ್ಥಿಗಳಿಗೆ ಒಳ್ಳೆ ಸಂಘಟನಾ ಅನುಭವವನ್ನು ನೀಡುತ್ತಿತ್ತು. ಎಂ.ಎ. ಆದಕೂಡಲೆ ಯುಜಿಸಿ, ಎನ್ಇಟಿ ಪರೀಕ್ಷೆ ಪಾಸಾಗಿ ಸಂಶೋಧನೆಗೆ ಸೇರಿದೆ. ನನ್ನ ಪ್ರೀತಿಯ ಗೈಡ್, ಸಂಗೀತ ಸುವರ್ಣ. ಸಿವಿಲ್ ಸರ್ವೀಸ್ ಪರೀಕ್ಷೆಗಳಿಗೆ ಸಿದ್ಧತೆ ನೆಪದಲ್ಲಿ ವಿಸ್ತಾರವಾದ ಓದು ಸಾಧ್ಯವಾಯಿತು. ನನ್ನ ತಮ್ಮ ರನ್ನ ಸಾಫ್ಟ್‌ವೇರ್ ಇಂಜಿನಿಯರ್. ಒಳ್ಳೆಯ ಫೋಟೋಗ್ರಾಫರ್, ಪ್ರಯೋಗ ಶೀಲ ವ್ಯಕ್ತಿ, ಅತ್ತಿಗೆ ಡಾ. ಸತ್ಯ ರನ್ನ ಶ್ರವಣತಜ್ಞೆ, ತಂಗಿ ರೂಪ ಇಸ್ರೋದಲ್ಲಿ ವಿಜ್ಞಾನಿ, ಭಾವ ಇಂಜಿನಿಯರಿಂಗ್ ಕಾಲೇಜ್‌ನಲ್ಲಿದ್ದಾರೆ. ನನ್ನ ಮುದ್ದಿನ ಮಗಳು ಅವನಿ. ಕುಟುಂಬದ ವಿಷಯ ಹೇಳಿಕೊಳ್ಳೋದು ನನಗೆ ಸಂಕೋಚದ ವಿಷಯ.

5. 'ಕನ್ನಡದೊಳ್ ಭಾವಿಸಿದ ಜನಪದಂ' ಎಂಬ ನಿಮ್ಮ ಕೃತಿಯ ಉದ್ದೇಶ ಏನಾಗಿತ್ತು?

ಇದು ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ನೆನಪಿಗಾಗಿ ಸಂಪಾದಿಸಿದ ಕೃತಿ. ತಲೆಬರಹಕ್ಕೆ ಅನುಗುಣವಾಗಿ ಚರಿತ್ರೆ ಎನ್ನುವುದು ಭಾವಿಸಿದ ಅಥವಾ ಕಲ್ಪಿತ ವಿಚಾರವಾಗಿರುತ್ತದೆ. ನಮ್ಮ ನಾಡಿಗೆ ಸಂಬಂಧಿಸಿದ ಬರಹಗಳಾದ್ದರಿಂದ ಕನ್ನಡದೊಳ್ ಭಾವಿಸಿದ ಎನ್ನುವ ಕವಿರಾಜಮಾರ್ಗದ ಸಾಲುಗಳು ಸೂಕ್ತವಾಗಿ ಕಂಡಿದ್ದವು.

ಕನ್ನಡ ಸಾಹಿತ್ಯವಲ್ಲದೆ ಉಳಿದ ಮಾನವಿಕ ವಿಷಯಗಳನ್ನು ಕನ್ನಡದಲ್ಲಿ ಬರೆಯುವುದು ಬಹಳ ಕಡಿಮೆ.



ನಾಡಿನ ಚರಿತ್ರೆಯನ್ನು ನಮ್ಮ ಭಾಷೆಯಲ್ಲಿಯೇ ಆಲೋಚಿಸಿ ಬರೆಯಲು ಪ್ರೇರೇಪಿಸುವುದು ನನ್ನ ಉದ್ದೇಶ ಆಗಿತ್ತು.

ಸಾಂಪ್ರದಾಯಿಕ ಚರಿತ್ರೆ ರಚನೆಯ ಚೌಕಟ್ಟನ್ನು ಮುರಿದು ಅಂತರಶಿಸ್ತೀಯ ನೆಲೆಯಲ್ಲಿ ಚರಿತ್ರೆಯ ಸಂಕಥನವನ್ನಾಗಿ ರೂಪಿಸುವುದು 'ಕನ್ನಡದೊಳ್ ಭಾವಿಸಿದ ಜನಪದಂ'ನ ತಾತ್ವಿಕ ಹಿನ್ನೆಲೆ.

6. ಸಿನಿಮಾ ನಿರ್ದೇಶಕರಾಗಿಯೂ ವಿಭಿನ್ನ ಹಾದಿ ಹಿಡಿದಿದ್ದೀರಿ; ಸಿನಿಮಾ ನಿಮ್ಮನ್ನು ಸೆಳೆದದ್ದೇಕೆ?

ಆಧುನಿಕ ಕಾಲದಲ್ಲಿ ಸಿನಿಮಾ ತಂತ್ರಜ್ಞಾನದಿಂದ ಹುಟ್ಟಿಕೊಂಡಿರುವ ಕಲಾ ಪ್ರಕಾರ. ಈ ಪೀಳಿಗೆಯ ಬದುಕಿನ ಭಾಗ ಪತ್ರಿಕೆ ಪುಸ್ತಕದಷ್ಟೆ ಸಿನಿಮಾ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಆದ್ದರಿಂದ ಎಲ್ಲರ ಮನಸ್ಸಿನಲ್ಲೂ ಒಂದಲ್ಲ ಒಂದು ಸಂದರ್ಭದಲ್ಲಿ ಸಿನಿಮಾ ನಿರ್ದೇಶಿಸುವ, ಅಭಿನಯಿಸುವ ಆಸೆ ಮೂಡುತ್ತದೆ. ಹಾಗೆಯೇ ನನಗೂ ಆಯಿತು.

2007ರಲ್ಲಿ ಸಿನಿಮಾ ನಿರ್ಮಾಣದ ಕಂಪನಿಯೊಂದು ಬೆಂಗಳೂರಿನಲ್ಲಿ ಆರಂಭವಾಯಿತು. ಅವರು ಚಾರಿತ್ರಿಕ ಹಿನ್ನೆಲೆಯ ಕಥೆಯೊಂದನ್ನು ಹುಡುಕುತ್ತಿದ್ದರು. ಅದಕ್ಕಾಗಿ ಬರೆದ ಕಥೆ 'Song of the soil'. ಭಾರತದ ನೂರು ವರುಷದ ಚರಿತ್ರೆಯನ್ನು ಹಿನ್ನೆಲೆಯಾಗಿರಿಸಿಕೊಂಡು ಅದರಲ್ಲಿ ನೇಯ್ದಿದ್ದೇನೆ. ಬಂಗಾಳದ ನೇಯ್ಗೆ ಕುಟುಂಬದಿಂದ ಆರಂಭವಾಗುವ ಕಥೆ ಟಿಪ್ಪು, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಇವರೆಲ್ಲರೂ ಕಥೆಯಲ್ಲಿ ಹಾದುಹೋಗಿದ್ದಾರೆ.

ಇದನ್ನೊಂದು **epic movie** ಆಗಿಸುವ ಉದ್ದೇಶದಿಂದ ಒಂದು ವರ್ಷ ಕಾಲ ಸ್ಕ್ರಿಪ್ಟ್ ಮಾಡಿದೆವು. ಸಾವಿರದ ನೂರು ಚಿತ್ರಗಳುಳ್ಳ ಸ್ಟೋರಿ ಬೋರ್ಡ್ ಮಾಡಿಸಿದ್ದೆವು. 19ನೇ ಶತಮಾನದ ಭಾರತದ ಬದುಕನ್ನು ಹಿಡಿದಿಡುವ ಪ್ರಯತ್ನ ಅದಾಗಿತ್ತು.

7. ಚಿತ್ರದ ತಾರಾಗಣ ಸಿದ್ಧವಾಗಿತ್ತೆ?

ಗ್ರೇಸಿ ಸಿಂಗ್, ರಣದೀಪ್ ಹೂಡಾ, ಅರ್ಜುನ ಸರ್ಜಾ, ಅನಂತ ನಾಗ್, ಮಿಥುನ್ ಚಕ್ರವರ್ತಿ, ಜಾಕಿ ಶ್ರಾಫ್ ಇವರೆಲ್ಲರ ಜೊತೆ ಮಾತುಕತೆ ಆಗಿತ್ತು.

8. ಈ ಚಲನಚಿತ್ರಕ್ಕಾಗೇ ವಿಶೇಷ ತರಬೇತಿಯನ್ನೇನಾದರೂ ಪಡೆದಿರಾ?

ಅದಕ್ಕಾಗಿ ಹಾಲಿವುಡ್‌ನ ನ್ಯೂಯಾರ್ಕ್ ಫಿಲಂ ಅಕಾಡೆಮಿಯಲ್ಲಿ ನಿರ್ದೇಶನದ ತರಬೇತಿಯನ್ನು ಪಡೆದೆ.

ಹಾಲಿವುಡ್‌ನ ಸಿನಿಮಾ ತಯಾರಿಕೆಯಲ್ಲಿ ಅವರು ಕಥೆಗಿಂತಲೂ ಮೇಕಿಂಗ್‌ಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ. ಭಾರತದಲ್ಲಿ ಕಥೆಗೆ ಆದ್ಯತೆ ಹೆಚ್ಚು, ಆದರೆ ಇತ್ತೀಚೆಗೆ ಮೇಕಿಂಗ್‌ನಲ್ಲೂ ಭಾರತ ಮುಂದುವರೆದಿದೆ. ಕರ್ನಾಟಕದ ಚಿತ್ರ ನಿರ್ಮಾಣ ಉದ್ದಿಮೆ ಸ್ವಲ್ಪಮಟ್ಟಿನ ಶಿಸ್ತನ್ನು ರೂಢಿಸಿಕೊಂಡರೆ ಮತ್ತಷ್ಟು ಒಳ್ಳೆಯ ಸಿನಿಮಾಗಳನ್ನು ಮಾಡಲು ಸಾಧ್ಯವಿದೆ. ಹಾಗೆ ನೋಡಿದರೆ ಬೆಂಗಳೂರಿನಲ್ಲಿ ಸಿನಿಮಾ ಉದ್ದಿಮೆ ದೊಡ್ಡದಾಗಿ ಬೆಳೆಯಬಹುದು. ಐಟಿ ತಂತ್ರಜ್ಞಾನದಲ್ಲಿ ಬೆಂಗಳೂರು ಮುಂದಿರುವುದರಿಂದ ಈಗಾಗಲೇ ಅನಿಮೇಶನ್ ಕಂಪನಿಗಳು ದೊಡ್ಡ ಸ ಆರಂಭಗೊಂಡಿವೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಸಿನಿಮಾದ ಮೂಲಕ ಬಹಳ ವಿಸ್ತಾರವಾದ ಜನ ಸಮೂಹ ತಲುಪಬಹು ಕಾರಣದಿಂದಾಗಿ ನನಗೆ ಸಿನಿಮಾದ ಬಗ್ಗೆ ಒಲ

ಸಿನಿಮಾವನ್ನು ಒಂದು ಚಳವಳಿಯನ್ನಾಗಿ ರ IPTAದ ಮಾದರಿ ಭಾರತದಲ್ಲಿದೆ. ಚಳವಳಿಯೊಂದನ್ನು ಕರ್ನಾಟಕದಲ್ಲಿ ರೂ ಬಯಕೆಯಿಂದ ಕನ್ನಡದಲ್ಲಿ 'ಶಸ್ತ್ರ' ಸಿನಿಮಾವನ್ನು ಹೊರಟೆವು.

9. ಸ್ವಲ್ಪ 'ಶಸ್ತ್ರ' ಸಿನಿಮಾ ಬಗ್ಗೆ ಹೇಳಿ?

2000-2005ರವರೆಗೆ ಮಲೆನಾಡಿನಲ್ಲಿ ಪರಿಸರ ಹೋರಾಟದ ಎಳೆಯನ್ನಿಟ್ಟುಕೊಂ ಬರೆಯಲಾಗಿದೆ. ಆ ಹೋರಾಟದಲ್ಲಿ ತೊ ಸಂದರ್ಶನ ಮಾಡಿ ಪ್ರವಾಸ ಮಾಡಿ ಮಾ ಕಲೆ ಹಾಕಿದ್ದೇವೆ. ಚಾಮುಂಡೇಶ್ವರಿ ಸ್ಟು ಮಾಲೀಕರಾದ ರಾಜಲಕ್ಷ್ಮಿ ನಿರ್ಮಾಣ ಜೋಡಿಸಿದ್ದಾರೆ. ಹೊಸ ಪ್ರತಿಭಾವಂತ ನಮ್ಮಲ್ಲಿದೆ. ರನ್ನ ಅವರು ಕ್ಯಾಮರಾ ಹಿಡಿಯ ಲಕ್ಷ್ಮೀಪತಿ ಸಿ.ಜಿ- ಸ್ಕ್ರಿಪ್ಟ್, ಕಿಶೋರ್ ಕೈಲಾಸ್, ನಿಶಾಂತ್ ಯಜ್ಞಶೆಟ್ಟಿ, ಎಂ.ಸಿ. ನ ನರೇಶ್ ಮಯ್ಯ, ತನಿಶಾ ರಂಗಭೂಮಿ ಮತ್ತು ಹಿನ್ನೆಲೆಯ ಒಳ್ಳೆಯ ನಟರು ಅಭಿನಯಿಸುತ್ತಿದ

10. ನಿಮ್ಮ ನೆಚ್ಚಿನ ಸಿನಿಮಾ - ನಟ ನಿರ್ದೇಶಕರು ಯಾರ್ಯಾರು?

ಹೆಚ್ಚು ತಾಂತ್ರಿಕ ಬೆಳವಣಿಗೆ ಇಲ್ಲದ ಮಾಡಿರುವ ಹಲವು ಸಿನಿಮಾಗಳು ನನಗೆ ಇಷ್ಟ. ಕ ಚಿತ್ರದ ಕಾಲದಲ್ಲಿ ಚಾರ್ಲಿ ಚಾಪ್ಲಿನ್ ಮಾಡಿದ ಸಿ ಎಲ್ಲ ರೀತಿಯಲ್ಲೂ ಸೊಗಸಾಗಿವೆ. ಸಿನಿಮಾ ನ ಕಲಿಯುವವರಿಗಂತೂ ಕಪ್ಪುಬಿಳುಪಿನ ಸಿಟಿಜನ ಎಲ್ಲ ರೀತಿಯಲ್ಲೂ ಪಠ್ಯವಿದ್ದಂತೆ. ಪಾತ್ರಗಳ ಪವರ್ ಪಾಲಿಟಿಕ್ಸ್‌ನ್ನು ಕ್ಯಾಮರಾ ಭಾಷೆಯಲ್ಲಿ ಹೇಳುವುದು ಎಂದು ಅಲ್ಲಿ ತಿಳಿಯಬಹುದು. ಮೇಕಿಂಗ್‌ನಲ್ಲಿ ನನಗೆ ಬಲು ಇಷ್ಟವಾದ ಮ ಅಂಶವೆಂದರೆ ಲೈಟಿಂಗ್. ಅದರಲ್ಲಿ ಎಪ್ಪತ್ತರ ಬಂದ ಸೌಂಡ್ ಆಫ್ ಮ್ಯೂಸಿಕ್ ಸದಾ ಆದರ್ಶವೆನಿಸುತ್ತದೆ.

ಭಾರತೀಯ ಚಲನಚಿತ್ರಗಳಲ್ಲಿ ಅಮೀರ್ ಮಾಡುತ್ತಿರುವ ಪ್ರಯೋಗಗಳು ನನಗೆ ಮೆಚ್ಚುಗೆ ಇನ್ನು ಕನ್ನಡದಲ್ಲಿ ಸದಾಕಾಲಕ್ಕೆ ರಾಜ್‌ಕುಮಾ ಸಿನಿಮಾಗಳು ಹಲವು ಕಾರಣಗಳಿಗೆ ಉತ್ತಮ ಕಥೆಯನ್ನು ಆರಿಸಿಕೊಳ್ಳುವಾಗಲೇ ಸಮಾಜಮು ಸದಾಶಯವನ್ನು ಹೊಂದಿರುತ್ತಿತ್ತು. ಈ ಕಾಲದ ನಾಯಕ ನಟರಿಗಿಂತ ಅವರ ದೇಹ ಸೌ ಅದ್ವಿತೀಯ. ಸಿಕ್ಸ್‌ಪ್ಯಾಕ್ ಇಲ್ಲದ ದೇಹಕಟ್ಟು ನ ಸಹಜವೆನಿಸುತ್ತದೆ.

ಸಿನಿಮಾದಲ್ಲಿ ಯೋಚನೆಗೆ ಹಚ್ಚುತ್ತಿ ವಿಚಾರವಂತರು ಪ್ರವೇಶ ಮಾಡದಿರುವ, ಅದರ ಮಾರುಕಟ್ಟೆ ಗ್ಲಾಮರ್ ಅರ್ಥವಾಗುವುದು ಮಾತ್ರ ವಿಚಾರ.

ಈ ತಲೆಮಾರಿನ ನಿರ್ದೇಶಕರು ಹೊಸ ಪ್ರಯೋ ಮಾಡುತ್ತಿದ್ದಾರೆ. ಹಾಗೇ ನೋಡಿದರೆ ಪ್ರಾಮಿಸಿಂ ಕನ್ನಡ ಇಂಡಸ್ಟ್ರಿ.


11. ಅಧ್ಯಯನಕ್ಕಾಗಿ ಕೆಲಕಾಲ ಆಸ್ಟ್ರೆ ಹೋಗಿಬಂದಿದ್ದೀರಿ; ಅಲ್ಲಿನ ನಿಮ್ಮ ಅನು ವಿವರಿಸುತ್ತೀರಾ?

ಆಸ್ಟ್ರೇಲಿಯಾದ ಪ್ರವಾಸ ನನ್ನ ಮೌಖಿಕ ಆಸಕ್ತಿಯಲ್ಲಿ ಮೈಲಿಗಲ್ಲು. ಅದರಲ್ಲೂ ಅಬಾರಿಜಿನಲ್ ಚರಿತ್ರೆ, ಅವರಿಗಾಗಿ ಮಾಡಿರುವ ಆದರೆ ವಾಸ್ತವದಲ್ಲಿ ಅವರ ಅಸ್ತಿತ್ವವೇ ಇಲ್ಲದ ಇವೆಲ್ಲಾ ನನಗೆ ತಲ್ಲಣ ತರಿಸುವ ವಿಚಾರಗಳು

12. ನೀವು ಪದ್ಯ ರಚನೆಯಲ್ಲೂ ತೊ ನಿಮ್ಮನ್ನು ಅಭಿವ್ಯಕ್ತಗೊಳಿಸಿಕೊಳ್ಳಲು ಗದ್ಯ ಯಾವುದು ಹತ್ತಿರ?

ಪದ್ಯ ಗದ್ಯ ಲೇಖನ ನಾಟಕ ಇವೆಲ್ಲಾ ಪ್ರಾಕ ಯಾವ ಪ್ರಾಕಾರದಲ್ಲೂ ಹೇಳುವ ಧೋರಣೆ ನ ಆಗಿದೆ. ಕಲಾತ್ಮಕತೆಯಿಂದಾಗಿ ವೈವಿಧ್ಯತೆಗೆ ತಂದುಕೊಡುತ್ತದೆ.

...ಅಭಿವೃದ್ಧಿ' ಎಂದರೆ ನಕಲಿ ಎನ್‌ಕೌಂಟರ್‌ಗಳು-ವಂಜಾರಾ



...ಮೋದಿಯ ಗುಜರಾತ್‌ನ ಅಭಿವೃದ್ಧಿ ಎಂದರೆ ...ದು ಇಂದು ಬಚ್ಚಿಟ್ಟ ಸತ್ಯವಲ್ಲ. ಅದನ್ನು ಈಗಾಗಲೇ ... ಬಿಚ್ಚಿಡಲಾಗಿದೆ ಮತ್ತು 'ಲಂಕೇಶ್'ನಲ್ಲೂ ಆ ...ದ್ಧಿಯನ್ನು ಬೆತ್ತಲುಗೊಳಿಸಲಾಗಿದೆ. ಇದೇ ...ದಲ್ಲೂ ಮೋದಿಯ ಮಾದರಿ ಅಭಿವೃದ್ಧಿ ಕುರಿತು ... ಪ್ರಕಟವಾಗಿದೆ. ಆದರೆ ಈಗ ಅದೇ ಮಾತನ್ನು ...ರಾ ಹೇಳಿದ್ದಾರೆ. ಮೋದಿ ಮತ್ತು ಅಮಿತ್ ಷಾರು ... ಮಿಷನ್ ಇಂಪಾಸಿಬಲ್‌ಅನ್ನು ಸಾಧ್ಯವಾಗಿಸಲು ...ಕೊಂಡ ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬ ಈ ...ಜೀ ಗೊಬರ್ಜೀ ವಂಜಾರಾ.

...ೋದಿ ಅಧಿಕಾರಕ್ಕೆ ಬರುವವರೆಗೆ ವ್ಯಕ್ತಿಗತವಾಗಿ ...' ಹೆಸರನ್ನೇ ಇಟ್ಟುಕೊಂಡಿದ್ದ ವಂಜಾರಾ ಇಂದು ... ಕುಖ್ಯಾತಿಯನ್ನು ಗಳಿಸಿದ್ದಾನೆ. ಇಳೋಲ್ ಎಂಬ ... ರೈತರೊಬ್ಬರ ಮಗನಾದ ವಂಜಾರಾನ ಇಬ್ಬರು ...ರರೂ ಸಹ ಗುಜರಾತ್ ಸರ್ಕಾರದಲ್ಲಿ ಉನ್ನತ ...ರಿಗಳಾಗಿದ್ದಾರೆ. ಇನ್ನೊಬ್ಬ ಸೋದರನಿಗೂ ಐಎಎಸ್‌ಗೆ ...ೀಡಲಾಗಿದೆ. 1979ರಲ್ಲಿ ನೇರ ನೇಮಕಾತಿಯಲ್ಲಿ ...ಪಿಯಾಗಿ ಸೇರಿಕೊಂಡ ವಂಜಾರಾಗೆ, ರಾಜ್ಯ ...ವೇ 1987ರಲ್ಲಿ ಐಪಿಎಸ್ ಬಡ್ತಿ ನೀಡಿತು. ಹಲವು ...ಗಳಿಂದ ಒಳ್ಳೆಯ ಅಧಿಕಾರಿ ಎಂಬ ಹೆಸರು ...ಸಿಕೊಂಡಿದ್ದ ವಂಜಾರಾ, 2002ರ ನಂತರ ಆ ...ದ ಅತ್ಯಂತ 'ಪ್ರಭಾವಿ' ಅಧಿಕಾರಿಯಾಗಿ ...ಗೊಂಡಿದ್ದಕ್ಕೆ ಕಾರಣಗಳಿದ್ದವು.

...002ರಿಂದ 2006ರವರೆಗೆ ಸತತವಾಗಿ ಹಲವು ...ಳನ್ನು ವಂಜಾರಾ ನಡೆಸಿದ. ಈ ಕೊಲೆಗಳ ನಂತರ ... ನಡೆಸುತ್ತಿದ್ದ ಪತ್ರಿಕಾಗೋಷ್ಠಿಗಳಲ್ಲಿ 'ಇವರು ...ನದ ಐಎಸ್‌ಐನಿಂದ ಪ್ರೇರಿತರಾಗಿ ಮೋದಿಯನ್ನು ...ಲು ಅಥವಾ ಆ ರೀತಿ ಇನ್ನಾವುದೋ ಕಾರಣಕ್ಕೆ ..., ನಮ್ಮೊಂದಿಗೆ ಕಾಳಗದಲ್ಲಿ ಹತರಾದರು' ಎಂದು ...ಸುತ್ತಿದ್ದ. ಈಗ ಜೈಲೊಳಗಿಂದ ಬರೆದಿರುವ 10 ...ಳ ರಾಜೀನಾಮೆ ಪತ್ರದಲ್ಲಿ, ತನಗೆ ಯಾವ ನಿವೃತ್ತಿ ... ಹಾಗೂ ಭತ್ಯೆಗಳೂ ಬೇಕಿಲ್ಲ ಎಂದು ಆತ ...ದ್ದಾನೆ. ಜೈಲೊಳಗಿಂದ ಬಿಡುಗಡೆಯಾಗದೇ ...ುಬಹುದು ಅಥವಾ ನೇಣುಗಂಬ ಏರಬೇಕಾಗಿಯೂ ಬರಬಹುದು ಎಂಬ ಭೀತಿ ಆವರಿಸುತ್ತಿದ್ದಂತೆಯೇ ಬಹಳ ತಂತ್ರಗಾರಿಕೆಯಿಂದ, ನಿರ್ದಿಷ್ಟವಾಗಿ ಆಯ್ದುಕೊಂಡಿರುವ ಪದ ಹಾಗೂ ವಾಕ್ಯಗಳಿಂದ ಬರೆಯಲ್ಪಟ್ಟ ರಾಜೀನಾಮೆ ಪತ್ರವದು. ಒಂದು ಕಡೆ ಅದು ಮೋದಿಯನ್ನು ಸಂಪೂರ್ಣವಾಗಿ ತಿರಸ್ಕರಿಸದ, ಆತನ ನೆಚ್ಚಿನ ಬಂಟ ಅಮಿತ್ ಷಾನನ್ನು ಹೆಚ್ಚಾಗಿ ಗುರಿಯಾಗಿಸುವ, ಮೋದಿ ತನ್ನ ನೆರವಿಗೆ ಬಂದರೆ ಒಳ್ಳೆಯದು ಎಂಬ ಸಂದೇಶವನ್ನು ನೀಡುತ್ತದೆ. ಇನ್ನೊಂದು ಕಡೆ, ಮೋದಿಯನ್ನು ಎದುರಿಸಲಾಗದೆ ತಿಣುಕುತ್ತಿರುವ ಕಾಂಗ್ರೆಸ್‌ನವರಿಗೆ ಅನುಕೂಲ ಮಾಡಿಕೊಟ್ಟು ರಕ್ಷಣೆ ಪಡೆಯುವ ತಂತ್ರವೂ ಎದ್ದು ಕಾಣುತ್ತದೆ.

ಹಲವು ಕುತೂಹಲಕಾರಿ ವಿಚಾರಗಳು ಈ ಪತ್ರದಲ್ಲಿ ಇವೆ. ಅವೆಲ್ಲಾ ಏನೇ ಇರಲಿ, ಇದೇ ಪತ್ರದೊಳಗೆ ವಂಜಾರಾ ಕಾಣಿಸುವ ಮೂರ್ನಾಲ್ಕು ಅಂಶಗಳು ಬಹಳ ಮಹತ್ವದ್ದಾಗಿವೆ. 'ಎಲ್ಲರಿಗೂ ಗೊತ್ತಿರುವ ಒಂದು ವಿಷಯವೆಂದರೆ, ಕಳೆದ 12 ವರ್ಷಗಳಲ್ಲಿ ಎನ್‌ಕೌಂಟರ್‌ಗಳ ಪ್ರಭಾವಳಿಯನ್ನು ಗುಜರಾತ್‌ನ ಆಗಸದಲ್ಲಿ ಕಾಯ್ದುಕೊಂಡು ಈ ಸರ್ಕಾರವು ಸಾಕಷ್ಟು ರಾಜಕೀಯ ಲಾಭವನ್ನು ಮಾಡಿಕೊಂಡಿದೆ', 'ನಾನು ಹೆಮ್ಮೆಯಿಂದ ಹೇಳುತ್ತೇನೆ, ನಾನು ಮತ್ತು ನನ್ನ ಸಹೋದ್ಯೋಗಿಗಳು ಗುಜರಾತ್ ಮತ್ತೊಂದು ಕಾಶ್ಮೀರವಾಗದಂತೆ ತಡೆದೆವು ಮಾತ್ರವಲ್ಲ, ರಾಜ್ಯದಲ್ಲಿ ನಿರಂತರವಾದ ಶಾಂತಿ ಮತ್ತು ಭದ್ರತೆಯ ಗಟ್ಟಿ ತಳಪಾಯವನ್ನು ಹಾಕುವುದರಲ್ಲಿ ಮುಖ್ಯ ಪಾತ್ರ ವಹಿಸಿದೆವು. ಅದರ ಫಲವಾಗಿಯೇ ಈ ಸರ್ಕಾರದ ಇಮೇಜ್ ಎತ್ತರಕ್ಕೆ ಹೋಯಿತು ಮತ್ತು ಅಭಿವೃದ್ಧಿಯ ದಾರಿಯು ತೆರೆದುಕೊಂಡಿತು. ಈ ಸರ್ಕಾರವು ಇಂದು ಗುಜರಾತ್ ಮಾದರಿ ಅಭಿವೃದ್ಧಿ ಎಂದು ಯಾವುದನ್ನು ದೇಶಾದ್ಯಂತ ಕೊಚ್ಚಿಕೊಳ್ಳುತ್ತಿದೆಯೋ ಅದು ನಾನು ಮತ್ತು ಇತರ ಪೊಲೀಸ್ ಅಧಿಕಾರಿಗಳ ಕೆಲಸ ಮತ್ತು ತ್ಯಾಗವಿಲ್ಲದೇ ಸಾಧ್ಯವಾಗುತ್ತಿರಲಿಲ್ಲ.'

ಮುಂದುವರೆದು ವಂಜಾರಾ ಇನ್ನೂ ಒಂದು ವಿಚಾರ ಹೇಳುತ್ತಾನೆ. ಇಂದು ತನ್ನನ್ನು ಮಾತನಾಡಿಸುವವರೇ ಇಲ್ಲವೆಂಬುದನ್ನು ಹೇಳುತ್ತಾ 'ಆದರೆ ನಾವು ಜಿಹಾದಿ ಭಯೋತ್ಪಾದನೆಯ ವಿರುದ್ಧ ಕೆಲಸ ಮಾಡುತ್ತಿದ್ದಾಗ ಪ್ರತೀ ದಿನ ಗಾಂಧಿನಗರದ ದೊಡ್ಡ ಜನಗಳಿಂದ ಕನಿಷ್ಠ ಡಜನ್ ಫೋನ್ ಕರೆಗಳು ಬರುತ್ತಿದ್ದವು. ಅವರೆಲ್ಲಾ ನನ್ನನ್ನು ಒಬ್ಬ ರಕ್ಷಕನ ರೂಪದಲ್ಲಿ ನೋಡುತ್ತಿದ್ದರು' ಎನ್ನುತ್ತಾನೆ.


ಮೋದಿ, ಅಮಿತ್ ಷಾ, ಮೋಹನ್ ಭಾಗವತ್, ತೊಗಾಡಿಯಾ, ರಾಜನಾಥ್ ಸಿಂಗ್, ಬಿಜೆಪಿ ಎಲ್ಲರೂ ಈ ದೇಶದಲ್ಲಿ ಅನುಸರಿಸಬಯಸುವ ಕೋಮುವಾದಿ ನೀತಿ ಏನಾಗಿರುತ್ತದೆಂದು ನಮಗೆ ಗೊತ್ತಿದೆ. ಗುಜರಾತ್‌ನಲ್ಲಿ 17 ಜನ ಮುಸ್ಲಿಂ ಯುವಕರು ಮತ್ತು ಯುವತಿಯರನ್ನು ವಂಜಾರಾನ ಪಡೆ ಕೊಂದಾಗ, 'ಅವರು ಭಯೋತ್ಪಾದಕರು' ಎಂದು ಗಟ್ಟಿಯಾಗಿ ಇವರು ಘೋಷಿಸುತ್ತಿದ್ದರು ಎಂಬುದನ್ನು ನಾವು ನೋಡಿದ್ದೇವೆ. ನೇರವಾಗಿ ವಂಜಾರಾನೇ 'ಈ ಸರ್ಕಾರದ ಶ್ರೇಣಿಯಲ್ಲಿ ಅತ್ಯಂತ ಮೇಲಿರುವವರ ನೇರ ಸೂಚನೆಯ ಮೇರೆಗೆ ಮತ್ತು ಅವರ ಹತ್ತಿರದ ಪರಿವೀಕ್ಷಣೆಯಲ್ಲೇ ನಾವು ಈ ಎಲ್ಲಾ ಕೆಲಸಗಳನ್ನು ಮಾಡಿದ್ದು' ಎಂದು ಸ್ಪಷ್ಟಪಡಿಸಿದ್ದಾನೆ. ಮೋದಿ ಮತ್ತು ಆರೆಸ್ಸೆಸ್ ಇದಕ್ಕೆ ಕಾರಣ ಎಂಬುದರಲ್ಲಿ ನಮಗೆ ಸಂದೇಹವಿಲ್ಲ.

ಆದರೆ ನಿರಂತರವಾದ, ಬಾಳಿಕೆ ಬರುವ ಶಾಂತಿ ಮತ್ತು ಭದ್ರತೆಯ ಬಗ್ಗೆ ವಂಜಾರಾ ಮಾತನಾಡುತ್ತಿರುವುದು ನಮಗೆ ಈ ಕೋಮುವಾದದ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಇಂತಹ ಶಾಂತಿ ಮತ್ತು ಭದ್ರತೆಯು ಗುಜರಾತ್‌ನಲ್ಲಿ ಭಿನ್ನಾಭಿಪ್ರಾಯವನ್ನು ಇಲ್ಲವಾಗಿಸಿದೆ. ಪ್ರತಿಭಟನೆ, ಪ್ರತಿರೋಧವಿಲ್ಲದ ಗುಜರಾತ್‌ನಲ್ಲಿ ಅಮಾನವೀಯವಾದ ಅಭಿವೃದ್ಧಿಯನ್ನು ಸಾಧ್ಯವಾಗಿಸಿದೆ. ಈ ಅಭಿವೃದ್ಧಿ ಶೇ.80ರಷ್ಟು ಜನರನ್ನು ಹೊರಗಿಟ್ಟ ಅಭಿವೃದ್ಧಿಯಾಗಿದೆ ಮಾತ್ರವಲ್ಲ ಶೇ.80ರಷ್ಟು ಜನರ ಶ್ರಮಶಕ್ತಿ ಮತ್ತು ಅವರ ಪಾಲಿನ ಸಂಪತ್ತನ್ನು ಕೊಳ್ಳೆ ಹೊಡೆದು ಕೆಲವರನ್ನು ಕುಬೇರರನ್ನಾಗಿಸುವ ಅಭಿವೃದ್ಧಿಯಾಗಿದೆ.

ಇಲ್ಲವಾದರೆ ಸಮಕಾಲೀನ ಭಾರತದ ಅತ್ಯಂತ ಸಮರಶೀಲ ಹೋರಾಟವೊಂದರ ಮೂಲಕ ಪಶ್ಚಿಮ ಬಂಗಾಳದಿಂದ ಹೊರದೂಡಲ್ಪಟ್ಟ ಟಾಟಾನ ನ್ಯಾನೋ ಉದ್ದಿಮೆ, ಕೂಡಲೇ ಗುಜರಾತ್‌ನಲ್ಲಿ ನೆಲೆ ಕಂಡುಕೊಳ್ಳುತ್ತಿರಲಿಲ್ಲ. ಬುದ್ಧದೇವ್ ಭಟ್ಟಾಚಾರ್ಯರ ಸಿಪಿಎಂ ಸರ್ಕಾರ ನ್ಯಾನೋ ಕಾರ್‌ನ ಉತ್ಪಾದನಾ ವೆಚ್ಚದಲ್ಲಿ ಪುಕ್ಕಟೆಯಾಗಿ ಹೂಡಿದ್ದ ಬಂಡವಾಳಕ್ಕಿಂತ ಹೆಚ್ಚನ್ನು ಮೋದಿ ಸರ್ಕಾರ ನೀಡಿತು. ಹಾಗಾಗಿಯೇ ಇಂದು ಪ್ರತೀ ನ್ಯಾನೋ ಕಾರ್‌ನ ವೆಚ್ಚದಲ್ಲಿ ಅರ್ಧಕ್ಕಿಂತ ಹೆಚ್ಚು ಗುಜರಾತ್ ಸರ್ಕಾರದ ಪಾಲಿದೆ. ಅದೇ ರೀತಿ, ಹರಿಯಾಣದ ಗುರ್‌ಗಾಂವ್‌ನಲ್ಲಿನ ಮಾರುತಿಯ ಮಾನೇಸರ್‌ನ ಘಟಕದಲ್ಲಿ ಕಾರ್ಮಿಕರು ವೀರೋಚಿತವಾಗಿ ಕಾದಾಡುತ್ತಿದ್ದ ಸಂದರ್ಭದಲ್ಲೇ, ಮೋದಿ ಸರ್ಕಾರ ಸುಜುಕಿಗೆ ಕೆಂಪು ಹಾಸು ಹಾಸಿ ಸ್ವಾಗತಿಸುತ್ತದೆ.

ಇವೆಲ್ಲವೂ ಸಾಧ್ಯವಾಗುವುದು ಭಿನ್ನಾಭಿಪ್ರಾಯವೇ ಇಲ್ಲದಂತೆ ಮಾಡುವ ಶಾಂತಿ ಮತ್ತು ಭದ್ರತೆ ಇದ್ದಾಗ ಮಾತ್ರ. ಅದಕ್ಕಾಗಿ ನಕಲಿ ಎನ್‌ಕೌಂಟರ್‌ಗಳನ್ನು ನಿರ್ದಾಕ್ಷಿಣ್ಯವಾಗಿ ಮಾಡಬೇಕಾಗುತ್ತದೆ. ಅದು ಗುಜರಾತ್‌ನಲ್ಲಿ ಮಾತ್ರವಲ್ಲದೇ, ಛತ್ತೀಸ್‌ಗಢ ಹಾಗೂ ಒರಿಸ್ಸಾದ ಖನಿಜ ಸಂಪದ್ಭರಿತ ಕಾಡುಗಳಲ್ಲೂ ನಡೆಯುತ್ತಿದೆ. ಅಲ್ಲಿ ಅದು ಯುದ್ಧದ ಸ್ವರೂಪವನ್ನು ಪಡೆದುಕೊಂಡಿದೆ ಅಷ್ಟೇ. ಗುಜರಾತ್‌ನಲ್ಲೂ ಸರ್ಕಾರದ ಭೂ ಆಕ್ರಮಣದ ವಿರುದ್ಧ ಚಳವಳಿ ಆರಂಭವಾಗಿದೆ. ಈ ಸಾರಿ ಮೋದಿ ಚುನಾವಣೆಯಲ್ಲಿ ಗೆಲ್ಲುವ ಮುನ್ನ ದಲಿತರ ಪ್ರತಿಭಟನೆಯ ಮೇಲೆ ಗುಂಡು ಹಾರಿಸಿ ನಾಲ್ಕು ಜನರನ್ನು ಕೊಲ್ಲಲಾಗಿತ್ತು ಎಂಬುದನ್ನೂ ಮರೆಯಬಾರದು.

ತನ್ನ ವಿಚಾರದಲ್ಲಿ ದಯೆಯಿಲ್ಲದೆ ನಡೆದುಕೊಂಡರು ಎನ್ನುವ ಕಾರಣಕ್ಕೆ ವಂಜಾರಾ ಪತ್ರದಲ್ಲಿ ಹೀಗೆ ಬರೆಯುತ್ತಾನೆ: 'ನನಗಿಂದು ಮಹಾತ್ಮ ಗಾಂಧಿಯವರ ಹೇಳಿಕೆಯಲ್ಲಿನ ಸತ್ಯದ ಅರಿವಾಗಿದೆ. ಅವರು ಹೇಳಿದ್ದರು – ಸರ್ಕಾರಗಳು ಆತ್ಮವಿಲ್ಲದ ಯಂತ್ರಗಳು, ಅವುಗಳಿಗೆ ನ್ಯಾಯಪ್ರಜ್ಞೆಯೇ ಇರುವುದಿಲ್ಲ'. ಇದೇ ಮಾತು ಗುಜರಾತ್‌ನಲ್ಲಿ ದನಿಯೆತ್ತದಂತೆ ಅಡಗಿಸಲಾಗಿರುವ ರೈತ, ಕಾರ್ಮಿಕರು, ಹಿಂದುಳಿದವರು, ದಲಿತರು ಮತ್ತು ಅಲ್ಪಸಂಖ್ಯಾತರದ್ದಾಗಿದೆ. ಮಹಿಳೆ:ಪುರುಷ ಅನುಪಾತ ಅತ್ಯಂತ ಕಡಿಮೆ ಇರುವ ರಾಜ್ಯಗಳಲ್ಲೊಂದಾಗಿರುವ ಗುಜರಾತ್‌ನಲ್ಲಿ ಹೆಣ್ಣು ಮಕ್ಕಳು ಗರ್ಭದಲ್ಲೇ ಬಾಯಿಯನ್ನು ಮುಚ್ಚಿಕೊಳ್ಳಬೇಕಾಗಿದೆ. ಗುಜರಾತ್‌ನಲ್ಲಿ ಬಹುಸಂಖ್ಯಾತ




ದಮನಿತರ ದುಸ್ಥಿತಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಇದೇ ಅಂಕಣದಲ್ಲಿ ನೀಡಿದ್ದರಿಂದ ಅದನ್ನು ಪುನರಾವರ್ತಿಸುವುದಿಲ್ಲ.

ಈ ಪ್ರವಹಣದಲ್ಲಿ ದಮನಿತರು ಶೋಷಣೆಗೊಳಗಾಗಿಯೂ, ಪ್ರತಿರೋಧ ತೋರಿಸದೇ ಇರುವುದಕ್ಕೆ ಅಭಿವೃದ್ಧಿ ಎನ್ನಲಾಗುತ್ತದೆ ಮತ್ತು ಅದಕ್ಕೆ ಪೂರ್ವಪರತ್ತಾಗಿ ನಕಲಿ ಎನ್‌ಕೌಂಟರ್‌ಗಳಲ್ಲಿ ಕೆಲವರ ಬಲಿ ಅಗತ್ಯವಿರುತ್ತದೆ. ಅದನ್ನು ಮೋದಿ, ಅಮಿತ್ ಷಾ ಮತ್ತು ವಂಜಾರಾ ಯಶಸ್ವಿಯಾಗಿ ಮಾಡಿದ್ದಾರೆ. ಫ್ಯಾಸಿಸಂ ಎಂದರೆ ಅದು ಕೇವಲ ಒಬ್ಬ ವ್ಯಕ್ತಿಯ ಸರ್ವಾಧಿಕಾರವಲ್ಲ; ಅದು ರಾಜಕೀಯಾರ್ಥಿಕ ನಿರಂಕುಶತೆಗೆ ಹೆಣೆಯುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ದಾಳಿ. ಹಿಟ್ಲರನ ಕಾಲಕ್ಕೂ ಇವತ್ತಿಗೂ ವ್ಯತ್ಯಾಸಗಳಿವೆ. ಅಂದು ಟಿವಿ ಚಾನೆಲ್‌ಗಳಿರಲಿಲ್ಲ; ಇಂದು ಮೋದಿಯ ಪರವಾಗಿ ಉಲಿಯಲು ಅವು ಸಿದ್ಧವಾಗಿ ನಿಂತಿವೆ.

ದೇಶದ ಬಹುಭಾಗದಲ್ಲಿ ಜಾಲವನ್ನು ಹೊಂದಿರುವ 'ಸಾಂಸ್ಕೃತಿಕ ಸಂಘಟನೆ'ಯಾಗಿ ಆರೆಸ್ಸೆಸ್ ಇದೆ. ವಂಜಾರಾನಂತಹ ಅಧಿಕಾರಿಗಳು ನಮ್ಮ ದೇಶದ ಆಡಳಿತ ಯಂತ್ರಾಂಗದಲ್ಲಿ ಇನ್ನೂ ಬೇಕಾದಷ್ಟು ಜನರಿದ್ದಾರೆ. ಕಾಂಗ್ರೆಸ್‌ಗೆ ಒಂದು ಕೇಂದ್ರ ತಂಡವಿರುವಂತೆಯೇ ಮೋದಿಗೂ ಒಂದು ತಂಡ ರೂಪುಗೊಳ್ಳುತ್ತಿದೆ. ಕಾಂಗ್ರೆಸ್‌ನಲ್ಲಿ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ, ಚಿದಂಬರಂ, ನಿಲೇಕಣಿ ಇತ್ಯಾದಿಗಳು ಇರುವಂತೆ. ಚಿದಂಬರಂ ಇರುವ ಸಚಿವ ಸಂಪುಟದಲ್ಲೇ ಜೈಪಾಲ್ ರೆಡ್ಡಿ ಸಹ ಇರಲು ಕಾಂಗ್ರೆಸ್‌ನಲ್ಲಿ ಸಾಧ್ಯ. ಆದರೆ ಜೈಪಾಲ್ ರೆಡ್ಡಿಯವರು ಅಂಬಾನಿಯ ರಿಲೆಯನ್ಸ್ ಕಂಪೆನಿಗೆ ಬಿಡಿಗಾಸಿಗೆ ಪೆಟ್ರೋಲಿಯಂನ ತಿಜೋರಿ ಯನ್ನು ಒದಗಿಸಲು ಅಡ್ಡಿಯಾದರೆ, ನಿರ್ದಾಕ್ಷಿಣ್ಯವಾಗಿ ಅವರು ಹೊರದೂಡಲ್ಪಡುತ್ತಾರೆ. ಆ ಜಾಗಕ್ಕೆ ಮೊಯಿಲಿಯಂತಹ ವ್ಯಕ್ತಿಯನ್ನು ತಂದುಕೂರಿಸಲಾಗುತ್ತದೆ. ಮೋದಿ ಮಾದರಿಯಲ್ಲಿ ಇಂತಹ ತಪ್ಪುಗಳು ನಡೆಯುವುದಿಲ್ಲ. ಅಲ್ಲಿ ಮೊದಲೇ ಕಾರ್ಪೊರೇಟ್ ಕಂಪೆನಿಗಳಿಗೆ ಚಿದಂಬರಂಗಿಂತಲೂ ಹೆಚ್ಚು ನಿಷ್ಠರಾಗಿರುವವರನ್ನು ಸಿದ್ಧಗೊಳಿಸಿಕೊಂಡಿರಲಾಗುತ್ತದೆ. ಅಮಿತ್ ಷಾನಂತಹ 'ದಕ್ಷ ಗೃಹಮಂತ್ರಿ' ಈಗಾಗಲೇ ಮೋದಿಯ ಜೊತೆಗಿದ್ದಾನೆ.

ಸದ್ಯಕ್ಕೆ ವಂಜಾರಾನ ಪತ್ರ ಇವರೆಲ್ಲರಿಗೆ ಒಂದು ಸಣ್ಣ ತಡೆಯಾಗಿದೆ. ಅದರಲ್ಲಿ ಇಣುಕುತ್ತಿರುವ 'ಎನ್‌ಕೌಂಟರ್ ಪ್ರಜಾತಂತ್ರ ಮತ್ತು ಭಿನ್ನಾಭಿಪ್ರಾಯವಿಲ್ಲದ ಅಭಿವೃದ್ಧಿ'ಯ ಕುರಿತು ನಾವೆಲ್ಲರೂ ಪ್ರಶ್ನೆ ಹಾಕಿದರೆ ಅದು ದೊಡ್ಡ ತಡೆಯಾಗಬಹುದು. ■

ಹೈಹೀಲ್ಡ್ ಚಪ್ಪಲಿ ಹಾಕುವ ಹುಡುಗಿಯರ ಕಾಲು ಉಳುಕುವುದಿಲ್ಲವೆ?



...ದ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತಂತೆ. ...ಕ್ಕೆ ಸೊಸೆ ಜಗಳದಲ್ಲಿ?

- ಸಮೀಮಾ ಪೆರುಮಾಜೆ

...ಸಾರ ಭಾರವಾಗುತ್ತೆ ಅಷ್ಟೆ.

...ನ್ನ ಹುಡುಗಿ "ನಿನ್ನ ಸಾಯೋತನಕ ಪ್ರೀತಿ ಮಾಡ್ತೀನಿ ...ದ್ರೆ ಮದುವೆ ಮಾತ್ರ ಆಗಲ್ಲ" ಅಂತಾಳೆ. ಇದರ ... ಅರ್ಥ ಏನು ಗುರುಗಳೇ?

- ಜೀಶ್ ರಾಜ್ ಸಾಲಿ, ತುಮಕೂರು

... ಇನ್ ಈ ರಾಜ್, ಒಬ್ಬರನ್ನು ಸಾಯಿಸೋ... ಪ್ರೀತಿಸೋದಕ್ಕಿಂತಾ ಇದು ಬೆಟರ್ ಅಲ್ವಾ?

... ಸುಮ್ಮನೆ ರಾಜಕೀಯಕ್ಕೆ ಏಕೆ ಹೋಗುವರು?

- ಮಂಜು, ಹುಬ್ಬಳ್ಳಿ

... ಅಲ್ಲೂ ಅವಕಾಶವಿರೋದರಿಂದ.

... ಪತ್ನಿಗಳ ಮನೆಗೆ ಕಳ್ಳರು ನುಗ್ಗಲ್ಲವಂತೆ, ...?

- ಸಮೀಮಾ ಪೆರುಮಾಜೆ

- ಅದು ವೃತ್ತಿಬಾಂಧವರ ನಡುವಿನ ಹೊಂದಾಣಿಕೆ
- ದೇವರುಗಳ ಸಂತತಿ ನಿಂತುಹೋಗಿದೆಯಲ್ಲಾ ಯಾಕೆ?

- ಕೀಟಲೆ

- ಈಗಿನ ದಡ್ಡ ಭಕ್ತರನ್ನು ಯಾಮಾರಿಸಲು ನಿತ್ಯಾನಂದ ಸ್ವಾಮಿ, ರವಿಶಂಕರ್ ತರದವರೆ ಸಾಕಲ್ಲ.
- ಈ ಭ್ರಷ್ಟ ವ್ಯವಸ್ಥೆಯಲ್ಲಿ ಲೋಹಿಯಾ ಪಿ.ಎಂ, ಶಾಂತವೇರಿ ಗೋಪಾಲ ಗೌಡರು ಸಿ.ಎಂ. ಆದರೂ ಬದಲಾವಣೆ ಆಗಲ್ಲ ಅನ್ನಿಸುತ್ತೆ.

'- ಓದುಗ

- ಅಂತವರನ್ನ ಪಿಎಂ-ಸಿಎಂ ಮಾಡುವ ಏಕೈಕ ಗುರಿ ಇಟ್ಟುಕೊಂಡಾಗ... ಹಾಗನ್ನಿಸುವುದು ಸಹಜ.
- ಬಡವನಿಗೂ, ಬಡತನಕ್ಕೂ ಇರುವ ಅಂತರವೇನು?

- ಮಾರುತಿ ಜಿ. ಗೌಡ, ಹರುಮಸ್ಕೇರಿ

- ಸ್ವಯಂ ಅನುಭವಕ್ಕೂ, ಭಾಷಣದ ವಿಚಾರಕ್ಕೂ ಇರುವಷ್ಟೇ ಅಂತರ.
- ಸಿದ್ದು ಸರ್ಕಾರ ರೆಕಾರ್ಡ್ ಮಾಡುತ್ತಾ?

- ಸತೀಶ್ ಕೆ.ಕೆ., ಮೈಸೂರು

- ಲೇಖಕ ಯೋಗೇಶ್ ಮಾಸ್ಟರ್‌ರನ್ನು ಅರೆಸ್ಟ್ ಮಾಡಿ ಈಗಾಗಲೇ ದಾಖಲೆ ಸೃಷ್ಟಿಸಿದ್ದಾರಲ್ಲ.
- ಇತ್ತೀಚೆಗೆ ಸಿನಿಮಾದವರೆಲ್ಲಾ ರಾಜಕೀಯಕ್ಕೆ ಸೇರುತ್ತಿದ್ದಾರಲ್ಲ!

- ರಾಜೇಶ್, ಹುಳಿಯಾರು

- ಅವರಿಗೆ ಹೆದರಿ ರಾಜಕಾರಣಿಗಳು ಸಿನಿಮಾಕ್ಕೆ ಬಂದರೆ ಇನ್ನೂ ಅಧ್ವಾನ ಮಾರಾಯ.
- ಹೈಹೀಲ್ಡ್ ಚಪ್ಪಲಿ ಹಾಕುವ ಹುಡುಗಿಯರ ಕಾಲು ಉಳುಕುವುದಿಲ್ಲವೆ?

- ರಫೀಕ್, ಸಂಪಾಜೆ

- ಅವರನ್ನೇ ನೋಡುತ್ತಾ ಎಡವಿ ಬಿದ್ದ ಗಂಡಸರಂತೂ ಇದ್ದಾರೆ.



- ಮದುವೆ ಆಗುವಾಗ ಪುರೋಹಿತರಿರುವಂತೆ ಡೈವೋರ್ಸ್‌ಗೂ ಪುರೋಹಿತರು ಯಾಕಿರಲ್ಲ?

- ರಮ್ಯಾ, ಶಹಾಬಾದ್

- ಅಲ್ಲೂ ನಂಬಿಸಿ ವ್ಯಾಪಾರ ಮಾಡಿಕೊಳ್ಳಲು ಅವಕಾಶ ಇರಲ್ಲ ಅದಕ್ಕೆ.
- ಸಾವಿರಾರು ಗೋಪಿಕೆಯರನ್ನು ಕೆಡಿಸಿದ ಕೃಷ್ಣನನ್ನು ಹೊಗಳಿ ಒಬ್ಬ ಸೀತೆಯನ್ನು ಅಪಹರಿಸಿದ ರಾವಣನನ್ನು ತೆಗಳುತ್ತಾರಲ್ಲ ಸರಿಯೆ?

- ಆನಂದ್, ಚನ್ನರಾಯಪಟ್ಟಣ

- ಪುರೋಹಿತರ ಪುರಾಣಗಳ ವಿಶೇಷ ಅದು.
- ಸಾಹಿತ್ಯ ಬಡವರ ರೊಟ್ಟಿಯಾಗಬೇಕು ಅನ್ನುತ್ತಿದ್ದಾರೆ ಇಲ್ಲೊಬ್ಬ ಸಾಹಿತಿ.


- ಚಂದ್ರಕಾಂತ್, ಬಳ್ಳಾರಿ

- ಅವರಿಗೆ ಎರಡು ದಿನ ಅದನ್ನೇ ತಿನ್ನುವಂತೆ ಹೇಳಿ ನೋಡು. ■

(ಸೂಚನೆ: ಕಣ್ಣಾಮುಚ್ಚಾಲೆಗೆ ಪ್ರಶ್ನೆ ಕಳುಹಿಸುವವರು ...
99803314278 SMS ...
kannamucchale@gmail.com
...)

ಲಂಕೇಶ್

ಯೋಗೇಶ್ ಮಾಸ್ಟರ್ ಪರಿಚಯ



ರಾಜಮಾರ್ಗ ಕಲಾಸಂಸ್ಕೃತಿಯ ಸ್ಥಾಪಕ ಯೋಗೇಶ್ ಮಾಸ್ಟರ್ ಡಿಸೆಂಬರ್ 20. 1968ರಂದು ಚಾಮರಾಜಪೇಟೆಯಲ್ಲಿ ಜನಿಸಿದರು. ಬರಹಗಾರರಾಗಿ, ಕಾವ್ಯ, ಕಥೆ, ಕಾದಂಬರಿ, ಪ್ರಬಂಧಗಳು, ಸಂಶೋಧನಾತ್ಮಕ ಲೇಖನಗಳು, ನಾಟಕ, ಗೀತ ನಾಟಕ, ಚಿತ್ರಕಥೆ, ಸಂಭಾಷಣೆ ಮತ್ತು ಗೀತ-ಸಾಹಿತ್ಯಗಳ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ.

ತಮ್ಮ 13ನೇ ವಯಸ್ಸಿನಲ್ಲೇ ಪತ್ರಿಕೆಗಳಲ್ಲಿ ಕವನಗಳನ್ನು ಮತ್ತು ಲೇಖನಗಳನ್ನು ಬರೆಯುತ್ತಿದ್ದು, 16ನೇ ವಯಸ್ಸಿನಲ್ಲಿ ಸ್ವತಂತ್ರಕೃತಿಯಾಗಿ "ಭಗ್ನಹೃದಯ" ಎಂಬ ಕವನ ಸಂಕಲನ ಮೊಟ್ಟಮೊದಲ ಬಾರಿಗೆ ಪ್ರಕಟಗೊಂಡಿತು. ನಂತರ ತರಂಗ ವಾರಪತ್ರಿಕೆಯಲ್ಲಿ ಅವರ ಸಮಾನಾಂತರ ರೇಖೆಗಳು ಪ್ರಕಟವಾದ ಮೇಲೆ ಕೃಷ್ಣಮಾಚಾರ್ ಅವರ ಒಡೆತನ ಮತ್ತು ಸಂಪಾದಕತ್ವದಲ್ಲಿ ಬರುತ್ತಿದ್ದ 'ತ್ರಿವೇಣಿ' ಮಕ್ಕಳ ಮಾಸಪತ್ರಿಕೆಗೆ ಸಹ ಸಂಪಾದಕರಾಗಿಯೂ ಕೆಲಸ ಮಾಡಿದರು. ಅದೇ ಸಪ್ತಗಿರಿ ಪ್ರಕಾಶನದ 'ಸ್ಮೈ' ಮತ್ತು 'ಹಂಸರಾಗ' ಪತ್ರಿಕೆಗಳ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದರು.

ಬರವಣಿಗೆಯ ನಂತರದ ಆಸಕ್ತಿ ಸಂಗೀತದಲ್ಲಿ, ಶೇಷಾದ್ರಿ ಗವಾಯಿಗಳಿಂದ ಪ್ರಾರಂಭಿಕ ಪಾಠಗಳನ್ನು ಆರಂಭಿಸಿ, ವಾಣಿ ಕಲಾವಿದರು ಸಂಸ್ಥೆಯ ಕಮಲಮ್ಮನವರಲ್ಲಿ ವೀಣಾವಾದನ ಅಭ್ಯಾಸ ಮತ್ತು ಭ್ರಮರಾಂಭರವರಿಂದ ಹಿಂದೂಸ್ತಾನಿಗಾಯನ ಅಭ್ಯಾಸ ಮಾಡಿದರು. ಆಗ ಸಂಗೀತ ಮತ್ತು ಅಭಿನಯದ ದಿಗ್ಗಜರಾದ ಹೊನ್ನಪ್ಪ ಭಾಗವತರ್ ಪ್ರೋತ್ಸಾಹದಿಂದ ಸಂಗೀತ ಸಂಯೋಜನೆಯ ಆಸಕ್ತಿ ಬೆಳೆದು, ಕನ್ನಡದಲ್ಲಿ ಸಂಗೀತ ಧ್ವನಿಮುದ್ರಿಕೆಯಲ್ಲಿರುವ ಜೋಗುಳಗಳ ಕೊರತೆಯನ್ನು ನೀಗಿಸಲು, 'ಜೋಜೋ ಲಾಲಿ' ಮತ್ತು 'ದೂರಿದುದ್ದೂರಿ' ಎಂಬ ಎರಡು ಸಂಗೀತ ಸಂಗ್ರಹಗಳನ್ನು ಬಿಡುಗಡೆ ಮಾಡಿದರು. ತದನಂತರ ಅಂತರಾಕ್ಷಿ, ಭೂಮಿ, ದ ಲಾಸ್ಟ್ ಲೀಫ್, ಒನ್ಸ್ ದೇರ್ ವಾಸ್ ಎ ಕಿಂಗ್, ಚಕ್ರೇಶ್ವರಿ, ಆನಂದ ಹರಿಕೃಷ್ಣ ಇತ್ಯಾದಿ ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತ ನೃತ್ಯರೂಪಕಗಳ ಸಾಹಿತ್ಯ ಮತ್ತು ಸಂಗೀತದ ಹೊಣೆ ಹೊತ್ತರು.

ಯೋಗೇಶ್ ಅವರ ಹೆಸರಿನ ಜೊತೆಗೆ ಮಾಸ್ಟರ್ ಸೇರಿದ್ದು ಅವರ ವೃತ್ತಿ ಜೀವನ ಉಪಾಧ್ಯಾಯರಾಗಿ ಪ್ರಾರಂಭಿಸಿದ ಕಾರಣಕ್ಕಾಗಿ. ಫ್ರಾನ್ಸಿಸ್ ಡಿ ಸೇಲ್ಸ್‌ನ ಇಂಗ್ಲಿಷ್ ಶಾಲೆ, ಭಾಗ್ಯೇಶ್ವರಿ ವಿದ್ಯಾಲಯ, ಹಂಸಲೇಖರ ದೇಸೀ ಶಾಲೆ ಹಾಗೂ ಇತರ ಖಾಸಗೀ ಶಾಲೆಗಳಲ್ಲಿ 16 ವರ್ಷಗಳ ಕಾಲ ಇಂಗ್ಲಿಷ್, ಕನ್ನಡ ಮತ್ತು ಸಮಾಜ ಶಾಸ್ತ್ರದ ಅಧ್ಯಾಪಕರಾಗಿದ್ದ ಸಮಯದಲ್ಲಿ ಪಠ್ಯಗಳ ಜೊತೆಗೆ ಸಂಗೀತ, ನೃತ್ಯ ಮತ್ತು ರಂಗಭೂಮಿಯ ಚಟುವಟಿಕೆಗಳನ್ನು ಸಾಂಸ್ಕೃತಿಕ ಚಳವಳಿಯ ರೀತಿಯಲ್ಲಿ ಮಾಡುತ್ತಿದ್ದರು.

ಇವರು ತಮ್ಮ ನೃತ್ಯಾಭ್ಯಾಸವನ್ನು ವಿದ್ವಾನ್ ಯು.ಕೆ.ಅರುಣ್ ಮತ್ತು ಸವಿತಾ ಅರುಣ್ ಅವರಲ್ಲಿ ಪ್ರಾರಂಭಿಸಿ, ರಾಧಾ ಅಮರ್‌ನಾಥ್ ಅವರಲ್ಲಿ ಮುಂದುವರಿಸಿ ಸಾಂಪ್ರದಾಯಿಕ ಶೈಲಿ ಮತ್ತು ಸಮಕಾಲಿನ ಶೈಲಿಯಲ್ಲಿ ನೂರಾರು ನೃತ್ಯಗಳನ್ನು ಮತ್ತು ನೃತ್ಯ-ನಾಟಕಗಳನ್ನು ಸಂಯೋಜಿಸಿದ್ದಾರೆ.

ಆದರೂ ಯೋಗೇಶ್ ಮಾಸ್ಟರ್ ಅವರನ್ನು ಗುರುತಿಸುವುದು ರಂಗನಿರ್ದೇಶಕರಾಗಿ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಾಟಕಗಳನ್ನು ನಿರ್ದೇಶಿಸಿರುವ ಇವರು 220ಕ್ಕೂ ಹೆಚ್ಚು ಸ್ವತಂತ್ರ ರಂಗಪ್ರಯೋಗಗ... ಮಾಡಿದ್ದಾರೆ. ರಂಗಪ್ರಯೋಗಗಳಿಗೆ ಹೊಂದದಂತಹ ಕೃತಿಗ... ಸೃಜನಶೀಲತೆಯಿಂದ ರಂಗಭೂಮಿಗೆ ಅಳವಡಿಸುವುದು ಇವರ ವಿಶೇ... ಖಲೀಲ್ ಗಿಬ್ರಾನ್‌ನ 'ದ.ಪ್ರಾಫೆಟ್' (ಪ್ರವಾದಿ), ಪಾಲೋ ಕೋಲ್ಹೊ... 'ದ ವಾರಿಯರ್ ಆಫ್ ಲೈಟ್', ಹರ್ಮನ್ ಹೆಸ್ ಅವರ 'ಸಿದ... ಅವುಗಳಲ್ಲಿ ಕೆಲವು.

ನಾಳೆ ಬರುವುದು ಮತ್ತೆ ಆನಂದವನ, ನಗುವಲಿ ಬಗೆಯಿಲ್ಲ, ಕ್ಷಮೆಯಿರಲಿ ಇತ್ಯಾದಿ ಅವರು ನಿರ್ದೇಶಿಸಿರುವ ಕಿರುಚಿತ್ರಗಳು.

ಸಮಾಜದ ವಿವಿಧ ಕಾರ್ಯಕ್ಷೇತ್ರಗಳಲ್ಲಿರುವ ಕಲಾಸಕ್ತ... ರಂಗಕರ್ಮಿಗಳನ್ನಾಗಿಸುವ ದೀಕ್ಷೆ ನೀಡುತ್ತಾ ಬಂದಿರುವ ಯೋಗೇಶ್ ಮಾ... ಅವರನ್ನು ಅವರ ಶಿಷ್ಯರು ಮತ್ತು ಹಿತೈಷಿಗಳು ಗುರೂಜಿ ಅಥವಾ... ಎಂದು ಕರೆಯುತ್ತಾರೆ. ಇವರಿಂದ ಈ ರೀತಿ ದೀಕ್ಷಿತರಾದ ಅನೇ... ರಂಗಭೂಮಿ, ಕಿರುತೆರೆ ಮತ್ತು ಬೆಳ್ಳಿತೆರೆಗಳಲ್ಲಿ ಕಲಾವಿದರಾಗಿದ್ದಾರೆ.

ರಂಗಭೂಮಿಯಲ್ಲಿ ಇವರ ಪ್ರಮುಖ ಇಂಗ್ಲಿಷ್ ರಂಗಪ್ರಯೋಗ... ರವೀಂದ್ರನಾಥ ಟ್ಯಾಗೋರ್ ಅವರ 'ಒನ್ಸ್ ದೇರ್ ವಾಸ್ ಎ ಕಿಂಗ್'... ಹೆನ್ರಿ ಅವರ 'ದ ಲಾಸ್ಟ್ ಲೀಫ್', 'ಬೇಸಿಕ್ ಇಂಸ್ಟಿಂಕ್ಟ್' ಮತ್ತು... ಪ್ರಾಫೆಟ್'.

ಕನ್ನಡದಲ್ಲಿ: ಕುವೆಂಪು ಅವರ 'ಬೆರಳ್‌ಗೆ ಕೊರಳ್', ಕೆಂಪು ನಾರಾ... 'ಚಾಣಕ್ಯ ಶಪಥಂ', 'ಸತ್ಯಕಾಮ', 'ಕಲ್ಯಾಣಿ ಕಲ್ಯಾಣಮ್ಮ', 'ಪಾಂ... ಶಪಥಂ', 'ಅಂಬಾ ಶಪಥಂ', 'ಆನಂದ ಕಂದ; ಟ್ಯಾಗೋರ್ ಅವರ 'ಕೆಂದ... ಕಂದಾ', ಇತ್ಯಾದಿ.

ನೃತ್ಯರೂಪಕಗಳಲ್ಲಿ 'ಮಹಿಷಾಸುರ ಮರ್ಧಿನಿ', 'ವೈಶಾಲಿ', 'ಯಾಗ... 'ಸಮುದ್ರಮಂಥನ', 'ದ ಲಾಸ್ಟ್ ಜರ್ನಿ ಆಫ್ ಕ್ರೈಸ್ಟ್', 'ಭಾಗೀ... 'ಗಂಗಾವತರಣ' ಮತ್ತು 'ದ ಟು ವರ್ಲ್ಡ್ಸ್' ಇತ್ಯಾದಿ.


ಸಾಹಿತ್ಯದಲ್ಲಿ ಕೆಲವು: 'ಮರಳಿ ಮನೆಗೆ', 'ಜೀವನ ಸಂಜೀವನ', 'ಕೋಳೀಕೆ ರಂಗಾ', 'ಕೊನೆಯ ಅಂಕ', 'ಮಳೆ ಬಂದು ನಿಂತಾಗ', 'ಸಮಾನ... ರೇಖೆಗಳು', 'ಶುಭರಾತ್ರಿ', 'ಭಗ್ನಹೃದಯ' ಮತ್ತು ಇತ್ತೀಚೆಗೆ 'ಧ... ಅರಣ್ಯಕನೊಬ್ಬ ಗಣಪತಿಯಾದ ಕಥೆ.'

ಪುರಾಣದ ಹೂರಣ

ಒಂದು 'ಢುಂಢಿ' ಕಾದಂಬರಿಯ ವಿರುದ್ಧ ದೊಂಬಿ ಎಬ್ಬಿಸಿದಾಕ್ಷಣ ವಿಚಾರವಾದಿಗಳ ದನಿ ಅಡಗಿಸಲಾಗದು ಎಂಬುದನ್ನು ನಾವೀಗ ಹೇಳಬೇಕಿದೆ. ಹಿಂದೂ ಧರ್ಮದ ಹೆಸರಿನಲ್ಲಿ, ದೇವರು-ಪುರಾಣ ಕತೆಗಳ ನೆಪದಲ್ಲಿ ಈ ನಾಡಿನ ಕೋಟ್ಯಂತರ ಶೂದ್ರರ ಬದುಕನ್ನು ಮೂಢನಂಬಿಕೆಯ ಕತ್ತಲೆಗೆ ತಳ್ಳುತ್ತಿರುವ ಹಿಂದೂ ಜಾತಿವಾದಿ-ಕೋಮುವಾದಿ 'ಬ್ರಾಹ್ಮಣ್ಯ'ದ ವಿರುದ್ಧ ಸವಾಲೊಡ್ಡುವಂತೆ ಈ ಸಂಚಿಕೆಯಿಂದ 'ಪುರಾಣದ ಹೂರಣ' ಅಂಕಣವನ್ನು ಪ್ರಕಟಿಸುತ್ತಿದ್ದೇವೆ. ವಿವಾದಕ್ಕೀಡಾದ ಲೇಖಕ ಯೋಗೇಶ್ ಮಾಸ್ಟರ ಈ ಅಂಕಣ ಬರೆಯುತ್ತಾರೆ. ಅವರ ಕಿರು ಪರಿಚಯವೂ ಜೊತೆಗಿದೆ.

ನಿಮ್ಮ ಪ್ರತಿಕ್ರಿಯೆಗಳಿಗೆ ಸ್ವಾಗತ

- ಸಂ



ಗಣಪತಿ: ಬಂಡಾಯದ ದಳಪತಿ!

"... ಶಿವನೂ ವಿಷ್ಣುವೂ ಕೊನೆಮೊದಲಿಲ್ಲದವರು. ಅವರ ಅವತಾರಗಳಿಗೆ ಆದಿ-ಅಂತ್ಯಗಳುಂಟೇ ಹೊರತು ಮೂಲತಃ ಅವರಿಗೆ ಇಲ್ಲ, ಗಣಪತಿಯ ಜನ್ಮದ ವಿಷಯದಲ್ಲಿ ಹಲವಾರು ಕಥೆಗಳುಂಟು. ಅವನಿಗೆ ಆದಿ ಉಂಟು, ಸ್ಪಷ್ಟವಾಗಿ ಹುಟ್ಟು ಉಂಟು. ಈಗ ನಾನು ಹೇಳಲಿರುವ ಜನ್ಮ ಕಥೆ ಎಲ್ಲರಿಗೂ ಪರಿಚಿತವಾದದ್ದು.

ಪಾರ್ವತಿ ಒಂದು ದಿನ ಸ್ನಾನಕ್ಕೆ ಹೊರಟಳಂತೆ. ಸ್ನಾನದ ಮನೆಗೆ ಇತರರು ನುಗ್ಗದಂತೆ ತಡೆಯಲು ಕಾವಲುಗಾರನೊಬ್ಬ ಬೇಕಾಯಿತು. ತನ್ನ ಮೈಮೇಲಿನ ಕೊಳೆಯನ್ನು (ಪಾಠಾಂತರ: ಮೈಗೆ ಲೇಪಿಸಿದ್ದ ಸುಗಂಧವನ್ನು) ಶೇಖರಿಸಿ ಹುಡುಗನ ಆಕಾರವುಳ್ಳ ಪುಟ್ಟ ಗೊಂಬೆಯೊಂದನ್ನು ತಯಾರಿಸಿದಳು. ಅದಕ್ಕೆ ಜೀವ ಕೊಟ್ಟು ಕಾವಲಾಗಿ ನಿಲ್ಲಿಸಿದಳು. ಕೆಲವು ನಿಮಿಷಗಳಾದ ಮೇಲೆ ಶಿವ ಅಲ್ಲಿಗೆ ಬಂದ. ಆ ಹುಡುಗ ಅವನನ್ನು ತಡೆದ. ಶಿವ ರೇಗಿ ಅವನ ತಲೆಯನ್ನು ಕತ್ತರಿಸಿದ. ಪಾರ್ವತಿ ಇದನ್ನು ನೋಡಿ ಸಂಕಟಪಟ್ಟಳು. ಅವಳನ್ನು ಸಮಾಧಾನಿಸಲು ಶಿವ ಆ ಹುಡುಗನನ್ನು ಬದುಕಿಸುವ ಪ್ರಯತ್ನ ಮಾಡಿದ. ಹುಡುಗನಿಗೆ ತಲೆ ಇರಲಿಲ್ಲವಲ್ಲ! "ಉತ್ತರ ದಿಕ್ಕಿಗೆ ತಲೆ ಹಾಕಿಕೊಂಡು ಮಲಗಿರುವವನೊಬ್ಬನ ತಲೆಯನ್ನು ಕತ್ತರಿಸಿ ತನ್ನಿ" ಎಂದು ಸೇವಕರಿಗೆ ಅಪ್ಪಣೆ ಮಾಡಿದ. ಹಾಗೆ ಮಲಗಿದ್ದವರು ಯಾರೂ ಸಿಕ್ಕಲಿಲ್ಲ - ಆನೆಯೊಂದರ ಹೊರತು. ಸೇವಕರು ಅದರ ತಲೆಯನ್ನೇ ತಂದರು. ಶಿವ ಅದನ್ನು ಹುಡುಗನ ಮುಂಡಕ್ಕೆ ಜೋಡಿಸಿ ಆ ವ್ಯಕ್ತಿಗೆ ಜೀವ ತುಂಬಿದ. ಹೀಗೆ ಹುಟ್ಟಿದವನು, ನಮ್ಮ ಗಜವದನ!

ಗೊಂಬೆಯನ್ನು ಮಾಡುವುದಕ್ಕೆ ಪಾರ್ವತಿಗೆ ಹಿಟ್ಟು, ಮಣ್ಣು ಮುಂತಾದ ಬೇರೆ ಯಾವ ಸಾಮಗ್ರಿಯೂ ಸಿಕ್ಕಲಿಲ್ಲವೇ? ಆಕೆಯ ಮೈಮೇಲೆ ಪುಟ್ಟ ಹುಡುಗನ ಪ್ರಮಾಣದ ಗೊಂಬೆಯನ್ನು ಮಾಡುವುದಕ್ಕೆ ಬೇಕಾದಷ್ಟು ಕೊಳೆ (ಅಥವಾ ಸುಗಂಧ ದ್ರವ್ಯ) ಇತ್ತೇ? ಅವಳ ಸ್ನಾನದ ಮನೆಗೆ ಬಾಗಿಲು ಅಗುಳಿಗಳೇನೂ ಇರಲಿಲ್ಲವೇ? ಶಿವನಾದರೂ ದಾದು ಫಿರ್ಯಾದು ಏನೂ ಯೋಚಿಸದೇ ಚಿಕ್ಕ ಹುಡುಗನನ್ನು ಕೊಲ್ಲುವಷ್ಟು ಕ್ರೂರಿಯೇ? ಹುಡುಗನನ್ನು ಮತ್ತೆ ಬದುಕಿಸಲು ಬೇಕಾದ ತಲೆ - ಆ ಹುಡುಗನದೇ ತಲೆ- ಹತ್ತಿರದಲ್ಲಿಯೇ ಬಿದ್ದಿತ್ತಲ್ಲ (ಅಥವಾ ಶವದ ರುಂಡವೊಂದನ್ನು ಮಾತ್ರ ಸಾಗಿಸಿಬಿಟ್ಟಿದ್ದರೋ?) ಅದನ್ನು ಬಿಟ್ಟು ಬೇರೆ ತಲೆಯನ್ನೇಕೆ ತರಿಸಬೇಕಿತ್ತು? ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿದ್ದವರು ಯಾರೇ ಆಗಲಿ, ನಿಷ್ಕಾರಣವಾಗಿ ಅವರನ್ನು ಕೊಲ್ಲುವುದು ಅನ್ಯಾಯವಲ್ಲವೇ? ಅವರು ಮಾಡಿದ ಅಪರಾಧವೇನು? (ಇದಕ್ಕೆ ಕೆಲವರು ಖೋಟಾ ವೈಜ್ಞಾನಿಕ ಉತ್ತರ ಕೊಡುತ್ತಾರೆ. ಅದೇನೆಂಬುದು ಮರೆತುಹೋಗಿದೆ - ಉತ್ತರದಿಕ್ಕಿನಿಂದ ಹರಿಯುತ್ತದೆಂದು ಹೇಳಲಾದ ಕಾಂತಶಕ್ತಿಗೆ ಸಂಬಂಧಪಟ್ಟದ್ದು)-ಇಂಥ ಪ್ರಶ್ನೆಗಳನ್ನು ಕೇಳಬಾರದು. ನದೀಮೂಲ ಋಷಿಮೂಲಗಳನ್ನು ಬೆದಕಿಕೊಂಡು ಹೋಗಬಾರದಂತೆ. ಅಂದಮೇಲೆ ದೇವರ ಮೂಲವನ್ನು ಬೆದಕುವವನಿಗೆ ಕ್ಷಮೆಯುಂಟೇ?" ಎಂದು ಎ.ಎನ್.ಮೂರ್ತಿರಾವ್ ಅವರು, 1991ರಿಂದ 2012ರವರೆಗೆ 22 ಮುದ್ರಣಗಳನ್ನು ಕಂಡಿರುವ, ಪಂಪ ಪ್ರಶಸ್ತಿ ಪಡೆದಿರುವ ವೈಚಾರಿಕ ಕೃತಿಯಾದ 'ದೇವರು' ಪುಸ್ತಕದಲ್ಲಿ ಕೇಳಿದ್ದಾರೆ.

ಈ ಬಗೆಯ ಪ್ರಶ್ನೆಗಳು ಯಾವುದೇ ಒಂದು 'ಸಣ್ಣ ಹುಡುಗನಿಗೂ ಬರುವವು. ಹಾಗೆ ಪ್ರಶ್ನೆಗಳು ಬಾರದೇ ಹೋದಲ್ಲಿ, ಆ ವ್ಯಕ್ತಿಯ ಮನಸ್ಥಿತಿಯ ಬಗ್ಗೆ ಸಹಜವಾಗಿ ಇರಬೇಕಾದ ವೈಚಾರಿಕ ಮನೋಭಾವದ ಆರೋಗ್ಯದ ಬಗ್ಗೆ ಅನುಮಾನ ಬರುತ್ತದೆ. ಪ್ರಶ್ನೆಗಳು ಬಂದಾಗ ನಿರ್ದಿಷ್ಟವಾಗಿ ಉತ್ತರವನ್ನು ಪಡೆಯಲಾಗದಿದ್ದರೂ ಪ್ರಶ್ನೆಗಳು ಒಯ್ಯುವ ದಾರಿಯಲ್ಲಿ ನಡೆಯುವುದು ಒಂದು ಅದ್ಭುತವಾದ ಅನುಭವ ಮತ್ತು ಅನುಭೂತಿ. ಪ್ರಶ್ನೆಗಳನ್ನು ಕೇಳುವುದರಿಂದ ಉತ್ತರಗಳು ಸಿಗುವ ಖಾತ್ರಿಯೇನೂ ಇಲ್ಲ, ಆದರೆ ಅವುಗಳಿಂದ ಮತ್ತಷ್ಟು ಪ್ರಶ್ನೆಗಳು ಹುಟ್ಟುತ್ತವೆ. ಅವುಗಳು ಮತ್ತಷ್ಟು ಹೊಸತಾಗಿರುತ್ತವೆ. ನಿಜ ಹೇಳಬೇಕೆಂದರೆ, ಹೊಸ ಪ್ರಶ್ನೆಗಳು ನೀಡುವ ಆನಂದ, ನಿರ್ಧರಿತವಾದ ಉತ್ತರಗಳು ದೊರಕುವುದಕ್ಕಿಂತ ಆಹ್ಲಾದಕರ. ಒಂದು ಬಗೆಯ

... (Evil Incarnate) ...

ಉನ್ಮತ್ತವಾದ ಪ್ರಯಾಣ. ಪ್ರಶ್ನೆಗಳು ಹುಟ್ಟಬಾರದು ಹುಟ್ಟಿದರೂ ಕೇಳಬಾರದು, ಕೇಳಿದರೂ ಉತ್ತರಿಸ... ಎಂದರೆ- ಅದೇ ಪ್ರಗತಿಪರ ಚಿಂತನೆಗಳಿಗೆ ವೈಚಾರಿಕತೆಯು ಅರಳಬಾರದು, ಬೆಳೆಯಬಾ... ಮಾಡಿರುವ ಚಂಡಶಾಸನ.

ಮನುಕುಲದ ಯಾವ ವಿಷಯಗಳೂ ಚಂಡಶಾಸನದ ವ್ಯಾಪ್ತಿಗೆ ಬರುವುದಿಲ್ಲ, ಹಾಗ...

ಹುಟ್ಟಿಸಿದ ಹಿತಾಸಕ್ತಿಯ ಅಂಕುಶವಾದರು ಆದಷ್ಟೇ ನವರೂ ವೈಚಾರಿಕ ಕ್ರಾಂತಿ ನಡೆಯುತ್ತಲೇ ಇದೆ. ದು ಜೀವಂತವಾಗಿಯೇ ಇದೆ. ಬರಿಯ ವೈಚಾರಿಕ ಗಳು ಆಧಾರರಹಿತವಾದಾಗ ವಿಷಯಗಳು ಬಿಡುತ್ತವೆ. ಅವುಗಳು ಅಧ್ಯಯನದ ವ್ಯಾಪ್ತಿಗೂ ಗ ವಿಚಾರಗಳು ಗಟ್ಟಿಯಾಗುವುದಲ್ಲದೇ, ನಮಗೇ ನಮ್ಮದೇ ಸಮಾಜದ ಮತ್ತು ಸಂಸ್ಕೃತಿಯ ಅರಿವಾಗುತ್ತಾ ಹೋಗುತ್ತದೆ. ಇದು ಆತ್ಮ ವುದಷ್ಟೇ ಶ್ರೇಷ್ಠವಾದುದು.

ಕಾಲದ ಸತ್ಯಗಳು ಪುರಾಣಗಳ ಕಲ್ಪನೆಗಳಲ್ಲಿ ವಾಗುತ್ತವೆ ಎಂದು ಮಾರ್ಕ್ಸ್ ಹೇಳಿರುವುದು ಪೂರ್ವಾಗ್ರಹವಿಲ್ಲದ ಅಧ್ಯಯನಶೀಲನಿಗೆ ಒಂದು ಹಂತಕ್ಕೆ ದು ಗೋಚರವಾಗುವುದು. ಪುರಾಣಗಳ ರಚನೆ ಉದ್ದೇಶಗಳಿಂದ, ನಾನಾ ಪರಿಕಲ್ಪನೆಗಳಿಂದ, ನಾನಾ ಂದ ರಚಿತವಾಗಿದ್ದರೂ ಅಧ್ಯಯನ ದೃಷ್ಟಿಯಿಂದ ಹಲು ಹೊರಟಾಗ ಹಲವು ಕೌತುಕವಾದ ಳು ತಿಳಿಯುತ್ತಾ ಹೋಗುವವು. ಈ ತಿಳಿವಳಿಕೆಯು ಸಾಂಸ್ಕೃತಿಕ ಬೆಳವಣಿಗೆಯ ಬಗ್ಗೆ ಗೌರವವನ್ನು ದೇ ಹೊರತು ತಿರಸ್ಕಾರವನ್ನಾಗಲಿ, ಉಪೇಕ್ಷೆಯ ಉಂಟುಮಾಡುವುದಿಲ್ಲ. ಆದರೆ, ಆಯಾ ವಿಷಯದ ಪುರೋಹಿತರು ಒಡ್ಡಿಟ್ಟಿರುವ ಅನಗತ್ಯವಾದ ಗಳಿ, ಭಯಗಳಾಗಲಿ ಇರುವುದಿಲ್ಲ. ನಾವು ಈ ಪಾರಿತವಾದ ಭಯದಿಂದ ಅಥವಾ ಆಸೆಗಳಿಂದ ಹೊಂದಿದರೆ, ಬಹುಶಃ ಆದನ್ನೇ ಬಂಡವಾಳವ ಂಡು ದುರ್ಬಲ ಮನಸ್ಸುಗಳ ನೀಡುವಿಕೆಯ ಮೇಲೆ ತ್ತಿರುವ ಅನೇಕ ವ್ಯಾಪಾರಿಗಳ ವ್ಯವಹಾರಕ್ಕೆ ಗುವ ಕಾರಣದಿಂದಲೋ ಏನೋ ದೇವರ ನ್ನು ಬೆದಕಬಾರದು, ಹುಡುಕಬಾರದು ಎಂದು ಶಾಸನವೊಂದನ್ನು ಜಾರಿಯಲ್ಲಿಟ್ಟಿರುವುದು. ಇರಲಿ, ಈ ಬಗೆಯ ಅಧ್ಯಯನಗಳು ನಮ್ಮದೇ ಮಾಜಿಕವಾದ ವಿಕಾಸ ಕ್ರಮವನ್ನು ಹೇಳುವುದಲ್ಲದೇ, ನೆಲೆಗಟ್ಟಿನಿಂದ ಧಾರ್ಮಿಕವೆಂದು ಹೇಳಿರುವಂತಹ ವಿಷಯಗಳು ಅರ್ಥವಾಗುತ್ತಾ ಹೋಗುತ್ತವೆ.

ಪೂಜಿತನೆಂದು ಹೇಳಲಾಗುವ ಗಣಪತಿಯಿಂದಲೇ ವಳಿಕೆಯ ಜಾಡನ್ನು ಹಿಡಿದು ಹೋಗುವುದರಿಂದ ೂ ತೊಂದರೆಯಿಲ್ಲ. ಗಣಪತಿಯಿಂದ ಆರಂಭವಾಗಿ, ವಿಷ್ಣು ಇಂದ್ರ, ಅಗ್ನಿ, ಮರುತ್ತರು, ಶಿವ ಇತರರ ಸಮಕಾಲಿನ, ಇತ್ತೀಚೆಗೆ ಹುಟ್ಟಿಕೊಂಡಿರುವ ದೇವತೆ ಾ ಬರಬಹುದು ಎಂದೆನಿಸುತ್ತದೆ. ನಿಮಗೆ ಆಶ್ಚರ್ಯ ಪುದು. ಕೆಲವು ದೇವತೆಗಳು ತೀರಾ ಇತ್ತೀಚೆಗೆ, ವರ್ಷಗಳ ಹಿಂದೆ ಹುಟ್ಟಿದರು. ಆದರೆ, ಅವರನ್ನು ಪುರಾತನರೆಂದು ಬಿಂಬಿಸಲಾಗಿದೆ. ಅದು ಹೇಗೆ? ಲ್ಲವನ್ನೂ ಸವಿಸ್ತಾರವಾಗಿ ನೋಡುತ್ತಾ ಬರೋಣ.

ಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಮುಪಮಶ್ರವಸ್ತಮಂ
ಜಂ ಬ್ರಹ್ಮಣಾಂ ಬ್ರಹ್ಮಣಸ್ಪತಿ ಆ ನಃ ಶೃಣ್ವನ್ನೂತಿಭಿಃ ದನಂ ॥

ದು ಋಗ್ವೇದದ ಎರಡನೆಯ ಮಂಡಲದ ೂರನೆಯ ಸೂಕ್ತದ ಮೊದಲನೆಯ ಮಂತ್ರವಿದೆ. ತ್ಕೆ, ಗಣಪತಿ-ಸೂಕ್ತ ಮತ್ತು ಬ್ರಹ್ಮಣಸ್ಪತಿ-ಸೂಕ್ತ ಎರಡೂ ರೀತಿಯಿಂದ ಕರೆಯಲಾಗುತ್ತದೆ. ದ ಕವಿಗಳಿಗೆ ಆನೆ ಮುಖದ ಗಣಪತಿ ಗೊತ್ತಿರಲಿಲ್ಲ, ಲಾಗುವ ಗಣಪತಿಯನ್ನು ಸದಸತ್ಪತಿ, ಜ್ಯೇಷ್ಠರಾಜ, ಮೊದಲಾದ ನಾಮಗಳಿಂದ ಸಂಬೋಧಿಸಿದೆ. ದ ಮಂಡಲದ ಇಪ್ಪತ್ತಮೂರನೆಯ ಸೂಕ್ತದ ತ ಮಂತ್ರಗಳಲ್ಲಿ ಗಣಪತಿಯನ್ನು ಬೃಹಸ್ಪತಿ ಎಂದೇ ಧಿಸಿದೆ. ಈ ಬೃಹಸ್ಪತಿ, ಬ್ರಹ್ಮಣಸ್ಪತಿ ಮತ್ತು ಬ್ರಹ್ಮ ಒಂದೇ ಎಂದು ಅರವಿಂದರು ಹೇಳಿದ್ದಾರೆ.

ಪತಿಯು ದೇವತೆಗಳಲ್ಲಿ ಗಣನೆಗೆ ಬಂದಾಗ ಮಾತ್ರ ಷಿಗಳು ಮಂತ್ರಗಳ ಜನಕರಾಗಿ ಹೋಗಿದ್ದರು. ಪೂಜೆಗೆ ಆಗ ಮಂತ್ರಗಳಿರಲಿಲ್ಲ, ಮಂತ್ರಗಳಿಲ್ಲದೇ ಪ್ಪ ಮಾಡುವಂತಿರಲಿಲ್ಲ, ಲೌಕಿಕ ಸಂಸ್ಕೃತದಲ್ಲಿ ಗಳು ಗಣಪತಿಯ ಪರವಾಗಿ ರಚಿಸಿದರು. ಆದರೂ ಮಂತ್ರಗಳ ಅಭಾವದಿಂದ ಕಾರ್ಯಗಳು ದರೂ ಮನಸ್ಸಿಗೆ ಸಮಾಧಾನ ಉಂಟಾಗುತ್ತಿರಲಿಲ್ಲ. ದಲ್ಲಿ ಗಣಪತಿ ಶಬ್ದದ ಪ್ರಯೋಗವಿರುತ್ತಿತ್ತೋ ಗಳೆಲ್ಲಾ ಗಣೇಶನ ಪರಗಳೆಂದಾದವು. ವೇದಗಳಲ್ಲಿ ಆ ಮಂತ್ರಗಳು ಗಣೇಶನ ಪರಗಳೆಂದು ಹೇಳಿಲ್ಲ. ಶಬ್ದ ಪ್ರಯೋಗವು ಬೃಹಸ್ಪತಿಗೆ ಸಂಬಂಧಿಸಿದುದು.

ವೇದಗಳಲ್ಲಿ ಗಣೇಶನ ದರ್ಶನವಿಲ್ಲ, ಆದರೆ ಅವನ ವಿಷಯ ಬಹಳವಾಗಿ ವರ್ಣಿತವಾಗಿದೆ. ಚಕಿತಗೊಳಿಸುವ ಅವನ ವಿಗ್ರಹವಿಚಾರಗಳಿವೆ. ರಚನಾಕಾಲವು ಗುಪ್ತರ ಕಾಲಕ್ಕೆ ಸಮನಿರ ಹೇಳಲಾಗುತ್ತದೆ. ಕೆಲವು ತಂತ್ರ- ಗ್ರಂಥಗಳು ಗ್ರಂಥಗಳ ಕೆಲವು ಅಂಶಗಳು ಪುರಾಣದಷ್ಟೇ ಪುರಾಣಗಳಲ್ಲಿ ಗಣಪತಿಯ ಪೂಜೆಯು ಚರ್ಚಿತವಾಗಿರುವುದರಿಂದ ಪುರಾಣಗಳಿಗಿಂತ ಮೊದಲೇ ಗಣಪತಿ ಪ್ರಸಿದ್ಧನಾಗಿರಬೇಕು. ವಿಕ್ರಮಶಕೆ 5 ಅಥವಾ 6ನೆಯ ಶತಮಾನದಲ್ಲಿ ಭಾರತೀಯರಿಗೆ ಗಣಪತಿ ಪರಿಚಿತನಾಗಿದ್ದನು. ಬುದ್ಧನ ಕಾಲದ ದೇವಗಣಗಳಲ್ಲಿ ಗಣಪತಿಯು ಸೇರಿದ್ದನೆಂದು ಹೇಳುವುದು ಕಷ್ಟ. ಬುದ್ಧನು ಬ್ರಹ್ಮ, ಇಂದ್ರ ಹಾಗೂ ಇತರ ದೇವತೆಗಳನ್ನು ಉಲ್ಲೇಖಿಸಿದ್ದಾನೆ. ಆದರೆ ಗಣೇಶನನ್ನು ಎಲ್ಲಿಯೂ ಹೇಳಿಲ್ಲ. ಅದೇ ಸಮಯದ ತೀರ್ಥಂಕರ ವರ್ಧಮಾನನು ಎಲ್ಲಿಯೂ ಗಣಪತಿಯನ್ನು ಉದಾಹರಿಸಿಲ್ಲ.

ಡಾ. ಸಂಪೂರ್ಣಾನಂದ ಅ. ಮರಿಬಸವಾರಾಧ್ಯರು ಹೀಗೇ ತಮ್ಮ ವಿದ್ವತ್ಪೂರ್ಣ ಸಂಶೋಧನಾತ್ಮಕ ಗಮನಿಸುವಿಕೆಯನ್ನು ಮುಂದುವರಿಸುತ್ತಾರೆ. ಶ್ರುತಿಕಾಲದ ಅನಂತರ ಮತ್ತು ಪುರಾಣಕಾಲದ ಮಧ್ಯದಲ್ಲಿ ಗಣಪತಿಯು ಎಲ್ಲಿಂದ ಹೇಗೆ ಬಂದು ದೇವತೆಗಳ ಶ್ರೇಣಿಯಲ್ಲಿ ಸ್ಥಾನವನ್ನು ಪಡೆದನು? ಬುದ್ಧ ಹಾಗೂ ಪುರಾಣಗಳ ಅಂತರ ಸುಮಾರು **1000** ವರ್ಷಗಳಿರಬಹುದು. ಈ ಅಂತರದಲ್ಲಿ ಆರ್ಯರ ದೇವತೆಗಳ ಶ್ರೇಣಿಯಲ್ಲಿ ಹೇಗೆ ಬಂದನೆಂಬುದೇ ಸಮಸ್ಯೆಯಾಗಿದೆ. ವೇದಗಳಲ್ಲಿ ಇಂದ್ರ, ಅಗ್ನಿ, ವರುಣರು ಪ್ರಧಾನರಾಗಿದ್ದು ಪುರಾಣಗಳಲ್ಲಿ ಮಾಂಡಲೀಕರಾಗಿದ್ದಾರೆ. ವೇದಗಳಲ್ಲಿ ಅಪ್ರಧಾನರಾದ ವಿಷ್ಣು ಮತ್ತು ರುದ್ರರು ಪುರಾಣಗಳಲ್ಲಿ ಪ್ರಧಾನರಾಗಿದ್ದಾರೆ. ಆದರೆ ವೈದಿಕದಲ್ಲಿ ಅಸ್ತಿತ್ವವಿಲ್ಲದೇ ಇದ್ದರೂ ಪುರಾಣಗಳಲ್ಲಿ ಅಗ್ರಸ್ಥಾನ ಪಡೆದವನು ಗಣಪತಿ ಯೊಬ್ಬನೇ. ಇಷ್ಟಲ್ಲದೇ ವೇದಾನುಯಾಯಿಗಳು ಗಣಪತಿಯ ಉಪಾಸಕರಾಗಿದ್ದಾರೆ. ನಂತರ ವಿಕಸಿತವಾಗಿದ್ದ ಬೌದ್ಧ- ಸಂಪ್ರದಾಯದಲ್ಲಿ ಗಣೇಶನ ವರ್ಣನೆಗಳು ಬರುತ್ತವೆ.

ಪುರಾಣಗಳೆಲ್ಲವೂ ಒಂದೇ ಸಮಯದಲ್ಲಿ, ಒಂದೇ ಸ್ಥಾನದಲ್ಲಿ ಒಬ್ಬನೇ ಬರೆದವಲ್ಲ. ಆದುದರಿಂದ ಕಥೆಗಳು ಒಂದೇ ತೆರನಾಗಿಲ್ಲ. ಗಣಪತಿಯ ವಿಷಯದಲ್ಲೂ ಅಷ್ಟೇ. ಅವನಿಗೆ ಸಂಬಂಧಪಟ್ಟ ಪುರಾಣಗಳೂ ಭಿನ್ನ ಭಿನ್ನವಾಗಿವೆ. ಒಂದೊಂದನ್ನೂ ಹಲವಾರು ರೀತಿಯಲ್ಲಿ ವಿಶ್ಲೇಷಣೆ ಮಾಡಲು ಸಾಧ್ಯವಾಗುತ್ತವೆ. ಪುರಾಣಗಳ ವಿಶ್ಲೇಷಣೆಗಳು ಏಕಪ್ರಕಾರವಾಗಿ, ಏಕಮುಖವಾಗಿ ನಡೆಯಲು ಸಾಧ್ಯವಿಲ್ಲ. ಅಧ್ಯಯನಗಳು ನಾನಾ ಮುಖವಾಗಿ ನಡೆದರೂ ಕೊನೆಗೊಂದು ಸಂಕ್ಷಿಪ್ತ ಉತ್ತರದ ಗುರಿಯನ್ನು ತಲುಪಬೇಕಾಗುತ್ತದೆ. ನಾನಿಲ್ಲಿ 'ಗಣಪತಿ: ಬಂಡಾಯದ ದಳಪತಿ' ಎಂದು ಶೀರ್ಷಿಕೆಯಲ್ಲಿ ಕರೆದಿರುವ ಕಾರಣವು ಒಂದು ತುಲನಾತ್ಮಕ ವಿಚಾರವೇ ಆಗಿದೆ. ಏಕೆ ಮತ್ತು ಹೇಗೆ ಎಂದು ಮುಂದೆ ನೋಡೋಣ.


● ಯೋಗೇಶ್ ಮಾಸ್ಟರ್

ಕೊನೆಯ ಎರಡು ಗುಬ್ಬಚ್ಚಿಗಳು

ಹಿಡಿ ಗಾತ್ರದ
ಎರಡೇ ಎರಡು ಗುಬ್ಬಚ್ಚಿಗಳು
ಇನಿದನಿಯಲಿ ಹಾಡಿದ ಚಿಲಿಪಿಲಿಯ ಹಾಡು
ಆ ಕೂಸಿಗೆ ಕೇಳಿಸಲೇ ಇಲ್ಲ
ಮೂರಗಲದ ಪಡಸಾಲೆಯಲ್ಲಿ
ಸೀಮೆಸುಣ್ಣದ ಬಣ್ಣದಿಂದ
ರಂಗೋಲಿಗೆ ಪ್ರತಿಯಾಗಿ
ಪ್ರಕೃತಿಯ ಚಿತ್ರ ಬಿಡಿಸುತ್ತಿದ್ದಾಳೆ
ನದಿ, ಬೆಟ್ಟ, ಗಿಡ-ಮರ,
ಉರಿವ ಸೂರ್ಯ ಮತ್ತೆ ಪಕ್ಷಿಗಳಿವೆ......

ಹಿಡಿ ಗಾತ್ರದ
ಎರಡೇ ಎರಡು ಗುಬ್ಬಚ್ಚಿಗಳು
ಕಿಟಕಿಯ ಸರಳುಗಳ ಮೇಲೆ
ಜೋಲಿ ಹೊಡೆಯುತ್ತಾ
ಪಿಸುಮಾತಿನಲಿ ಚಿಂವ್‌ಗುಟ್ಟಿ ಕರೆದದ್ದು
ಮನೆಯೊಡತಿಯ ಕಿವಿಗೆ ತಾಕಲೇ ಇಲ್ಲ
ಗಡಿಬಿಡಿಯಲಿ ಎದ್ದು
ತಿಂಡಿ ತಯಾರಿಸಿ
ಗಂಡ ಮಕ್ಕಳಿಗೆ ತಿನ್ನಿಸಿ
ಉಳಿದದ್ದನ್ನೇ ಲಂಚ್‌ಬಾಕ್ಸ್‌ಗೆ ತುಂಬುವ
ತಾನೂ ತಯಾರಾಗಿ ಕೆಲಸಕ್ಕೆ ಓಡುವ
ಧಾವಂತದಲಿ
ಅವಳನ್ನು ಅವಳೇ ಮರೆತಿರುವಾಗ..........

ಮೊಬೈಲ್‌ಗೆ ಕಿವಿಯಾನಿಸಿಕೊಂಡು
ಸರಸರನೆ ಅವಸರದಿ ಮೆಟ್ಟಿಲಿಳಿದ ಅವನಿಗೆ
ಹಿಡಿ ಗಾತ್ರದ ಎರಡು
ಎರಡೇ ಎರಡು
ಗುಬ್ಬಚ್ಚಿಗಳು
ಜನ್ಮಾಂತರದ ಕತೆ ಹೇಳಲು ತವಕಿಸಿದ್ದು
ಕಪ್ಪು ಕನ್ನಡಕದಲ್ಲಿ ಹೂತ ಕಣ್ಣುಗಳಿಗೆ
ಕಾಣದಾಯಿತು
ಕಚೇರಿಗೆ ಕಾರು ಹತ್ತಿ ಹೋದವನ ಹಿಂದೆ
ಕಪ್ಪನೆಯ ಹೊಗೆ ಧೂಳು
ಅದರೊಳಗೆ
ಪಾಪದ ಎರಡೇ ಎರಡು ಗುಬ್ಬಚ್ಚಿಗಳು.....?



'ಪಪ್ಪಾ,
ಗುಬ್ಬಿಗಳು ಅಂದ್ರೆ ಏನು?
ಹೇಗಿರುತ್ತವೆ?
ಪ್ರಬಂಧ ಬರೀಬೇಕಂತೆ.....'
ಸಂಜೆ ಎದುರಾದ ಮಗಳ ಪ್ರಶ್ನೆಗೆ
ಕಕ್ಕಾಬಿಕ್ಕಿಯಾಗಿ
ಏನು ಹೇಳಬೇಕೋ ತಿಳಿಯದೆ
ಇಂಟರ್ನೆಟ್‌ನಲ್ಲಿ ಗುಬ್ಬಿಗಳಿಗಾಗಿ ಹುಡುಕತೊಡಗಿದ......!

● ವಿ.ಹರಿನಾಥ ಬಾಬು ಸಿರುಗುಪ್ಪ

ಪ್ರಶಸ್ತಿಗೆ ಘನತೆ ತಂದ ಶಿಕ್ಷಕ ಡಾ.ರಾಜೇಂದ್ರ ಬುರಡಿಕಟ್ಟಿ

ಪ್ರಶಸ್ತಿ ಪುರಸ್ಕಾರಗಳ ಗೀಳು ಹತ್ತಿಸಿಕೊಂಡು, ರಾಜಕಾರಣಿಗಳ ಹಿಂದೆ ಗಿರಕಿ ಹೊಡೆಯುವವರಿಗೆ ನಮ್ಮಲ್ಲಿ ಕೊರತೆಯಿಲ್ಲ. ಆದರೆ ಅದಕ್ಕೆ ಭಿನ್ನವಾಗಿ ಕಾಯಾ ವಾಚಾ ಮನಸಾ ವೃತ್ತಿಯಲ್ಲಿ ತೊಡಗಿಸಿಕೊಂಡವರಿಗೆ ಪ್ರಶಸ್ತಿಗಳು ಬೆನ್ನುಹತ್ತಿ ಹೋದ ಉದಾಹರಣೆ ಇಂದಿನ ಕಾಲದಲ್ಲಿ ವಿರಳ. ಅಂಥಾ ವಿರಳ ಉದಾಹರಣೆಗಳಲ್ಲಿ ನಮ್ಮ ಲಂಕೇಶ್ ಬಳಗದ ಡಾ.ರಾಜೇಂದ್ರ ಬುರಡಿಕಟ್ಟಿಯವರ ಉದಾಹರಣೆಯೂ ಒಂದು. 2012ನೇ ಸಾಲಿನ 'ರಾಷ್ಟ್ರೀಯ ಉತ್ತಮ ಶಿಕ್ಷಕ' ಪ್ರಶಸ್ತಿ ಇವರ ಬೆನ್ನುಹತ್ತಿ ಬಂದಿದೆ.



ಮೂಲತಃ ಶಿಕಾರಿಪುರ ತಾಲ್ಲೂಕಿನ ಕಡೆನಂದಿಹಳ್ಳಿಯವರಾದ ರಾಜೇಂದ್ರ ತೀರ್ಥಹಳ್ಳಿ ತಾಲ್ಲೂಕಿನ ಸಾಲೇಕೊಪ್ಪ ಎಂಬ ಕುಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಶಿಕ್ಷಕರಾಗಿ ಬಂದು ಇಲ್ಲಿಗೆ 20 ವರ್ಷಗಳಾದವು. ಇವರು ಸರ್ಕಾರಿ ಸಂಬಳ ಪಡೆಯುವ ಶಿಕ್ಷಕರಾಗಿ ಮಾತ್ರ ಈ ಊರಿಗೆ ಬರಲಿಲ್ಲ; ಬದಲಿಗೆ ಈ ಗ್ರಾಮದ ಶಿಕ್ಷಣದ ಹೊಣೆಹೊತ್ತ ಗ್ರಾಮದ ಪ್ರಮುಖ ವ್ಯಕ್ತಿಯಾಗಿ ಸೇರ್ಪಡೆಯಾದರು. ಕ್ರಮೇಣ ಶಾಲೆಯ ಹಾಗೂ ಊರಿನ ಚಿತ್ರಣವನ್ನೇ ಬದಲಿಸಿದ್ದಾರೆ. ಅಂದಿನಿಂದಲೂ ಇದೇ ಊರಿನಲ್ಲಿ ನೆಲೆಸಿ ತಮ್ಮ ಅನುಬಂಧವನ್ನು ಶಾಲೆಯ ಪರಿಧಿಯಿಂದಾಚೆಗೆ ವ್ಯಾಪಕವಾಗಿ ವಿಸ್ತರಿಸಿದ್ದಾರೆ. ಒಂದು ಅರ್ಥದಲ್ಲಿ ಈ ಶಾಲೆ ಇಡೀ ಊರಿನ ಸಾಂಸ್ಕೃತಿಕ-ಸಾಮಾಜಿಕ ಕೇಂದ್ರವಾಗಿ ಪರಿವರ್ತನೆಯಾಗಿದೆ. ಈ ಶಾಲೆಯ ಮಕ್ಕಳಲ್ಲಿ ಕ್ರೀಡೆ, ಚಿತ್ರಕಲೆ ಮುಂತಾದ ಅಭಿರುಚಿಯನ್ನು ಪೋಷಿಸಿ ಬೆಳೆಸಿ, ಜಿಲ್ಲೆಗೆ ಮಾದರಿ ಶಾಲೆಯನ್ನಾಗಿ ರೂಪಿಸಿದ ಖ್ಯಾತಿ ರಾಜೇಂದ್ರ ಅವರದು. ಗ್ರಾಮಸ್ಥರೊಂದಿಗೆ ಸೇರಿ ಶಾಲೆಯ ಪರಿಸರದಲ್ಲಿ ನಿರ್ಮಿಸಿರುವ ಸುಂದರ ಉದ್ಯಾನವೇ ಅದಕ್ಕೆ ಸಾಕ್ಷಿ.

ರಾಜೇಂದ್ರ ಬರೀ ಶಾಲೆಗೆ ಮಾತ್ರ ಸೀಮಿತವಾದವರಲ್ಲ. ಅವರು ಬರಹವೊಂದರಲ್ಲಿ ತಮ್ಮನ್ನು ತಾವು ಪರಿಚಯಿಸಿಕೊಂಡಿದ್ದು ಹೀಗೆ: "ಸಾಹಿತ್ಯದ ಓದು ಮತ್ತು ಬರಹ ನನ್ನ ಪ್ರೀತಿಯ ಹವ್ಯಾಸ. ಸಾಹಿತ್ಯ ಸಂಸ್ಕೃತಿ ಕ್ಷೇತ್ರದ ಸಮಾನ ಮನಸ್ಕ ಮಿತ್ರರೊಂದಿಗೆ ಚರ್ಚೆ ಸಂವಾದ ಪ್ರೀತಿಯ ಚಟುವಟಿಕೆ. ಆಗಾಗ ಪತ್ರಿಕೆ, ನಿಯತಕಾಲಿಕೆಗಳಿಗೆ ಲೇಖನ ಕವನ ಬರೆಯುವುದು ಹವ್ಯಾಸ. ಜಾತಿ, ವರ್ಗ, ಲಿಂಗ, ಧರ್ಮ ಇತ್ಯಾದಿಗಳ ತರತಮಗಳಿಂದ ಮುಕ್ತವಾದ ಸಮಸಮಾಜ ನಿರ್ಮಾಣವಾಗಬೇಕು ಎಂಬುದು ನನ್ನ ಕನಸು." ರಾಜೇಂದ್ರ ಅವರ ವ್ಯಕ್ತಿತ್ವಕ್ಕೆ ಈ ಮಾತುಗಳು ಕನ್ನಡಿ ಹಿಡಿದಂತಿವೆ.

ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ರಾಜೇಂದ್ರ ಅವರು 'ಕಿಮ್ಮುಗಿಲು' ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ನಾಡಿನ ಹಲವಾರು ಪತ್ರಿಕೆಗಳಲ್ಲಿ ಇವರ ಕವನಗಳು, ಲೇಖನಗಳು ಪ್ರಕಟವಾಗಿವೆ. 2008-12ರ ಅವಧಿಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಇದೇ ಅವಧಿಯಲ್ಲಿ ಸಾಹಿತ್ಯ ಸಮ್ಮೇಳನವೊಂದನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ನಾನಾ ಸಾಹಿತ್ಯಕ, ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರ ತೊಡಗಿಸಿಕೊಳ್ಳುತ್ತಾ ಬಂದಿರುವ ರಾಜೇಂದ್ರ ಪ್ರಗತಿಪರ ಆಶಯಗಳನ್ನುಳ್ಳವರು.

ಆಗುಂಬೆಯಲ್ಲಿ ಇವರು ಸಂಘಟಿಸಿದ್ದ 'ಮಕ್ಕಳ ಸಾಹಿತ್ಯ ಸಮ್ಮೇಳನ' ತೀರಾ ವಿಶಿಷ್ಟವಾದುದು. ಈ ಸಮ್ಮೇಳನದ ಗೋಷ್ಠಿಗಳನ್ನು ಸಂಪೂರ್ಣವಾಗಿ ಮಕ್ಕಳೇ ನಿರ್ವಹಿಸಿದ್ದರು ಎಂದರೆ ಆಶ್ಚರ್ಯವೆನಿಸುತ್ತದೆ. ರಾಜೇಂದ್ರ ಅವರು ಸಮಾನ ಮನಸ್ಕರೊಂದಿಗೆ ಕೂಡಿ ಇಡೀ ತಾಲ್ಲೂಕಿನ ಎಲ್ಲಾ ಶಾಲೆಯ ಮಕ್ಕಳನ್ನು ಸಂಘಟಿಸಿ ಇಂಥಾ ಸಮ್ಮೇಳನದ ರೂವಾರಿಯಾಗಿದ್ದರು.

'ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ ಯುಗಧರ್ಮದ ಪ್ರತಿಪಾದನೆ' ಎಂಬ ಪ್ರೌಢ ಪ್ರಬಂಧಕ್ಕೆ ಹಂಪಿ ವಿವಿಯಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಜಿಲ್ಲಾಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ 'ಉತ್ತಮ ಶಿಕ್ಷಕ ಪ್ರಶಸ್ತಿ', 'ಜನಮೆಚ್ಚಿದ ಶಿಕ್ಷಕ ಪ್ರಶಸ್ತಿ' ಪಡೆದಿದ್ದಾರೆ. ಹಲವಾರು ಸಂಘ-ಸಂಸ್ಥೆಗಳು ಅನೇಕ ಬಾರಿ ಅಭಿನಂದನಾ ಸಮಾರಂಭ ನಡೆಸಿ ಸನ್ಮಾನಿಸಿವೆ.


ಇವರೇ ಅನುವಾದ ಮಾಡಿರುವ ಎಚ್.ಎಲ್.ನೇರಿಯವರ ಇಂಗ್ಲಿಷ್ ಕವನದ ಈ ಸಾಲುಗಳನ್ನು ನೋಡಿ.

"ನಿನ್ನ ಕೆಲಸವ ನೀನು ಇಷ್ಟಪಟ್ಟರೆ
ಆಗ ಕೆಲಸಕ್ಕಾಗಿಯೇ ಹೆಚ್ಚು ಕೆಲಸವಿಲ್ಲ
ನಡೆಯುತಿರೆ ಕೆಲಸವದು ನಿನ್ನಿಷ್ಟದಲಿ
ಆ ಕೆಲಸ ಕೆಲಸವೇ ಅಲ್ಲವಲ್ಲ!
ಅದು ಬರಿಯ ಆನಂದ ಆಟವೆಲ್ಲ!!"

ಕಾಯಕವೇ ಕೈಲಾಸವೆಂಬ ತತ್ವವನ್ನು ಜೀವನದ ಹಾದಿಯಾಗಿಸಿಕೊಂಡಿರುವ ಇವರಿಗೆ ರಾಷ್ಟ್ರ ಪ್ರಶಸ್ತಿ ಲಭಿಸಿರುವುದನ್ನು ಕಂಡು ತೀರ್ಥಹಳ್ಳಿಯ ಗ್ರಾಮೀಣ ಜನರಿಗೂ, ಇವರ ವಿದ್ಯಾರ್ಥಿವೃಂದಕ್ಕೂ, ಇವರ ಗೆಳೆಯರ ಬಳಗಕ್ಕೂ ಸಂತಸ ತಂದಿದೆ. ಈ ಸಂದರ್ಭದಲ್ಲಿ ಮಿತ್ರ ರಾಜೇಂದ್ರ ಬುರಡಿಕಟ್ಟಿಯವರಿಗೆ ತುಂಬು ಹೃದಯದ ಅಭಿನಂದನೆಗಳು.

● ಲಂಕೇಶ್ ಬಳಗ

ಅಪ್ಪಾ, ಅಪ್ಪಾ ನಂಗೇ ನೀನೂ ಬೇಕಪ



ಮಕ್ಕಳ ಮೇಲಿನ ದೌರ್ಜನ್ಯ ಎಂದಕೂಡಲೆ ನಮ್ಮ ತಲೆಯಲ್ಲಿ ಬರುವುದು ಮನೆಕೆಲಸ ಇಲ್ಲ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಕ್ಕಳ ಮೇಲೆ ಮಾಲೀಕರು ಎಸಗುವ ಅನ್ಯಾಯ, ಕೆಲವು ವಿಕೃತ ಮನಸ್ಸಿನ ವ್ಯಕ್ತಿಗಳು ಮುಗ್ಧ ಮಕ್ಕಳ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯ ಮುಂತಾದವು. ಆದರೆ ಅತ್ಯಂತ ಸೂಕ್ಷ್ಮವಾಗಿ, ಪರೋಕ್ಷವಾಗಿ, ಕೆಲವೊಮ್ಮೆ ತಂದೆತಾಯಿಗಳೇ ತಮ್ಮ ಮಕ್ಕಳ ಮೇಲೆ ಎಸಗುವ ದೌರ್ಜನ್ಯ ಯಾರ ಗಮನಕ್ಕೂ ಬರುವುದೇ ಇಲ್ಲ.

ಗಂಡಹೆಂಡತಿ ಅದ್ಯಾವ ಕಾರಣಕ್ಕೆ ವಿಚ್ಛೇದನ ಪಡೆಯಲು ಕೋರ್ಟಿನ ಮೆಟ್ಟಲು ಏರಿದರು ಎಂಬುದಿಲ್ಲಿ ಅಪ್ರಸ್ತುತ. ಆದರೆ ಏರಿದ ಮೇಲೆ ತಮ್ಮ ಸ್ವಾರ್ಥ ಸಾಧನೆಗಾಗಿ ಮಕ್ಕಳನ್ನು ದಾಳಗಳಂತೆ ಬಳಸುವುದು, ಆ ಮೂಲಕ ತನ್ನ ಎದುರಿನವರನ್ನು ಬಗ್ಗಿಸಲು ಪ್ರಯತ್ನಿಸುವುದು ಇವೆಲ್ಲವೂ ಕೂಡ ಮಕ್ಕಳ ಮೇಲಿನ ದೌರ್ಜನ್ಯದ ಉದಾಹರಣೆಗಳೇ ಆಗಿವೆ.

ಕಳೆದ ಸಂಚಿಕೆಯಲ್ಲಿ ಬರೆದಿದ್ದ ಕುಮಾರ್ ಜಹಾಗೀರ್‌ದಾರ್ ಅವರ ಪ್ರಯತ್ನದಿಂದ ಪ್ರಾರಂಭವಾದ CRISP; ಇಂತಹ ಮಕ್ಕಳ ಮೇಲೆ ಆಗುತ್ತಿರುವ ಮಾನಸಿಕ ಆಘಾತ ಹಾಗೂ ಅವರ ಬಾಲ್ಯದ ರಕ್ಷಣೆಯನ್ನು ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಎಷ್ಟೇ ಆದರೂ ಸರಕಾರೇತರ ಸಂಘಟನೆಗಳ ಕಾರ್ಯಕ್ಷೇತ್ರ ಸೀಮಿತವಾಗಿರುತ್ತದೆ. ಅದರ ಕೆಲಸ, ಪ್ರಯತ್ನಗಳು ಏನಿದ್ದರೂ ಸಮೀಕ್ಷೆಗಳನ್ನು ನಡೆಸುವುದು, ವರದಿ ತಯಾರಿಸುವುದು; ಸರ್ಕಾರಕ್ಕೆ ಸಲ್ಲಿಸಿ ಅವುಗಳನ್ನು ಬಳಸಿಕೊಂಡು ಪರಿಣಾಮಕಾರಿ ಪ್ರಯತ್ನಗಳನ್ನು ಕೈಗೊಳ್ಳುವಂತೆ ಮನವಿ ಮಾಡಿಕೊಳ್ಳುವುದು.


ಮಕ್ಕಳ ಈ ಎಳೆವಯಸ್ಸಿನಲ್ಲಿ ಅವರ ಇಚ್ಛೆ, ಇಷ್ಟಾನಿಷ್ಟಗಳನ್ನು ಕಡೆಗಣಿಸಿ ಕೈಗೊಳ್ಳುವ ನಿರ್ಧಾರಗಳು ಅವರ ಮನೋವಿಕಾಸದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರಿ ಸಮಾಜದಲ್ಲಿ ಅವರ ವ್ಯಕ್ತಿತ್ವದ ಬೆಳವಣಿಗೆಯನ್ನೇ ಕುಂಠಿತಗೊಳಿಸುತ್ತವೆ. ಮನಃಶಾಸ್ತ್ರಜ್ಞರ ಅಧ್ಯಯನಗಳ ಪ್ರಕಾರ ತಂದೆ ಅಥವಾ ತಾಯಿಯಿಂದ ದೂರಾಗಿ ಕೇವಲ ಒಬ್ಬರ ಜೊತೆಗೆ ಬದುಕಬೇಕಾಗಿ ಬಂದಂತಹ ಮಕ್ಕಳು 'PAS' (Parental Alienation Syndrome) ಗೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಅಂದರೆ ಒಬ್ಬ ಪೋಷಕರಿಂದ ದೂರಾಗಿ ಬದುಕಬೇಕಾದ ಅನಿವಾರ್ಯತೆಯಿಂದ ಬರುವ ಖಿನ್ನತೆ ಎನ್ನಬಹುದು. ಜಗತ್ತಿನಾದ್ಯಂತ ಅನೇಕ ಸಂಘಸಂಸ್ಥೆಗಳು ಸಮೀಕ್ಷೆ ನಡೆಸಿ, ಸಾವಿರಾರು ಇಂತಹ ಮಕ್ಕಳನ್ನು ಸಂದರ್ಶಿಸಿ, ತಯಾರಿಸಿದ ವರದಿಯ ಪ್ರಕಾರ, ಸಾಮಾನ್ಯ ಮಕ್ಕಳಿಗಿಂತ ತಂದೆತಾಯಿಂದ ದೂರಾಗಿ ಬದುಕುತ್ತಿರುವ ಮಕ್ಕಳು ಅಪರಾಧಿಗಳಾಗಿ ಬದಲಾಗುವುದು ಸಾಮಾನ್ಯ. ವರದಿಗಳ ಪ್ರಕಾರ ಅಂತಹ ಮಕ್ಕಳು ಸಾಮಾನ್ಯ ಮಕ್ಕಳಿಗಿಂತ

* ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆಗಳು 5 ಪಟ್ಟು ಹೆಚ್ಚು,
* ಹೈಸ್ಕೂಲಿನಿಂದಲೇ ವಿದ್ಯಾಭ್ಯಾಸ ಕುಂಠಿತಗೊಳಿಸುವವರ 9 ಪಟ್ಟು.
* ಬಲಾತ್ಕಾರ ಎಸಗುವ ಸಾಧ್ಯತೆಗಳು 14 ಪಟ್ಟು ಹೆಚ್ಚು,
* ಮಾದಕ ವ್ಯಸನಿ ಆಗುವ ಸಾಧ್ಯತೆಗಳು 20 ಪಟ್ಟು ಹೆಚ್ಚು,
* ಮನೆ ಬಿಟ್ಟು ಓಡಿಹೋಗುವ ಸಾಧ್ಯತೆಗಳು 32 ಪಟ್ಟು ಹೆಚ್ಚು,

ಇಂತಹ ಒಂದು ಸನ್ನಿವೇಶ ಕೈಮೀರಿ ಹೋಗದಂತೆ ಕೆಲವು ಸಂದರ್ಭದಲ್ಲಿ ತಡೆಯಬಹುದಾದರೂ ಅದಕ್ಕೆ ಪೂರಕ ವಾತಾವರಣ ನಿರ್ಮಿಸುವಲ್ಲಿ ಸರ್ಕಾರ ಹಾಗೂ ನ್ಯಾಯಾಂಗ ವಿಫಲವಾಗಿವೆ.


ಕಾನೂನುಗಳು ಕೂಡ ಬಹುತೇಕ ಸಂದರ್ಭದಲ್ಲಿ ಏಕಪಕ್ಷೀಯವಾದ ಧೋರಣೆಗಳನ್ನು ತಳೆಯುತ್ತವೆ. ಜೊತೆಗೆ ಇಂತಹ ಸೂಕ್ಷ್ಮ ವಿಚಾರಗಳನ್ನು ಕೈಗೆತ್ತಿಕೊಂಡಾಗ ನ್ಯಾಯಾಂಗವೂ ಕೂಡ ಬಹುತೇಕ ಸಂದರ್ಭಗಳಲ್ಲಿ ಗಂಡಸರ ಪ್ರತಿ ಪರಕೀಯ ಧೋರಣೆಯನ್ನು ತಳೆಯುತ್ತವೆ.

CRISP ನಡೆಸಿದ ಸಮೀಕ್ಷೆ ಹಾಗೂ ಇತರ ಸಂಘಗಳ ವರದಿ ಪ್ರಕಾರ 98% ಕೇಸುಗಳಲ್ಲಿ ತಂದೆಗೆ ಕೇವಲ ಮಗುವಿನ ಭೇಟಿಗೆ ಅವಕಾಶ ನೀಡಲಾಗಿದೆ. ಇದೊಂದು ಬಹಳೇ ವಿಚಿತ್ರ ಸನ್ನಿವೇಶ. ಗಂಡಹೆಂಡತಿ ಇಬ್ಬರಲ್ಲಿ ಹೆಂಡತಿ, ಮಗುವಿನ ಆರೈಕೆ ಪಾಲನೆ ಪೋಷಣೆಯನ್ನು ಹೆಚ್ಚು ಜವಾಬ್ದಾರಿಯುತವಾಗಿ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಲ್ಲಳು ಎಂಬುದು ಬಹುತೇಕ ಸಂದರ್ಭಗಳಲ್ಲಿ ಸರಿ ಆದರೂ ಎಲ್ಲಾ ಗಂಡಸರನ್ನು ದುಷ್ಟ ತಂದೆಗಳು ಎಂದು ಹೇಳುವುದು ಕೇವಲ ಮಗುವಿನ ಮೇಲಷ್ಟೇ ಅಲ್ಲ ತಂದೆಯ ಮೇಲೂ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತದೆ. ಕೋರ್ಟಿನ ಹೊಸ್ತಿಲು ತುಳಿಯುವವರೆಗೂ ಹೆಂಡತಿಗೆ ಸಮನಾಗಿ ಮಗುವಿನ ಆರೈಕೆ ಮಾಡಿದ,



ಪ್ರೀತಿ ಹರಿಸಿದ ತಂದೆ ಕೋರ್ಟಿಗೆ ಹೋದ ತಕ್ಷಣ ಮಗುವಿನ ಶತ್ರು ಎಂದು ಬಿಂಬಿಸುವುದು ಕ್ರೂರತೆಯ ಪರಾಕಾಷ್ಠೆ. ಇಂತಹ ಒಂದು ಹಣೆಪಟ್ಟಿಯಿಂದ ಮಗು ಎಷ್ಟು ಮಾನಸಿಕವಾಗಿ ಘಾಸಿಗೊಳ್ಳುತ್ತದೋ ತಂದೆಯೂ ಅದೇರೀತಿ ನೊಂದುಕೊಳ್ಳುತ್ತಾನೆ. ಒಡೆದ ಕುಟುಂಬ, ಮಗುವಿನಿಂದ ದೂರ, ವರದಕ್ಷಿಣೆ ಮುಂತಾದ ಕೇಸುಗಳಿಂದ ನೊಂದು ಕುಗ್ಗಿಹೋದ ಗಂಡಸರು ಅದೆಷ್ಟೋ ಸಂದರ್ಭಗಳಲ್ಲಿ ಆತ್ಮಹತ್ಯೆಯಂತಹ ಗಂಭೀರ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ.

ಭಾರತದ ಗೃಹ ಸಚಿವಾಲಯ 2011ರಲ್ಲಿ ಬಿಡುಗಡೆಗೊಳಿಸಿದ ಆತ್ಮಹತ್ಯೆಯ ಅನೇಕ ಕಾರಣಗಳ ಶೇಕಡಾವಾರು ನಕ್ಷೆ ಈ ಮೇಲೆ ಹೇಳಿದ ವಿವರಣೆಯನ್ನು ಸಮರ್ಥಿಸುತ್ತದೆ.



ಭಾರತದ ಸಂವಿಧಾನ 'ಮಕ್ಕಳ ಬಾಲ್ಯ ಹಾಳಾಗದ ಹಾಗೆ ದೇಶದ ಈ ಕಾನೂನುಗಳನ್ನು ರಚಿಸಬೇಕು' ಎಂದು ಒತ್ತು ನೀಡುತ್ತದೆ. ವಿಪರ್ಯಾಸವೆಂದರೆ ದೇಶದ ಕಾನೂನು ವ್ಯವಸ್ಥೆ ಎಷ್ಟು ಸಕ್ಷಮವಾಗಿದೆ ಎಂದರೆ ಬೀದಿ ಮಕ್ಕಳ ರಕ್ಷಣೆಗೂ ಸೂಕ್ತ ಕಾನೂನುಗಳ ರಚನೆ ಮಾಡಿದೆ. ಆದರೆ ದೇಶದ ಎಲ್ಲ ವಿಭಾಗ, ಜನ ಸಂಘಸಂಸ್ಥೆಗಳು ಮುಂತಾದ ಕಡೆ ಮನೆ ಮಾಡಿರುವ ಪೂರ್ವಾಗ್ರಹಗಳಿಗೆ ಬಲಿಯಾಗಿ ಮಕ್ಕಳ ಪ್ರತಿ ನಿಜವಾದ ಕಾಳಜಿ ಹೊಂದಿರುವ ತಂದೆಯರು ಕೂಡ ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ. 15 ದಿನ ಇಲ್ಲ ತಿಂಗಳಿಗೊಮ್ಮೆ ಒಂದು ಗಂಟೆ ಮಗುವಿನೊಂದಿಗೆ ಸಮಯ ಕಳೆಯಲು ಅವಕಾಶ ನೀಡಿದರೆ ಅಂತಹ ಭೇಟಿಯಲ್ಲಿ ಯಾವ ಅರ್ಥಪೂರ್ಣ ಸಂಬಂಧವನ್ನು ಹೊಂದಲು ಸಾಧ್ಯ? ಈಗಾಗಲೇ ಹೇಳಿರುವ ಕಥೆಗಳಲ್ಲಿ ದಲ್‌ಜೀತ್‌ನ ಹೆಂಡತಿ, ಪ್ರಸಾದ್‌ನ ಹೆಂಡತಿ ಇನ್ನೂ ಇಂತಹ ಅನೇಕ ತಾಯಂದಿರು ಮಕ್ಕಳನ್ನು ತಮ್ಮ ಹಿತಾಸಕ್ತಿ ಕಾಪಾಡುವ ಅಸ್ತ್ರದಂತೆ ಬಳಸುವಾಗ, ಮುಂದೆ ಆ ಮಕ್ಕಳು ಮಾನಸಿಕ ಖಿನ್ನತೆ, ಇಲ್ಲ ದುರ್ವ್ಯಸನಕ್ಕೆ ಒಳಗಾಗಿ ನಿಜವಾದ ಅರ್ಥದಲ್ಲಿ ತಮಗೆ ಆಸರೆ ಬೇಕಾದಾಗ ಅದನ್ನು ನೀಡಲು ಸಮರ್ಥರಾಗಿರುತ್ತಾರೋ ಹೇಗೆ ಎಂಬ ಬಗ್ಗೆ ವಿಚಾರಿಸಬೇಕು.

ಬಗೆಬಗೆಯ ಮನಸ್ಥಿತಿಗಳ ನಡುವೆ ಕಾರ್ಯನಿರ್ವಹಿಸುತ್ತಿರುವ CRISP ಹಾಗೂ ಅದರ ಸಂಚಾಲಕರಾದ ಕುಮಾರ್ ಜಹಾಗೀರ್‌ದಾರ್ ಅವರ ಪ್ರಯತ್ನವನ್ನು ಮೆಚ್ಚಲೇಬೇಕು. 2010-11ರಲ್ಲಿ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಮದುವೆಗಳು ಮುರಿದು ಬೀಳುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳು ಹಾಗೂ ಕಲ್ಯಾಣ ಮತ್ತು ಹೆಣ್ಣು ಭ್ರೂಣ ಹತ್ಯೆಯ ಕುರಿತು ತನ್ನ ಸಮೀಕ್ಷೆಯ ವರದಿಯನ್ನು ವಿವರಿಸಲು ಭಾರತದ ಸಂಸತ್ತು CRISP ಅನ್ನು ಆಹ್ವಾನಿಸಿತ್ತು. ಇದೇರೀತಿ ಹೊಸ ಬಗೆಯಲ್ಲಿ ಯೋಚಿಸುತ್ತಿರುವ ಹಾಗೂ ಆ ವಿ... ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಸಂಘಟನೆಗಳು ಒಟ್ಟಾರೆಯಾಗಿ ಪ್ರಯತ್ನ... ಕಾನೂನಿನ ದುರುಪಯೋಗ ಹಾಗೂ ಮಕ್ಕಳ ಬಾಲ್ಯದ ಹರಣ ಮಾಡುತ್ತಿರು... ವಿರುದ್ಧ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು. ಇಲ್ಲದಿದ್ದರೆ ವ... ಹೇಳುವ ಆಶಾಳ ಕೈಯಲ್ಲಿ ಸಿಕ್ಕು ಸಚಿನ್ ಅನುಭವಿಸಿದ ಪಾಡು ... ಗಂಡಸರಿಗೆ ಬರುವುದು ಖಂಡಿತ.


ಆಶಾ ತಂದೆತಾಯಿಗೆ ಒಬ್ಬಳೇ ಮಗಳು. ಬೆಂಗಳೂರಿನಲ್ಲೇ ... ಬೆಳೆದ ಅವಳಿಗೆ ಬೆಂಗಳೂರೇ ಜಗತ್ತು, ಡಿಗ್ರಿ ಮುಗಿದರೂ ಅಷ್ಟ... ವ್ಯವಹಾರಜ್ಞಾನ ಇಲ್ಲದ ಅವಳಿಗೆ ಟಿವಿಯಲ್ಲಿ ಬರುವ ಅತ್ತೆ ಸೊಸೆಯ... ಧಾರಾವಾಹಿಗಳೇ ಜೀವನದ ಮಾರ್ಗದರ್ಶಕರು. ನೋಡಲು ಬಹಳ ಮು... ಅವಳು ಅತ್ಯಂತ ಸಮಾಧಾನದ ಹುಡುಗಿಯಂತೆ ಕಾಣುತ್ತಿದ್ದಳು.

ಮಧ್ಯವರ್ತಿಯೊಬ್ಬರ ಮೂಲಕ ಸಚಿನ್ ಅವಳನ್ನು ನೋಡಲು ಬ... ಅವಳ ಮುಖ ನೋಡಿ ಬಿದ್ದುಹೋದ. ಉತ್ತರ ಕರ್ನಾಟಕದವನಾದ ... ಅವಳ ಮಾತಾಡುವ ಶೈಲಿಗೆ ಮನಸೋತ. ಅವನ ತಂದೆ ಹುಡುಗಿ... ವರದಕ್ಷಿಣೆ ನಿರೀಕ್ಷೆ ಮಾಡಿದ್ದರು. ಅದನ್ನು ಧಿಕ್ಕರಿಸಿ ಮದುವೆ ಆದರೆ ಅ... ಆಗುವುದು ಎಂದು ಖಂಡಿತವಾಗಿ ಹೇಳಿ ಒಪ್ಪಿಸಿ ಮದುವೆ ಆದ. ಸಾಫ್ಟ್... ಕಂಪನಿಯಲ್ಲಿ ಒಳ್ಳೆ ಹುದ್ದೆಯಲ್ಲಿದ್ದ ಆತ ಕೆಲಸದ ನಿಮಿತ್ತ 4-5 ತಿ... ವಿದೇಶಕ್ಕೆ ಹೋಗುವುದು, ಬಂದಾಗ ತನ್ನ ತಂದೆತಾಯಿಯ ಪಾಲಿಗೆ ಅ... ಖರ್ಚು ಎನಿಸಿದರೂ ಆಶಾಳನ್ನು ತನ್ನ ಜೊತೆ ಕರೆದುಕೊಂಡು ಹ... ಆಶಾ ನೋಡಲು ಎಷ್ಟು ಸೌಮ್ಯವಾಗಿ ಕಾಣುತ್ತಾಳೋ ಅಷ್ಟೇ ಹಠ... ಎಂಬುದು ಬಹು ಬೇಗ ಅವನ ಅರಿವಿಗೆ ಬಂತು. ಮನೆಯಲ್ಲಿ ಎಲ್ಲದ... ಅವಳು ಹೇಳಿದ ಹಾಗೆಯೇ ನಡೆಯಬೇಕು. ಇರುವುದು ಇಬ್ಬರೇ ಅ... ಊರಿಂದ ಅತ್ತೆ ಮಾವ ಬಂದಾಗ ಸ್ವಲ್ಪವೇ ಕೆಲಸ ಹೆಚ್ಚಾದರೂ ಸಿ... ಮಾಡುತ್ತಿದ್ದಳು. ಬಹುಶಃ ಒಬ್ಬಳೇ ಮಗಳಾದ್ದರಿಂದ ಸ್ವಲ್ಪ ಹಠ ... ಇರಬಹುದು ಎಂದು ಸಚಿನ್ ಸುಮ್ಮನಾದ. ಆದರೆ ದಿನೇದಿನೇ ... ಜಗಳಗಳು ಹೆಚ್ಚಾದವು. ಸಚಿನ್ ಉತ್ತರ ಕರ್ನಾಟಕದವನಾದ್ದರಿಂದ ... ಭಾಷೆ ಸ್ವಲ್ಪ 'ಒರಟಾ'ಗಿತ್ತು, ಉಳಿದ ಸಮಯ ಸಾಮಾನ್ಯವಾಗಿ ಮಾತಾಡಿ... ಕೆಲವೊಮ್ಮೆ ಸಲುಗೆಯಿಂದ 'ಬಾರಲೇ, ಹೋಗಲೇ' ಅಂತ ಕರೆದರೆ ... ನೀವು ಬಾರಲೇ ಅನ್ನುವುದು? ಜನರ ಎದುರು ನಿಮ್ಮನ್ನು 'ಲೇ' ... ಕರೀಲಾ. ನನಗೇನು ಮರ್ಯಾದೆ ಇಲ್ಲವಾ" ಅಂತ ಜಗಳ ತೆಗೆಯುತ್ತಿ... "ಇಲ್ಲಮ್ಮಾ ಅದು ಅಷ್ಟು ಸೀರಿಯಸ್ ಅಲ್ಲ ನಮ್ಮ ಕಡೆ ಬಹಳ ಸಾಮಾ... ಹಾಗೆ ಮಾತಾಡುತ್ತಾರೆ" ಎಂದರೆ "ನಿಮ್ಮ ಮಾತು ನಿಮ್ಮ ಮನೇಲಿ ಇ... ನನ್ನ ಎದುರು ಬೇಡ" ಎಂದು ಹೇಳಿದಳು. ಇಂತಹುದೇ ಸಣ್ಣಸಣ್ಣ ಕಾರ... ದಿನಾ ಜಗಳಗಳಾಗಲು ಶುರುವಾದವು. ಅಷ್ಟರಲ್ಲಿ ಅವಳು ಗರ್ಭಿಣಿ... ಆಗಿ ಹೆಣ್ಣು ಮಗು ಆದಾಗ ಬಹುಶಃ ಅವಳು ಸ್ವಲ್ಪ ಮೆತ್ತಗಾಗಬ... ಎಂದುಕೊಂಡ ಅವನ ನಂಬಿಕೆ ಹುಸಿ ಆಯಿತು. ತನ್ನ ತವರುಮನೆ ಪ... ಇದ್ದುದರಿಂದ ಇಡೀ ದಿನ ಮಗುವಿನೊಂದಿಗೆ ಅಲ್ಲಿಯೇ ಸಮಯ ಕಳೆಯು... ತಾನು ಅಲ್ಲಿಯೇ ಊಟ ಮಾಡಿಬರುವುದು, ರಾತ್ರಿ ಬಂದ ಸಚಿನ್‌ಗೆ "ತ... ಆಯಾಸ ಆಗಿದೆ. ಮ್ಯಾಗಿ ಮಾಡ್ಲಾ, ಓಟ್ಸ್ ಮಾಡ್ಲಾ" ಎಂದು ಕೇಳು... ಕೊನೆಗವನು ಬೇಸರಗೊಂಡು "ಬೆಳಗ್ಗೆಯಿಂದ ಸರಿಯಾಗಿ ಊಟ ... ಅಡುಗೆ ಮಾಡಬಾರದಾ" ಎಂದರೆ "ನನ್ನನ್ನೇನು ಕೆಲಸದವಳು ಅಂದ... ಮಗು ಜೊತೆ ನಿಭಾಯಿಸುವುದು ಎಷ್ಟು ಕಷ್ಟ ಅಂತ ನಿಮಗೇನು ಗ... ಎಂದು ಕಿರುಚಾಡುತ್ತಿದ್ದಳು. ಬರಬರುತ್ತ ಅವಳ ತಂದೆತಾಯಿ ಕೂಡ ... ಜೊತೆ ಸೇರಿ ಸಚಿನ್ ಜೊತೆ ಅನವಶ್ಯಕ ಚರ್ಚೆ ಮಾಡತೊಡಗಿದರು.

ಆಶಾಳ ತಂದೆಯಂತೂ "ನೋಡಿ ಚೆನ್ನಾಗಿ ವಿಚಾರ ಮಾಡಿ ... ಖರ್ಚು ಮಾಡಿ. ನಾಳೆ ಏನಾದ್ರೂ ನಮ್ಮ ಮಗಳಿಗೆ ಕಷ್ಟ ಕಾಲ ... ದುಡ್ಡು ಕೊಡಬೇಕಲ್ಲಾ" ಎಂದು ಹೇಳಿ ಅವನಿಗೆ ನಡುಕ ಹುಟ್ಟಿಸಿದ...


ಈ ವಿಷಯವಾಗಿ ಸಚಿನ್ ತಂದೆತಾಯಿ ಅವಳಿಗೆ ಬುದ್ಧಿ ಹ... ಬಂದಾಗ, "ಎಲ್ಲರೂ ಸೇರಿ ನನ್ನನ್ನು ಹೆದರಿಸಿದರು" ಎಂದು ಜೋ... ಅಳುತ್ತ ಮನೆಯ ಕಾಂಪೌಂಡ್ ಹೊರಗೆ ನಿಂತು ಅತ್ತು ರಂಪಾಟ ... ನೆರೆಹೊರೆಯವರೆಲ್ಲ ಸಚಿನ್‌ನನ್ನು ಕ್ರೂರವಾಗಿ ನೋಡುವಂತೆ ಮಾ... ಸ್ವಲ್ಪ ಸಮಯ ಕಳೆಯುವಷ್ಟರಲ್ಲಿ ಡೈವೋರ್ಸ್ ಪಡೆಯುವ ನಿರ್ಧಾರ ಮಾ...

ಆದರೆ ಸಚಿನ್‌ಗೆ ಬುದ್ಧಿ ಕಲಿಸಬೇಕು ಎಂಬ ಅವಳ ಉತ್ಸಾಹಕ್ಕೆ ... ಅಷ್ಟೊಂದು ಮಹತ್ವ ಕೊಡದೆ ಇದ್ದಾಗ ಸ್ಟೇಷನ್‌ನಲ್ಲಿ ಅವನ ... 498ಎ ಕಂಪ್ಲೇಂಟ್ ಈಗಾಗಲೇ ಕೊಟ್ಟಿರುವ ಬಗ್ಗೆ ಹೇಳಿದಳು. "ನ... ಆಶಾ. ನಿನ್ನ ಮಗು ಇನ್ನೂ ಬಹಳ ಚಿಕ್ಕದು. ನೀನೂ ಇನ್ನೂ ಜೀವನ ... ನೋಡಬೇಕು. ಅವಸರ ಮಾಡಬೇಡ. ಬರೀ ಭಾಷೆ ಒರಟು, ಜೀವ... ಒರಟು ಅಂತ ಡೈವೋರ್ಸ್ ತಗೊಂಡರೆ ಹೇಗೆ. ಕೆಲವೊಮ್ಮೆ ಭ... ಬಗ್ಗೆ ಬಹಳ ವಿಚಾರ ಮಾಡಿ ನಿರ್ಧಾರ ತಗೋಬೇಕು" ಎಂದಾಗ, "ವಿಚಾರಿ... ಮೇಡಂ. ನನ್ನ ಫ್ರೆಂಡ್ ಕೂಡಾ ಡೈವೋರ್ಸ್ ತಗೊಂಡಿದ್ದಾಳೆ. ಮತ್ತೊಂದು ಮದುವೆ ಆಯ್ತು ಆರಾಮವಾಗಿದ್ದಾಳೆ! ಏನೂ ಪ್ರಾಬ್ಲಂ ... ಅಂತ ಹೇಳಿದಳು. "ಯಾಕೆ ಇವನ ಜೊತೆ ಕಷ್ಟ ಪಡಬೇಕು, ಡೈವೋ... ತಗೊಂಡು ಅಲಿಮನಿ ತಗೊಂಡು ಆರಾಮವಾಗಿ ಇರ್ತೀನಿ" ಎಂದಾಗ... ಅಪ್ರಬುದ್ಧತೆಯ ಬಗ್ಗೆ ಮರುಕ ಬಂತು. ಜೊತೆಗೇ ಅವಳ ಮಾತಿ... ಎಂದು ತಲೆದೂಗುತ್ತಿದ್ದ ಅವಳ ತಂದೆಯ ಬುದ್ಧಿಯ ಬಗ್ಗೆಯೂ ... ಬಂತು. "ಮಗೂನ್ನ ಮಾತ್ರ ಅವನ ಮುಖ ತೋರಿಸೋಕೆ ಬಿಡಲ್ಲ ಮೇಡಂ. ಅನ್‌ಕಲ್ಚರ್ಡ್ ಪೀಪಲ್ ಅವರು. ಕೆಸ್ಟಡಿ ಮಾತ್ರ ಅಲ್ಲ ಅವನಿಗೆ ವಿಸಿಟೇಶನ್ ರೈಟ್ಸ್ ಕೂಡ ಸಿಗಬಾರದು" ಎಂದು ಅವಳು ಹೇಳುವಾಗ ಅದರಲ್ಲಿ ಸಿಟ್ಟು, ದ್ವೇಷ ಏನೂ ಇರಲಿಲ್ಲ, ಕೇವಲ ಜಿದ್ದು ತುಂಬಿತ್ತು.




● ರಾಜಲಕ್ಷ್ಮೀ ಅಂಕಲಗಿ

ಶಾಶ್ವತ ಶಂಕಿತರು



ಪುಸ್ತಕ ವಿಮರ್ಶೆ



→ಜಿ.ರಾಜಶೇಖರ್

'ಶಾಶ್ವತ ಶಂಕಿತರು' - ಇಂಗ್ಲಿಷ್ ಮೂಲದ **Permanent Suspects, ...ming Muslim youth in Karnataka** ಎಂಬ ಸತ್ಯಶೋಧನಾ ...ಯ ಕನ್ನಡ ಅನುವಾದ. ಮಾನವಹಕ್ಕು ಸಂಘಟನೆಗಳಾದ ...ಚ್‌ಆರ್‌ಓ, ಪಿಡಿಎಫ್ ಮತ್ತು ಪಿಯುಸಿಎಲ್ ಜಂಟಿಯಾಗಿ ಈ ...ಯನ್ನು ಪ್ರಾಯೋಜಿಸಿವೆ. ವರದಿಯನ್ನು ಸಿದ್ಧಪಡಿಸಿದ ಸಮಿತಿಯಲ್ಲಿ ...ಹಕ್ಕು ಕಾರ್ಯಕರ್ತರಾದ ರಾಮದಾಸ ರಾವ್, ನಗರಗೆರೆ ರಮೇಶ್, ...ಶ್ರೀಧರ, ಮುಹಮ್ಮದ್ ಕಕ್ಕಿಂಜೆ, ಪತ್ರಕರ್ತ ಶಬೀರ್.ಕೆ, ರಂಗಕರ್ಮಿ ...ಂದನ್ ಹಾಗೂ ಕೇರಳದ ಎನ್.ಎಂ.ಸಿದ್ದೀಖ್ ಸದಸ್ಯರಾಗಿದ್ದರು. ವರದಿಯ ...ದಲ್ಲೇ, ಸಮಿತಿ, ತನ್ನ ಈ ಸತ್ಯಶೋಧನೆ ಯಾಕಾಗಿ ಎಂಬುದನ್ನು ...ಡಿಸುತ್ತದೆ. "ಬಂಧಿತ ಮುಸ್ಲಿಮ್ ಯುವಕರು ಅಪರಾಧಿಗಳೋ ...ಧಿಗಳೋ ಎಂದು ತೀರ್ಮಾನಿಸುವುದು ನಮ್ಮ ಉದ್ದೇಶವಾಗಿರಲಿಲ್ಲ. ...ತೀರ್ಮಾನವನ್ನು ಸರಿಯಾಗಿ ರಚಿಸಲ್ಪಟ್ಟ ನ್ಯಾಯಾಲಯದಿಂದ ನಡೆಯುವ ...ಪಾತದ ವಿಚಾರಣೆ ಮಾತ್ರ ಹೊರತರಲು ಸಾಧ್ಯ). ನಾವು ಈ ಕೆಲಸಕ್ಕೆ ...ದ್ದು ಒಂದು ಆಳವಾದ ನಂಬಿಕೆಯಿಂದ. ಆ ನಂಬಿಕೆಯೇನೆಂದರೆ ...ದ ಸನ್ನಿವೇಶ, ಅಪಹರಿಸಿದ ರೀತಿ, ಮುಸ್ಲಿಮ್ ಯುವಕರನ್ನು ಹೆಕ್ಕಿದ ...ಪೊಲೀಸರ ನಿರೂಪಣೆಯಲ್ಲಿರುವ ವಿರೋಧಾಭಾಸಗಳು, ಪೊಲೀಸರ ...ದ ಗಂಭೀರವಾದ ಮಾನವಹಕ್ಕುಗಳ ಉಲ್ಲಂಘನೆಯನ್ನು ಸೂಚಿಸುತ್ತಿತ್ತು ... ಇನ್ನೂ ಹೆಚ್ಚಿನ ವಿಚಾರಣೆ ನಡೆಸುವ ಅನಿವಾರ್ಯತೆಯನ್ನು ...ಮಾಡಿತ್ತು." ಸಮಿತಿ ಈಗ ಜನತೆಯ ಮುಂದೆ ಇಟ್ಟಿರುವ ವರದಿ ಈ ...ವನ್ನು ಸಂಪೂರ್ಣವಾಗಿ ಈಡೇರಿಸಿದೆ. ಸಮಿತಿಯ ಸದಸ್ಯರು ಸಂತ್ರಸ್ತರ ...ದ ಕೇಳಿದ್ದು, ಕಣ್ಣಾರೆ ಕಂಡದ್ದು ಮತ್ತು ಸಾಕ್ಷ್ಯಾಧಾರಗಳನ್ನು ಪರಾಂಬರಿಸಿ ...ಂಡದ್ದು - ಇಷ್ಟನ್ನು ಹೊರತುಪಡಿಸಿ, ವ್ಯಕ್ತಿಗತ ಅಭಿಪ್ರಾಯ ಯಾ ...ನದ ಒಂದು ಮಾತೂ ಸಹ ಈ ವರದಿಯಲ್ಲಿ ಎಲ್ಲೂ ಕಾಣಿಸುವುದಿಲ್ಲ. ...ಗೆಯ ವಸ್ತುನಿಷ್ಠತೆ ನಮ್ಮ ...ಮಗಳಿಗೂ ಇದ್ದಿದ್ದರೆ ಇಂತಹ ...ಧನಾ ವರದಿಯ ಅಗತ್ಯವೇ ...ರುತ್ತಿರಲಿಲ್ಲ!


...012ರ ಆಗಸ್ಟ್ 29ರಂದು ...ರಿನಲ್ಲಿ 8 ಮತ್ತು ಹುಬ್ಬಳ್ಳಿಯಲ್ಲಿ ...ರನ್ನು ಭಯೋತ್ಪಾದಕ ಕೃತ್ಯಗಳಲ್ಲಿ ...ಯಾಗಿದ್ದರು ಎಂಬ ಆರೋಪದ ...ಬಂಧಿಸಲಾಯಿತು. ಬಂಧಿತರೆಲ್ಲರೂ ...ರಾಗಿದ್ದರು. ಅವರಲ್ಲಿ ಹೆಚ್ಚಿನವರು ಯುವಕರು ಮತ್ತು ಸುಶಿಕ್ಷಿತರು. ...ಂಧನದ ವಾರ್ತೆಯನ್ನು ಚೀರಾಡುವ ತಲೆಬರಹ ಮತ್ತು ಬ್ರೇಕಿಂಗ್ ...ಗಳ ಮೂಲಕ ಪ್ರಸಾರ ಮಾಡುವಾಗ ನಮ್ಮ ಮಾಧ್ಯಮಗಳು ಬಂಧಿತರನ್ನು ...ಪಿಗಳು ಎಂದು ಕರೆಯುವ ಕನಿಷ್ಟ ಶಿಷ್ಟಾಚಾರವನ್ನೂ ಪಾಲಿಸಲಿಲ್ಲ. ...ಲ್ಲರೂ ಲಷ್ಕರ್ ಇ ತೋಯ್ಬಾ ಮತ್ತು ಸಿಮಿಯಂತಹ ಉಗ್ರ ಸಂಘಟನೆಗಳ ...ರ್ಕರ್ತರು ಎಂಬ ಅಪ್ಪಟ ಸುಳ್ಳನ್ನು ಹಿಂದೆಮುಂದೆ ನೋಡದೆ ಈ ...ಮಗಳು ಬಿತ್ತರಿಸಿದವು. ಬಂಧಿತರ ಪೈಕಿ ಡೆಕ್ಕನ್ ಹೆರಾಲ್ಡ್ ಪತ್ರಕರ್ತ ... ಉರ್ ರಹಮಾನ್, ಡಿ.ಆರ್.ಡಿ.ಓ ಉದ್ಯೋಗಿ ಶೋಯಬ್ ಮಿರ್ಜಾ ... ಹುಬ್ಬಳ್ಳಿಯ ಯೂಸುಫ್ ನಲಬಂದ್ ಅವರನ್ನು ಹಲವು ತಿಂಗಳ ...ವಾಸದ ನಂತರ ಬಿಡುಗಡೆಗೊಳಿಸಲಾಯಿತು. ಅವರ ವಿರುದ್ಧ ಯಾವುದೇ ...ಧಾರವಿಲ್ಲ ಎಂದು ರಾಷ್ಟ್ರೀಯ ತನಿಖಾ ಸಮಿತಿ ನ್ಯಾಯಾಲಯಕ್ಕೆ ತಿಳಿಸಿತು. ... ಮೇಲೆ ಇದ್ದ ಆರೋಪಗಳಲ್ಲಿ ಪತ್ರಕರ್ತ ವಿಶ್ವೇಶ್ವರ ಭಟ್, ಪ್ರತಾಪ್ ... ಮತ್ತು ವಿಜಯ ಸಂಕೇಶ್ವರರ ಕೊಲೆಗೆ ಸಂಚು ನಡೆಸಿದ್ದು ಕೂಡ ...ಗಿತ್ತು. ಆರೋಪಿಗಳ ಬಂಧನವಾದಾಗ ವಿಜಯ ಸಂಕೇಶ್ವರರು ಕಣ್ಣೀರು ...ರಂತೆ! ಅವರು ಸೃಷ್ಟಿಸಿದ ಸುಳ್ಳನ್ನು ಅವರೇ ನಿಜವೆಂದು ನಂಬಿ ...ರು! ಬಂಧಿತ ಆರೋಪಿಗಳೆಲ್ಲರೂ ಅಪರಾಧಿಗಳೆಂಬಂತೆ ವರದಿ ಮಾಡಿದ ...ಮಗಳು, ಮುತಿ ಉರ್ ರಹಮಾನ್ ಮತ್ತು ಇತರರು ಖುಲಾಸೆಯಾದಾಗ ...ಕ್ಷಮೆಯಾಚಿಸುವ ಸೌಜನ್ಯವನ್ನೂ ತೋರಿಸಲಿಲ್ಲ!

...008ರ ಮೇ 10 ರಂದು, ರಾಜ್ಯ ವಿಧಾನಸಭಾ ಚುನಾವಣೆಗೆ ಕೆಲವೇ ... ಮೊದಲು ಹುಬ್ಬಳ್ಳಿ ನ್ಯಾಯಾಲಯದಲ್ಲಿ ಒಂದು ಬಾಂಬ್ ...ಗೊಂಡಿತು; ನ್ಯಾಯಾಲಯಕ್ಕೆ ಆವತ್ತು ರಜಾದಿನವಾಗಿದ್ದುದರಿಂದ ಜೀವ ...ಹಾನಿಯೇನೂ ಸಂಭವಿಸಲಿಲ್ಲ. ಯಥಾಪ್ರಕಾರ ಮಾಧ್ಯಮಗಳು ಚೀರಾಡಿದವು; ...ಇ ತೋಯ್ಬಾ ಮತ್ತು ಸಿಮಿ ಈ ಸ್ಫೋಟಕ್ಕೆ ಕಾರಣವೆಂದು ಕೂಗಾಡಿದವು. ... ಸ್ಫೋಟದ ಆರೋಪ ಹೊರಿಸಲು ಪೊಲೀಸರು ಒಬ್ಬ ಅಮಾಯಕನನ್ನು ... ಕೂಡ ಮಾಡಿದರು. ಮೂಲತಃ ಬೆಳಗಾಂನವರಾಗಿದ್ದು, ಪ್ರಕೃತ ಶಾರ್ಜಾದಲ್ಲಿ ...ಗದಲ್ಲಿದ್ದ ಇಕ್ಬಾಲ್ ಅಹ್ಮದ್ ಜಕಾತಿ ಎಂಬವರನ್ನು ವಿಚಾರಣೆಗೆಂದು ...ಸರು ಖುದ್ದಾಗಿ ಕರೆಸಿ, ಬಾಂಬ್ ಸ್ಫೋಟವನ್ನು ಅವರ ತಲೆಗೆ ಕಟ್ಟಿದರು. ...ಯದಲ್ಲಿ ಅವರ ಪರ ಯಾವ ವಕೀಲನೂ ವಾದಿಸಕೂಡದು ಎಂದು ...ಯ ವಕೀಲರ ಸಂಘ ಕಾನೂನುಬಾಹಿರವಾಗಿ ನಿರ್ಣಯ ಕೈಗೊಂಡಿತು. ನ್ಯಾಯಾಲಯದ ಮುಂದೆ ತನ್ನ ಅಹವಾಲು ಹೇಳಿಕೊಳ್ಳುವ ಹಕ್ಕನ್ನು ಕೊಲೆ ಆರೋಪಿಗಳಿಗೆ ಸಹ ಭಾರತದ ಸಂವಿಧಾನ ನೀಡಿದೆ. ಆದರೆ ಹುಬ್ಬಳ್ಳಿಯ ನ್ಯಾಯವಾದಿಗಳೇ ಈ ನ್ಯಾಯಸಂಹಿತೆಗೆ ದ್ರೋಹ ಬಗೆದರು. ನ್ಯಾಯಾಲಯ ಅಪರಾಧಿ ಎಂದು ತೀರ್ಮಾನಿಸುವವರೆಗೆ ಆರೋಪಿಯನ್ನು ಮುಗ್ಧನೆಂದೇ ಪರಿಗಣಿಸಬೇಕೆಂಬುದು ನ್ಯಾಯಸಂಹಿತೆಯ ಇನ್ನೊಂದು ನಿಯಮ. ಆದರೆ ಮುಸ್ಲಿಮ್ ಆರೋಪಿಗಳಿಗೆ ಕಾನೂನಿನ ಈ ರಕ್ಷಣೆಯನ್ನು ನಮ್ಮ ಮಾಧ್ಯಮಗಳು ಮತ್ತು ಸಮಾಜ ಮಾತ್ರವಲ್ಲ, ನ್ಯಾಯಾಂಗ ಸಹ ಈಗ ನಿರಾಕರಿಸುತ್ತಿದೆ. ಪ್ರಕರಣದ ಆರೋಪಿಯ ಜಾಮೀನು ಅರ್ಜಿ ಸಲ್ಲಿಸಲು ಮುಂದೆ ಬಂದ ವಕೀಲ ಇಸ್ಮಾಯಿಲ್ ಜಾಲಗಾರರ ಮೇಲೆ ನ್ಯಾಯಾಲಯದ ಆವರಣದಲ್ಲೇ ಹುಬ್ಬಳ್ಳಿಯ ವಕೀಲರು ಹಲ್ಲೆ ನಡೆಸಿದರು. 2009ರ ಜನವರಿ ತಿಂಗಳಲ್ಲಿ ಈ ಬಾಂಬ್ ಸ್ಫೋಟ ಪ್ರಮೋದ್ ಮುತಾಲಿಕನ ಶ್ರೀ ರಾಮಸೇನೆ ನಡೆಸಿದ್ದು ಎಂಬ ಸತ್ಯ ಪೊಲೀಸರಿಂದಲೇ ಹೊರಬಿತ್ತು. ಆದರೆ ಆರೋಪಿ ಇಕ್ಬಾಲ್ ಅಹ್ಮದ್ ಜಕಾತಿ ಅವರ ಬದುಕು ಆ ವೇಳೆಗೆ ಮೂರಾಬಟ್ಟೆಯಾಗಿತ್ತು. ಅವರು ಉದ್ಯೋಗ ಕಳೆದುಕೊಂಡಿದ್ದರು; ಅವರ ನೆರೆಕೆರೆಯವರು ಮತ್ತು ಅವರ ಸಮುದಾಯ ಮಾತ್ರವಲ್ಲ, ಸಮೀಪದ ಬಂಧುಗಳು ಸಹ ಅವರಿಂದ ದೂರ ಸರಿದರು. ಜಕಾತಿಯವರೇ ಹೇಳಿಕೊಳ್ಳುವ ಹಾಗೆ ಅವರದ್ದು ಈಗ ಪ್ರತಿ ದಿನವೂ ಸಾಯುವಂತಹ ಸ್ಥಿತಿ.

"ಶಾಶ್ವತ ಶಂಕಿತರು"- ಕರ್ನಾಟಕದ ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗ ಮತ್ತು ಬೆಳಗಾಂಗಳಲ್ಲಿ ಬಂಧಿತರಾದ ಮುಸ್ಲಿಮ್ ಶಂಕಿತರ ಪ್ರಕರಣಗಳನ್ನು ಮಾತ್ರ ಪರಿಶೀಲಿಸುತ್ತದೆ. ಆದರೆ ಅಮಾಯಕ ಮುಸ್ಲಿಮರು ಪೊಲೀಸರ ಕಣ್ಣಲ್ಲಿ ಶಂಕಿತರಾಗಿ ಮಾಧ್ಯಮಗಳ ಸತತ ನಿಂದನೆಗೆ ಒಳಪಟ್ಟು ಸಮಾಜದಿಂದಲೂ, ಸಮುದಾಯದಿಂದಲೂ, ಕೊನೆಗೆ ತಮ್ಮದೇ ಬಳಗದವರಿಂದಲೂ ತಿರಸ್ಕೃತರಾಗಿ ತಮಗೆ ತಾವೇ ಹೊರೆಯಾಗಿ ದಿನಕಳೆಯುತ್ತಿರುವ ಈ ದುರಂತ ಈಗ ದೇಶದಲ್ಲಿ ಹಲವೆಡೆ ಸಂಭವಿಸುತ್ತಿದೆ. ಉದಾ: 2006ರಲ್ಲಿ ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟವೊಂದಕ್ಕೆ ಸಂಬಂಧಿಸಿ 9 ಮುಸ್ಲಿಮ್ ತರುಣರನ್ನು ಬಂಧಿಸಲಾಯಿತು. ಎಂದಿನಂತೆ ಮಾಧ್ಯಮಗಳು ಅವರನ್ನು ಭಯೋತ್ಪಾದಕರೆಂಬಂತೆಯೇ ಚಿತ್ರಿಸಿದವು. ಅವರ ವಿರುದ್ಧ ಮಹಾರಾಷ್ಟ್ರದ ಭಯೋತ್ಪಾದಕ ನಿಗ್ರಹ ಪಡೆ ಎ.ಟಿ.ಎಸ್ ನ್ಯಾಯಾಲಯದಲ್ಲಿ ಹಾಕಿದ ಮೊಕದ್ದಮೆಯ ವಿಚಾರಣೆ ಈಗಲೂ ನಡೆದಿದೆ. ಆದರೆ 2007ರ ಹೈದರಾಬಾದ್‌ನ ಮಕ್ಕಾ ಮಸೀದಿ ಸ್ಫೋಟದ ಮುಖ್ಯ ಆರೋಪಿ ಸ್ವಾಮಿ ಅಸೀಮಾನಂದ ನ್ಯಾಯಾಲಯದ ಮುಂದೆ ನೀಡಿದ ತಪ್ಪೊಪ್ಪಿಗೆ ಹೇಳಿಕೆಯಿಂದಾಗಿ ಮಾಲೆಗಾಂವ್ ಸ್ಫೋಟದ 9 ಮುಸ್ಲಿಮ್ ಆರೋಪಿಗಳು ನಿರಪರಾಧಿಗಳು ಎಂದು ಸಾಬೀತಾಯಿತು. ಮಾಲೆಗಾಂವ್ ಸ್ಫೋಟದ ತನಿಖೆಯನ್ನು ಎ.ಟಿ.ಎಸ್‌ನಿಂದ ಕೈಗೆತ್ತಿಕೊಂಡ ರಾಷ್ಟ್ರೀಯ ತನಿಖಾ ಮಂಡಳಿ ಎನ್.ಐ.ಎ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಾಧಾರವಿಲ್ಲ ಎಂದು ನ್ಯಾಯಾಲಯಕ್ಕೆ ತಾ 29-08-2013 ರಂದು ತಿಳಿಸಿತು. ಅವರ ವಿಚಾರಣೆ ಮುಂದುವರಿಸಲು ಸಹ ಅದು ಸಮ್ಮತಿ ನೀಡಿಲ್ಲ. ಈ ನಡುವೆ ಪ್ರಕರಣಕ್ಕೆ ಸಂಬಂಧಿಸಿ ಹಿಂದೂ ಬಲಪಂಥೀಯ ಸಂಘಟನೆಯೊಂದರ ನಾಲ್ವರನ್ನು ಬಂಧಿಸಲಾಗಿದೆ. ಆದರೆ ಪ್ರಕರಣದ 9 ಜನ ಮುಸ್ಲಿಮ್ ಆರೋಪಿಗಳು ಮಾತ್ರ ತಾವು ಮಾಡದ ಅಪರಾಧಕ್ಕಾಗಿ ಈಗಲೂ ಬಂಧನದಲ್ಲಿದ್ದಾರೆ. ನ್ಯಾಯಾಲಯ ಅವರ ವಿಚಾರಣೆಯನ್ನು ಮುಂದಿನ ತಿಂಗಳಿಗೆ ಮುಂದೂಡಿದೆ. ಬಹುಶಃ ಆ ವೇಳೆಗೆ ಮಹಾರಾಷ್ಟ್ರದ ಎ.ಟಿ.ಎಸ್ ಈ ತರುಣರನ್ನು ಇನ್ನೊಂದು ಕ್ರಿಮಿನಲ್ ಕೇಸಿನಲ್ಲಿ ಫಿಟ್ ಮಾಡಬಹುದು. ಪೊಲೀಸರು ಲಾಗಾಯ್ತಿನಿಂದಲೂ ಹೀಗೆ ಮಾಡುತ್ತಲೇ ಬಂದಿದ್ದಾರೆ. ಕರ್ನಾಟಕದಲ್ಲೂ, ಹುಬ್ಬಳ್ಳಿ ನ್ಯಾಯಾಲಯದ ಸ್ಫೋಟದ ಆರೋಪಿಯಾಗಿದ್ದ ಇಕ್ಬಾಲ್ ಅಹ್ಮದ್ ಜಕಾತಿ, ಆ ಕೇಸಿನಿಂದ ಖುಲಾಸೆಯಾಗುತ್ತಿದ್ದಂತೆಯೇ, ಬೆಳಗಾಂನ ಎ.ಪಿ.ಎಂ.ಸಿ ಆವರಣದಲ್ಲಿ ಸಂಭವಿಸಿದ ಬಾಂಬ್ ಸ್ಫೋಟ, ಒಂದು ಕಾರು ಕಳವಿನ ಪ್ರಕರಣ ಮತ್ತು ಕೇಸರಿ ಧ್ವಜ ಸುಟ್ಟು ಹಾಕಿದ ಪ್ರಕರಣಗಳನ್ನು ಅವರ ತಲೆಗೆ ಕಟ್ಟಲಾಯಿತು. ನಮ್ಮ ಊರುಗಳ ಸಾಮಾನ್ಯ ಸದ್ಗೃಹಸ್ಥರ ದೃಷ್ಟಿಯಲ್ಲಿ ಈಗ ಮುಸ್ಲಿಮರೆಲ್ಲರೂ ಕ್ರೂರಿಗಳು, ಪಾಕಿಸ್ತಾನ ಪರ ನಿಷ್ಠೆ ಉಳ್ಳವರು, ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳುವವರು ಮತ್ತು ಭಯೋತ್ಪಾದಕರು. ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿರುವ ಭಟ್ಕಳ, ಹುಬ್ಬಳ್ಳಿ, ಮಾಲೆಗಾಂವ್, ಆಜಂಗಡ, ದರ್ಭಾಂಗ ಮುಂತಾದ ಊರುಗಳನ್ನು "ಭಯೋತ್ಪಾದನೆಯ ಕೇಂದ್ರ"ಗಳೆಂದೇ ಗುರುತಿಸಲಾಗುತ್ತದೆ; ಅಷ್ಟೇ ಯಾಕೆ, ಜನ ಈಗ ಇಲ್ಲಿನ ಊರುಗಳ ಮುಸ್ಲಿಮ್ ಕೇರಿಗಳನ್ನು "ಪಾಕಿಸ್ತಾನ" ಎಂದು ಕರೆಯುತ್ತಿದ್ದು ಈ ಕೇರಿಗಳ ಅಂಚನ್ನು 'ಬಾರ್ಡರ್' ಎಂದೇ ಗುರುತಿಸುತ್ತಿದ್ದಾರೆ. ಈ ಮನೋಧರ್ಮ ಈಗ ನಮ್ಮ ಸೋಕಾಲ್ಡ್ ಸೆಕ್ಯುಲರ್ ರಾಷ್ಟ್ರಪ್ರಭುತ್ವದ ಆಡಳಿತ, ನ್ಯಾಯಾಂಗ, ಪೊಲೀಸು ಇಲಾಖೆ ಮತ್ತು ಮಾಧ್ಯಮಗಳನ್ನು ಸಹ ಆವರಿಸಿಕೊಂಡಿದೆ. 2012ರ ಬೆಂಗಳೂರು ಕೊಲೆ ಸಂಚಿನ ಆರೋಪಿ ಪತ್ರಕರ್ತ ಮುತಿ ಉರ್ ರಹಮಾನ್ ಸಿದ್ದಿಕಿಯನ್ನು ಪೊಲೀಸರು "ನೀನು ದಿನಕ್ಕೆ 5 ಬಾರಿ ನಮಾಜ್ ಮಾಡುತ್ತೀಯ?" ಎಂದು ಕೇಳಿದ್ದರಂತೆ. ತನ್ನ ಮೇಲಿರುವ ಆರೋಪಕ್ಕೂ, ತನ್ನ ನಮಾಜಿಗೂ ಏನು ಸಂಬಂಧ ಎಂದು ಅವರಿಗೆ ದಿಗ್ಭ್ರಮೆಯಾಯಿತು. ಆದರೆ, ಅವರು ನಮಾಜು ಮಾಡುತ್ತಾರೆ ಎನ್ನುವುದೇ ಅವರ ವಿರುದ್ಧ ಸಾಕ್ಷ್ಯಾಧಾರವಲ್ಲವೇ?

'ಶಾಶ್ವತ ಶಂಕಿತರು'- ನಮ್ಮ ಸದ್ಯದ ಸನ್ನಿವೇಶದ ಅಸಂಗತತೆ, ಭಯಾನಕತೆ ಮತ್ತು ಕ್ರೌರ್ಯಗಳ ಕಿರಿದಾದರೂ, ಯಥಾವತ್ತಾದ ಒಂದು ನಿರೂಪಣೆಯನ್ನು ಒಳಗೊಂಡಿದೆ. ಇಂಗ್ಲಿಷ್ ಮೂಲದ ಈ ವರದಿಯನ್ನು ಹಯವದನ ಉಪಾಧ್ಯ ಸಮರ್ಪಕವಾಗಿ ಅನುವಾದಿಸಿದ್ದಾರೆ. ಆದಾಗ್ಯೂ ಅವರ ಕಣ್ತಪ್ಪಿಸಿ ಅಪಪ್ರಯೋಗವೊಂದು ಕೃತಿಯಲ್ಲಿ ನುಸುಳಿಕೊಂಡಿದೆ. ಇಲ್ಲಿ ಕೆಲವು ಶಂಕಿತ ಮುಸ್ಲಿಮರ ಬಗ್ಗೆ ಏಕವಚನ ಬಳಸಲಾಗಿದೆ. ಅದರಷ್ಟಕ್ಕೆ ಅದು ಒಂದು ಕ್ಷುಲ್ಲಕ ವಿಷಯವಾದರೂ ಕನ್ನಡದ ಮಟ್ಟಿಗೆ ಅದು ಗಂಭೀರವೇ ಸರಿ. ಇಂಗ್ಲಿಷ್‌ನಲ್ಲಿ ಬಿಡಿ ಬಿಡಿ ವ್ಯಕ್ತಿಗಳನ್ನು ಸಂಬೋಧಿಸುವುದರಲ್ಲಿ ಬಹುವಚನ ಪ್ರಯೋಗ ಎಂಬುದೇ ಇಲ್ಲ; ಆದರೆ ಕನ್ನಡದಲ್ಲಿ ಬಹುವಚನ ಏಕವಚನಗಳೆರಡೂ ಚಾಲ್ತಿಯಲ್ಲಿವೆ. ಬಹಳ ಹಿಂದೆಯೇ ವಿಮರ್ಶಕ ದಿ. ಡಾ.ಬಿ.ದಾಮೋದರ ರಾವ್ ಎತ್ತಿತೋರಿಸಿರುವ ಹಾಗೆ ಈ ಭಾಷಾಪ್ರಯೋಗ, ಸಾಮಾಜಿಕ ಯಜಮಾನಿಕೆಯನ್ನು ಸೂಚಿಸುತ್ತದೆ. ಬಡವರು, ಕೂಲಿಕೆಲಸದವರು, ಕೆಳಜಾತಿಯವರು, ತೀರ ಚಿಕ್ಕ ಪ್ರಾಯದ ಮಕ್ಕಳು ಹಾಗೂ ಕ್ರಿಮಿನಲ್‌ಗಳ ಮಟ್ಟಿಗೆ ಬಹುವಚನ ಪ್ರಯೋಗ ಕನ್ನಡದಲ್ಲಿ ಈಗಲೂ ಅಸಹಜವಾಗಿ ಕೇಳಿಸುತ್ತದೆ. ಕುಂದಾಪುರ ಕನ್ನಡದಲ್ಲಂತೂ ಹೆಂಗಸರು, ದಲಿತರು ಮತ್ತು ತೊಟ್ಟಿಲ ಕೂಸುಗಳ ಬಗ್ಗೆ ಮೊನ್ನೆ ಮೊನ್ನೆಯವರೆಗೆ ಬಹುವಚನ ಬಿಡಿ, ಏಕವಚನವೂ ಚಾಲ್ತಿಯಲ್ಲಿರಲಿಲ್ಲ. ಬದಲಾಗಿ ಅವರೆಲ್ಲರನ್ನೂ ಅದು, ಇದು ಎಂದು ಗುರುತಿಸಲಾಗುತ್ತಿತ್ತು; ಇಲ್ಲಿನ ಜನ ದಲಿತರನ್ನು ಕೂಸಾಳು ಎಂದೇ ಕರೆಯುತ್ತಿದ್ದರು. ಅಷ್ಟೇ ಸಲೀಸಾಗಿ ಕನ್ನಡ ಮಾಧ್ಯಮಗಳು ಈಗ ಶಂಕಿತ ಮುಸ್ಲಿಮರ ಬಗ್ಗೆ ಏಕವಚನ ಬಳಸುತ್ತವೆ - ಆ ಮುಸ್ಲಿಮ್ ವ್ಯಕ್ತಿ ಪತ್ರಕರ್ತ ಮುತಿ ಉರ್ ರಹಮಾನ್ ಆದರೂ ಸರಿ, ಶಂಕಿತ ಉಗ್ರ ಯಾಸಿನ್ ಭಟ್ಕಳ ಆದರೂ ಸರಿ. ಸಂಸ್ಕೃತಿ ಮತ್ತು ಭಾಷೆಯ ಹೆಣಿಗೆಯಲ್ಲೇ ಹಾಸುಹೊಕ್ಕಾಗಿರುವ ಈ ಯಜಮಾನಿಕೆ, ಅಥವಾ ಆಂಟೋನಿಯೋ ಗ್ರಾಮ್ಶಿ ಹೇಳುವ **Hegemony**ಯ ಹುನ್ನಾರಗಳನ್ನು ನಾವು ಗುರುತಿಸಲೇಬೇಕು. ಎಡ ಪಂಥೀಯ ಚಳವಳಿಗಳಲ್ಲಿ ಸದಾ ತೊಡಗಿಕೊಂಡಿರುವ ಹಯವದನ ಉಪಾಧ್ಯ ಎಲ್ಲ ಬಗೆಯ ಯಜಮಾನಿಕೆಯನ್ನೂ ವಿರೋಧಿಸುವಂತಹವರು. ಈ ಲೋಪ ಖಂಡಿತವಾಗಿಯೂ ಉದ್ದೇಶಪೂರ್ವಕವಲ್ಲ. ನಾವು ಬಳಸುವ ಭಾಷೆ ಹೇಗೆ ನಮ್ಮ ಅರಿವಿಗೇ ಬಾರದಂತೆ ನಮ್ಮನ್ನು ಯಾಮಾರಿಸುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ■

ಖಾಸಗಿ ಮತ್ತು ಸಾರ್ವಜನಿಕ



...ನು ಇಂಡಿಯನ್ ಆಗುತ್ತೇನೆಂದು ನನ್ನ ತಂಗಿ ಕೂಡ ನಂಬಲಿಲ್ಲ' ಎಂದು ಸೋನಿಯಾ ಹೇಳಿದರು; ...ಮೆಲುದನಿಯ ಖಾಸಗಿ ಮಾತು; ಪ್ರಾಮಾಣಿಕವಾಗಿ ಆಕೆ ಹೇಳಿದ್ದು. ಅದಕ್ಕೂ ರಾಜಕೀಯಕ್ಕೂ ...ವಿಲ್ಲ. ಆದರೆ ಆಕೆಯನ್ನು ಸಂದರ್ಶಿಸಿದ ವೀರ್ ಸಾಂಘ್ವಿ ಎಂಬ ಹುಂಬನಿಗೆ ಯಾವುದು ಮೆಲುದನಿ, ...ದು ಸೋಪಿನ ಮಾತು, ಯಾವುದು ಸ್ನೇಹದ ಹೇಳಿಕೆ ಎನ್ನುವುದೂ ಗೊತ್ತಾಗಲಿಲ್ಲ. ಅದನ್ನು ...ನಂತೆ ಗೇಲಿ ಮಾಡಿದ ಆತನ ನಿಲುವನ್ನೇ ಎಕ್ಸ್‌ಪ್ರೆಸ್ ಮೂರ್ಖರು ತೆಗೆದುಕೊಂಡರು. ...ಅಲ್ಲ, 'ಆಕೆಗೆ ರೋಸಿಹೋದರೆ ರಾಜಕೀಯವನ್ನು ಬಿಟ್ಟುಬಿಡುತ್ತಾಳಂತೆ' ಎಂದು ಬರೆದರು. ...ಯ ಎನ್ನುವುದು ಲಾಭದಾಯಕ, ಅಧಿಕಾರದಾಹದ, ಕರಾಳ ವ್ಯಕ್ತಿಗಳ ವೃತ್ತಿ ಎಂದು ತಿಳಿದವರು ...ಗೆ ಬರೆಯುತ್ತಾರೆ. 'ನಾನು ತುಂಬ ಸಂಕೋಚದವಳು' ಎಂದಳು ಸೋನಿಯಾ. ಅದನ್ನು ...ನೇಕ ರೀತಿಯಲ್ಲಿ ಅರ್ಥಮಾಡಿಕೊಂಡರು. ಆಕೆಯ ಅರ್ಥ. 'ನಾನು ಸಾರ್ವಜನಿಕಳಲ್ಲ, ವೇದಿಕೆ ...ವಳಲ್ಲ, ಖಾಸಗಿ ವ್ಯಕ್ತಿ' ಎನ್ನುವುದು. ಆದರೆ ವರದಿಗಾರರಿಗೆ ಇದು ಕೂಡ ಭಯದವಳು, ...ಎಂದು ಕೇಳಿಸಿತು. ಹಾಗೆಯೇ ಸೋನಿಯಾ 'ಕಾಂಗ್ರೆಸ್ಸಿನವರು ನನ್ನನ್ನು ರಾಜಕೀಯಕ್ಕೆ ...ಯಿಂದ ಒತ್ತಾಯ ಮಾಡಿದರು, ಅದಕ್ಕೇ ಬರಬೇಕಾಯಿತು' ಎನ್ನುವುದು ವರದಿಗಾರರ ...'ಕಾಂಗ್ರೆಸ್ಸಿಗರು ಬೇಡಿಕೊಂಡರು' ಎಂದು ಆಯಿತು. ಎರಡಕ್ಕೂ ವ್ಯತ್ಯಾಸವಿದೆ ಎಂದು ...ಕೂಡ ಬರಲಿಲ್ಲ.

..., ನನ್ನನ್ನು, ಸಣ್ಣಗಿನ ಹೆಜ್ಜೆಯುಳ್ಳ ಮಾತ್ರ ಸೋನಿಯಾಳ ಸಂಕೋಚ, ಹಿಂಜರಿಕೆಯನ್ನು ...ಯನ್ನು ಅರ್ಥ ಮಾಡಿಕೊಂಡರು. ಸೋನಿಯಾ ಮಗಳು ಪ್ರಿಯಾಂಕಾ ರಾಯ್‌ಬರೇಲಿಗೆ ಚುನಾವಣಾ ಪ್ರಚಾರಕ್ಕೆ ಹೋಗುವ ಮುನ್ನ, 'ಏನಾದರೂ ಹೇಳುವುದು ಇದೆಯೆ?' ಎಂದು ಅಮ್ಮನನ್ನು ಕೇಳಿದಳು. ಸೋನಿಯಾ, 'ನೀನು ಯಾರನ್ನೂ ವೈಯಕ್ತಿಕವಾಗಿ ಟೀಕಿಸಬೇಡ' ಎಂದು ಹೇಳಿದಳು. ಆದರೆ ಪ್ರಿಯಾಂಕಾ ಬಿಸಿರಕ್ತದ ಹುಡುಗಿ. ಅರುಣ್ ನೆಹರೂ ಬಗ್ಗೆ ಹೇಳಬೇಕಾದ್ದನ್ನು ಹೇಳಿಯೇಬಿಟ್ಟಳು. 'ಆತ ದ್ರೋಹಿ' ಎಂದು ಹೇಳಿ ಖಂಡಿಸಿದಳು.

ಇದೆಲ್ಲದರ ಹಿಂದಿನ ಸೋನಿಯಾಳ ಘನತೆ ಅಂತರಂಗದ ಧ್ಯಾನ ಕೇಳಬಲ್ಲವರಿಗೆ ಮಾತ್ರ ತಿಳಿಯುತ್ತದೆ. ಮನುಷ್ಯನ ಸೂಕ್ಷ್ಮ ಮಾತು ಎಲ್ಲ ಮೌಲ್ಯಗಳ ಆಧಾರ; ಸೂಕ್ಷ್ಮ ಸಂವೇದನೆ ಎಲ್ಲ ಕಲೆಯ ಸ್ಫೂರ್ತಿ. ಇದು ತಿಳಿಯದಿದ್ದರೆ ನಮ್ಮ ಪತ್ರಕರ್ತರ ಕೇಡಿತನ ಬೆಳೆಯುತ್ತ ಹೋಗುತ್ತದೆ.

ಖಾಸಗಿ ವೇದನೆಯನ್ನು ಸಾರ್ವಜನಿಕ ಕ್ರಿಯೆಗಳಿಗೆ ತರುವುದರಲ್ಲಿ ವಿಫಲವಾದ ರಾಜಕಾರಣಿಗಳು ಧೂರ್ತರಾಗಿರುತ್ತಾರೆ.




* * *

ಸೋನಿಯಾಳ ಗೊಂದಲ ಮತ್ತು ಸಂಕೋಚಕ್ಕೆ ಹೋಲಿಸಿದರೆ ವಾಜಪೇಯಿ ರಾಜಕೀಯದ ಅಮೆಚೂರ್ ತರಹ ಕಾಣುತ್ತಾರೆ. ಲಕ್ನೋದ ಬೀದಿಗಳಲ್ಲಿ 'ನನಗೆ ಮತ್ತೆ ಪ್ರಧಾನಿಯಾಗುವ ಅವಕಾಶ ಕೊಡಿ' ಎಂದು ಬೇಡಿಕೊಂಡ ಈ ವ್ಯಕ್ತಿಗೆ ಅಧಿಕಾರ ಸರ್ವಶ್ರೇಷ್ಠವಾದದ್ದು. ಕೆಲವೇ ದಿನಗಳಲ್ಲಿ ಬೋಫೋರ್ಸ್‌ನ ಪೇಪರ್‌ಗಳು ಬರುತ್ತವೆ' ಎಂದು ಸೋನಿಯಾಳನ್ನು ಹೆದರಿಸಲು ಯತ್ನಿಸುವ ಈತನಿಗೆ ಸೋನಿಯಾ ಎಂದೂ ಪ್ರಧಾನಿಯಾಗಿರಲಿಲ್ಲ ಎನ್ನುವುದು ತಿಳಿದಂತಿಲ್ಲ. ಜಾರ್ಜ್ ತರದವರು ವಾಜಪೇಯಿಗೆ ತಿಳಿದಿರಬಹುದೆ?


● ಜೂನ್ 30, 1999

ಅಂದು ಮೋದಿಯನ್ನು ಟೀಕಿಸಿದವರು ಇಂದು ಹೊಗಳುಭಟರಾದುದು ಹೇಗೆ?

ಆಧುನಿಕ ಭಾರತದ ಹಿಟ್ಲರ್ ನರೇಂದ್ರ ಮೋದಿಯನ್ನು ಮುಂಬರಲಿರುವ ಚುನಾವಣೆಯಲ್ಲಿ ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಲು ಬಿಜೆಪಿಯು ಬಯಸಿದೆ. ಈ ಮೋದಿ ಎಂತಾ ರಾಜಕಾರಣಿ? ಗುಜರಾತ್‌ನಲ್ಲಿ ಮೋದಿ ಸಾಧಿಸಿದ್ದಾನೆಂದು ಹೇಳಲಾಗುತ್ತಿರುವ 'ಅಭಿವೃದ್ಧಿ'ಯ ಅರ್ಥವೇನು? ಮೋದಿಯ ಕೊಲೆಪಾತಕ ರಾಜಕೀಯದ ನೆಲೆಗಳೇನೆಂಬ ವಿಶ್ಲೇಷಣೆಯನ್ನು ಈ ವಾರದಿಂದ ಸಂಕ್ಷಿಪ್ತವಾಗಿ ಈ ಅಂಕಣದಲ್ಲಿ ಪ್ರಕಟಿಸುತ್ತಿದ್ದೇವೆ. ಬರಹಗಾರ ಸುರೇಶ್ ಭಟ್ ಬಾಕ್ರಬೈಲು ಈ ಅಂಕಣ ಬರೆಯುತ್ತಿದ್ದಾರೆ.



ಬೂಸಿ ಬಸ್ಯ... ಮೋದಿ 1



ಇವತ್ತು ಟಾಟಾ, ಅಂಬಾನಿ, ಮಿತ್ತಲ್‌ರಂಥ ಕಾರ್ಪೋರೇಟ್ ಧಣಿಗಳು ಮತ್ತು ಕಾರ್ಪೋರೇಟ್ ಮಾಧ್ಯಮಗಳು ಮೋದಿಯನ್ನು "ಭಾರತದ ಮುಂದಿನ ನಾಯಕ", "ದಾರ್ಶನಿಕ" ಎಂದು ಮುಂತಾಗಿ ಹೊಗಳುತ್ತಿದ್ದಾರೆ. ಗುಜರಾತ್ ಮಾರಣಹೋಮದ ನಂತರ ಮೋದಿಯನ್ನು ತೆಗಳುತ್ತಿದ್ದ ಇವರೀಗ ಬಣ್ಣ ಬದಲಾಯಿಸಿ ಭಟ್ಟಂಗಿಗಳಂತೆ ವರ್ತಿಸುತ್ತಿರುವುದರ ಮರ್ಮವೇನು? ಉತ್ತರ ಅರಸುತ್ತಾ ಹೊರಟರೆ ಅಂತಿಮವಾಗಿ ನಮಗೆದುರಾಗುವುದು ಚಾಣಾಕ್ಷ ರಾಜಕಾರಣಿಯೊಬ್ಬನ ಒಡೆದಾಳುವ ನೀತಿ.

2002ರ ದಂಗೆಗಳ ಪರಿಣಾಮವಾಗಿ ಗುಜರಾತಿನ ಉದ್ಯಮಗಳು ಬಿಲಿಯಾಂತರ ರೂಪಾಯಿ ನಷ್ಟ ಅನುಭವಿಸಿದವು. ಆಮೇಲೆ ವಿದೇಶೀ ಬಂಡವಾಳ ಹೂಡಿಕೆಯೂ ನಿಂತುಹೋದಾಗ ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಚಿಂತಾಜನಕವಾಯಿತು. ದೀಪಕ್ ಪಾರೆಖ್, ಸೈರಸ್ ಗರ್‍ಝರ್, ನಾರಾಯಣ ಮೂರ್ತಿ, ಅಜೀಂ ಪ್ರೇಮ್‌ಜಿಯಂತಹ ಅನೇಕ ಉದ್ಯಮಪತಿಗಳು ತಮ್ಮ ಸಿಟ್ಟನ್ನೂ ಆತಂಕವನ್ನೂ ಬಹಿರಂಗವಾಗಿ ತೋಡಿಕೊಳ್ಳಲಾರಂಭಿಸಿದರು. ಸಿಐಐ (ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್) ಭಾರತದ ಉದ್ದಿಮೆಗಳ ಅತ್ಯಂತ ದೊಡ್ಡ ಹಾಗೂ ಪ್ರಮುಖ ಒಕ್ಕೂಟ ಆದರೆ ಏಪ್ರಿಲ್ 2002ರ ರಾಷ್ಟ್ರೀಯ ಸಭೆಯಲ್ಲಿ ಥರ್ಮ್ಯಾಕ್ಸ್ ಸಂಸ್ಥೆಯ ಅಧ್ಯಕ್ಷೆ ಅನು ಆಗಾ, ಗುಜರಾತ್‌ನ ಮುಸ್ಲಿಮರು ಅನುಭವಿಸಿದ ಘೋರ ಸಂಕಷ್ಟಗಳ ಕುರಿತು ಭಾವೋದ್ರೇಕಪೂರಿತ ಭಾಷಣ ಮಾಡಿದಾಗ ಸಭಿಕರೆಲ್ಲರೂ ಎದ್ದು ಸುದೀರ್ಘ ಕರತಾಡನ ಮಾಡಿದರು.


2002ರ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದ ಮೋದಿಗೆ ಉದ್ಯಮಿಗಳ ಸಹಕಾರವಿಲ್ಲದೆ ತಾನೇನನ್ನೂ ಸಾಧಿಸಲಾರೆ ಎಂಬುದರ ಅರಿವಿತ್ತು, ಅದೇ ವೇಳೆ, ದಂಗೆಗಳು ನಡೆದರೂ ನಡೆಯದಿದ್ದರೂ ಉದ್ಯಮಿಗಳಿಗೆ ಗುಜರಾತ್ ರಾಜ್ಯವನ್ನು ಬಿಟ್ಟಿರಲಾಗುವುದಿಲ್ಲ ಎಂಬ ಸತ್ಯವೂ ಆತನಿಗೆ ಗೊತ್ತಿತ್ತು. ಇದರ ಹಿನ್ನೆಲೆಯಲ್ಲಿ ಟೀಕಾಕಾರರನ್ನು ಬೆಂಬಲಿಗರನ್ನಾಗಿ ಪರಿವರ್ತಿಸುವ ಪ್ಲಾನ್ ರೂಪುಗೊಂಡಿತು. ಮೋದಿ ಕೋರಿಕೆ ಮೇರೆಗೆ 2003ರ ಫೆಬ್ರವರಿ ತಿಂಗಳಲ್ಲಿ ಸಿಐಐನ ವಿಶೇಷ ಅಧಿವೇಶನವೊಂದನ್ನು ಹಮ್ಮಿಕೊಳ್ಳಲಾಯಿತು. ಅಂದಿನ ಭಾಷಣಕಾರರಲ್ಲೊಬ್ಬರಾದ ಜಮ್ಶದ್ ಗೋದ್ರೆಜ್, ಮೋದಿ ಎಲ್ಲಾ ಗುಜರಾತಿಗಳ ಸುರಕ್ಷತೆ ಹಾಗೂ ಭದ್ರತೆಯನ್ನು ಖಾತ್ರಿಪಡಿಸಬೇಕೆಂದು ಹೇಳಿದರು. 2002ರ ದುರದೃಷ್ಟಕರ ಘಟನೆಗಳನ್ನು ನೆನಪಿಸಿಕೊಂಡ ರಾಹುಲ್ ಬಜಾಜ್ ಕೇಳಿದರು: "....ನಿಮ್ಮ ನಂಬಿಕೆ, ನಿಲುವುಗಳೇನೆಂದು ನಾವು ತಿಳಿಯಬಯಸುತ್ತೇವೆ...." ಇವರ ಟೀಕಾಪ್ರಹಾರಗಳಿಂದ ಉರಿದುಬಿದ್ದ ಮೋದಿ "....ಇತರರಿಗಾದರೆ ಗುಜರಾತ್‌ಗೆ ಕಳಂಕ ಹಚ್ಚುವ ಸ್ಥಾಪಿತ ಹಿತಾಸಕ್ತಿಗಳಿವೆ. ನಿಮ್ಮ ಹಿತಾಸಕ್ತಿಗಳೇನು?" ಎಂದು ಪ್ರಶ್ನಿಸಿದ.

ಗುಜರಾತ್‌ಗೆ ಮರಳಿದ ಮೋದಿ ಸುಮ್ಮನೆ ಕೂರಲಿಲ್ಲ. ಪಾರ್ಸಿಗಳು ತನ್ನ ವಿರುದ್ಧ ಮಾತಾಡುವುದನ್ನು ಗಮನಿಸಿದ ಆತ 'ವೈಬ್ರೆಂಟ್ ಗುಜರಾತ್' ಶೃಂಗಸಭೆಯೊಂದರಲ್ಲಿ ವಾಜಪೇಯಿ ಮೂಲಕ ರತನ್ ಟಾಟಾಗೆ ಪ್ರಶಸ್ತಿ ಕೊಡಿಸಿದ. ಬಳಿಕ ತನ್ನ ನಿಕಟವರ್ತಿ ಉದ್ಯಮಿಗಳಾದ ಗೌತಮ್ (ಅದಾನಿ ಗ್ರೂಪ್), ಇಂದ್ರವದನ್ ಮೋದಿ (ಕ ಫಾರ್ಮಾ), ಕರ್ಸನ್ ಪಟೇಲ್ (ನಿರ್ಮಾ), ಅನಿಲ್ (ಬಕೇರಿ ಎಂಜಿನಿಯರ್ಸ್) ಯನ್ನು ಸಂಪರ್ಕಿಸಿದ. ಸೇರಿಕೊಂಡು ಸಿಐಐಗೆ ಪ್ರತಿಯಾಗಿ ಆ (ಪುನರುಜ್ಜೀವಿತ ಗುಜರಾತ್‌ನ ಗುಂಪು) ಎಂಬ ಬೇರ ಸಂಸ್ಥೆಯನ್ನು ಹುಟ್ಟುಹಾಕಿದರು. ಆರ್‌ಜಿಜಿ ಸಿಐಐ ಹೊರಬರುವ ಬೆದರಿಕೆ ಒಡ್ಡಿದಾಗ ಸಿಐಐಗೆ ಸು 100ಕ್ಕೂ ಅಧಿಕ ಕಂಪೆನಿಗಳ ಸದಸ್ಯತ್ವ ಕಳೆದುಕೆ ಅಪಾಯ ಎದುರಾಯಿತು. ಅತ್ತ ದಿಲ್ಲಿಯಲ್ಲಿ ಎ ಸರ್ಕಾರದ ಮಂತ್ರಿಗಳೆಲ್ಲ ಸಿಐಐಯ ಬಹಿಷ್ಕರಿಸಲಾರಂಭಿಸಿದರು. ಸಿಐಐ ವಿಧಿಯಿಲ್ಲದೆ ಸ ಮುಂದಾಯಿತು. ಮೋದಿ ದೋಸ್ತ್ ಅರುಣ್ ಜೇ ಸಂಧಾನಕಾರ. ಸಿಐಐ ಕ್ಷಮೆ ಕೋರಬೇಕೆಂಬ ದಿಮ ಒಪ್ಪಿದ ಅದರ ಅಧ್ಯಕ್ಷ ತರುಣ್ ದಾಸ್ ಅಹಮದಾಬಾದ್‌ಗೆ ತೆರಳಿ ಕ್ಷಮಾಯಾಚನೆಯ ಪ ಮೋದಿ ಕೈಗಿತ್ತರು. ಅಲ್ಲಿಗೆ ಮೋದಿ ಪ್ಲಾನ್ ಕಾರ್ಪೋರೇಟ್‌ಗಳ ರಾಗ ಬದಲಾಗಿದೆ.

● ಸುರೇಶ್ ಭಟ್ ಬಾಕ್ರಬ


(ಹೆಚ್ಚಿನ ಮಾಹಿತಿಗಾಗಿ pheku.com ನ

ಬಾಲಿವುಡ್ ಮಾತ್ರವಲ್ಲ, ಕನ್ನಡಿಗರಲ್ಲೂ ಒಡಕು ಬುದ್ಧಿ ಇದ



ಆಗಸ್ಟ್ 28 ಮತ್ತು ಸೆಪ್ಟೆಂಬರ್ 11 ರ ಸಂಚಿಕೆಗಳಲ್ಲಿ ಸ್ಪಂದನ ಮತ್ತು ಪ್ರವೀಣ್ ಎಸ್ ಶೆಟ್ಟಿ ಬರೆದಂತೆ ಹಿಂದಿ ಸಿನಿರಂಗ ಅರ್ಥಾತ್ ಬಾಲಿವುಡ್ಡಿನಲ್ಲಿ ದಕ್ಷಿಣ ಭಾರತೀಯ ನಾಯಕ ನಟರ ವಿರುದ್ಧ ಪಕ್ಷಪಾತವಾಗುತ್ತಿರುವುದು ನಿಜ. ದಕ್ಷಿಣ ಭಾರತೀಯರೆಂದರೆ ಆಫ್ರಿಕದಿಂದ ಬಂದವರೋ ಎಂಬ ಮನಃಸ್ಥಿತಿಯನ್ನು ಹಿಂದಿ ಸಿನಿಮಾ ಪ್ರೇಕ್ಷಕರ ಮನದಲ್ಲಿ ಅಲ್ಲಿಯ ಪಂಜಾಬಿ ಪಟ್ಟಭದ್ರರು ದಶಕಗಳಿಂದ ಬಿತ್ತಿ-ಬೆಳೆಸಿರುವುದು ನಿಜ. ಆದರೆ ಕನ್ನಡ ಚಿತ್ರರಂಗದಲ್ಲೂ ಇದೇ ನೀತಿ ಅನುಸರಿಸಲಾಗುತ್ತಿದೆ ತಾನೇ. ಬ್ರಿಟಿಷರ ಕಾಲದಲ್ಲಿ ಹಂಚಿ ಹರಿದುಹೋಗಿದ್ದ ಕನ್ನಡ ಭಾಷಿಕ ಪ್ರದೇಶಗಳು ಒಂದಾಗಿ ಐವತ್ತೇಳು ವರ್ಷವಾಗಿದ್ದರೂ ಕನ್ನಡಿಗರ ಮನಸ್ಸು ಇನ್ನೂ ಒಂದಾಗಿಲ್ಲ ಎಂಬುದಕ್ಕೆ ಸಾಕ್ಷಿ ಕನ್ನಡ ಸಿನಿಮಾರಂಗ. ಹಳೆ ಮೈಸೂರು ಭಾಗದ ಪ್ರಬಲ ಮೇಲ್ಜಾತಿಯವನು ಮಾತ್ರ ಕನ್ನಡ ಚಿತ್ರರಂಗದಲ್ಲಿ ಯಶಸ್ವಿ ನಾಯಕನಾಗಬಲ್ಲನೇ ಹೊರತು ಕರಾವಳಿ ಅಥವಾ ಉತ್ತರ ಕರ್ನಾಟಕದ ಯಾವುದೇ ಪ್ರತಿಭಾವಂತ ಯುವಕನೂ ಕನ್ನಡದಲ್ಲಿ ಸೂಪರ್ ಸ್ಟಾರ್ ಆಗಲು ಸಾಧ್ಯವೇ ಇಲ್ಲ, ಕಾರಣ ಉ.ಕ. ಅಥವಾ ಕರಾವಳಿಯ ಯುವಕ ಸೋಲೋ ಆಗಿ ನಟಿಸಿದ ಕನ್ನಡ ಸಿನಿಮಾಗಳು ಹಳೆ ಮೈಸೂರು ಭಾಗದಲ್ಲಿ ದಾರುಣವಾಗಿ ಸೋಲುತ್ತವೆ. ಸಿನಿಮಾದ ಆಡು ಭಾಷೆಯೂ ಅಷ್ಟೇ, ಮೈಸೂರು ಆಡು-ಕನ್ನಡ ಇದ್ದರೆ ಮಾತ್ರ ಚಿತ್ರ ಯಶಸ್ವಿ. ಪೂರ್ಣ ಚಿತ್ರವು ಉತ್ತರ ಕರ್ನಾಟಕದ ದೇಶಿ ಭಾಷೆ ಅಥವಾ ಕರಾವಳಿಯ ಶುದ್ಧ ಕನ್ನಡದಲ್ಲಿ ಇದ್ದರೆ ಅದರ ಸೋಲು ನಿಶ್ಚಿತ. ಕೇವಲ ಅಪಹಾಸ್ಯಕ್ಕಾಗಿ ಮಾತ್ರ ಕರಾವಳಿ ಅಥವಾ ಉ.ಕ ಆಡು-ಕನ್ನಡವನ್ನು ನಡುವೆ ತುರುಕಲಾಗುತ್ತದೆ. (ತೆಲುಗು ಸಿನೆಮಾದಲ್ಲೂ ಸ್ವಲ್ಪ ಇದೇರೀತಿ ಇದೆ. ತೆಲಂಗಾಣದ ದೇಶಿ-ತೆಲುಗು /ಸಂಸ್ಕೃತಿ /ಕಥಾ ಹಿನ್ನೆಲೆ ಇದ್ದರೆ ಅಂಥಾ ತೆಲುಗು ಚಿತ್ರಗಳು ಸೋಲುತ್ತವೆ. ಕೇವಲ ಸೀಮಾಂಧ್ರದ ಆಡು ಭಾಷೆ /ನಾಯಕ ನಟ /ಕಥಾ ಹಿನ್ನೆಲೆ ಇದ್ದರೆ ಮಾತ್ರ ಆ ತೆಲುಗು ಚಿತ್ರ ಹಿಟ್ ಆಗಲು ಸಾಧ್ಯ)

ಕರ್ನಾಟಕದ ರಾಜಕಾರಣದಲ್ಲೂ ಕರಾವಳಿಯ ನೆಂಟು ಹಳೆ ಮೈಸೂರಿಗರಿಗೆ ಅಲರ್ಜಿ. ಹಾಗಾಗಿ ಎಸ್.ಎಮ್.ಕೃಷ್ಣರ ಅಳಿಯ ಸಿದ್ಧಾರ್ಥ ತನ್ನ ಹೆಗ್ಗಡೆ ಎಂಬ ಕುಲನಾಮವನ್ನು ತೊರೆದಿರುವುದು. ದೇವರಾಜ ಅರಸರ ಅಳಿಯ ಎಸ್.ಡಿ.



ನಟರಾಜ್ ಸಹ ತಮ್ಮ ಹೆಗ್ಗಡೆ ಎಂಬ ಕುಲನಾಮವನ್ನು ತ್ಯಜಿಸಿದ್ದರು.

ಕರಾವಳಿಯ ನಾಡವ ಜಾತಿಯವರಂತೆ ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲೆಗಳಲ್ಲೂ ನಾಮಧಾರಿ ಒಕ್ಕಲಿಗರಲ್ಲಿ ಹೆಗಡೆ, ನಾಯಕ್, ಶೆಟ್ಟಿ ಎಂಬ ಉಪನಾಮ ಇರುತ್ತವೆ. (ಮೇರುಕವಿ ಕುವೆಂಪುರವರ ಕುಲನಾಮವೂ ಹೆಗ್ಗಡೆ ಆಗಿತ್ತು ಹಾಗೂ ಅವರ ಹಿರಿಯರು ಕರಾವಳಿ ಕಡೆಯಿಂದ ವಲಸೆ ಬಂದ ನಾಡವ-ಜೈನರಾಗಿದ್ದಿರಬಹುದು ಎಂದು ಅವರೇ ತಮ್ಮ ಆತ್ಮಚರಿತ್ರೆಯಲ್ಲಿ ಒಂದೆಡೆ ಹೇಳಿದ್ದಾರೆ. 'ಕಾನೂರು ಹೆಗ್ಗಡತಿ' ಎಂಬ ಕಾದಂಬರಿ ಅವರದೇ ಕುಟುಂಬದ ಕಥೆಯಂತಿದೆ). ಆದರೆ ಹಳೆ ಮೈಸೂರು ಭಾಗದವರಿಗೆ ತಾವು ಕರಾವಳಿಯವರು ಎಂದು ತಪ್ಪು ಅಭಿಪ್ರಾಯ ಮೂಡಿ ತಮ್ಮನ್ನು ದ್ವೇಷಿಸುವಂತೆ ಆಗಬಾರದು ಎಂಬ ಕಾರಣಕ್ಕಾಗಿ ಶಿವಮೊಗ್ಗ-ಚಿಕ್ಕಮಗಳೂರು ಜನರು ಕರಾವಳಿ ಹೆಸರಿನ ಹೋಲಿಕೆಯ ಯಾವುದೇ ಕುಲನಾಮ ತಮಗಿದ್ದರೂ ಬೆಂಗಳೂರು-ಮೈಸೂರಿನಲ್ಲಿ ನೆಲೆಸಿದ ನಂತರ ಅದನ್ನು ಅಧಿಕೃತವಾಗಿ ಬದಲಿಸಿ ಬಿಡುತ್ತಾರೆ. ಕನ್ನಡಿಗರಲ್ಲಿಯೇ ಇಂತಹ ಒಡಕು ಬುದ್ಧಿ ಇರುವಾಗ ಹಿಂದಿ ಚಿತ್ರರಂಗದ ಪಂಜಾಬಿ ಪಟ್ಟಭದ್ರರನ್ನು ದೂರಿ ಪ್ರಯೋಜನವಿಲ್ಲ.

- ರವಿ. ಬಿ. ಶೆಣಾವ, ಮಂಗಳೂರು

ಯೋಗೇಶ್ ಬಂಧನ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ

'ಯೋಗೇಶ್ ಮಾಸ್ಟರ್ ಅವರ ಬಂಧನ, ಬಿಡುಗಡೆಯ ಸುತ್ತ' ಎಂಬ ಲೇಖನವನ್ನು 'ಕಂಡಹಾಗೆ' ಅಂಕಣದಲ್ಲಿ ಓದಿದೆ. 'ಢುಂಢಿ' ಕೃತಿಗೆ ಸಂಬಂಧಿಸಿದಂತೆ ಶಾಸಕರ ಭವನದಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಕರೆದ ಸಭೆಯಲ್ಲಿ ಹಿರಿಯ ಸಾಹಿತಿಗಳು, ಹೋರಾಟಗಾರರು, ವಿವಿಧ ಸಂಘಟನೆಯ ಮುಖಂಡರು ಯೋಗೇಶ್ ಮಾಸ್ಟರ್ ಅವರ ಬಂಧನವನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ದಮನವನ್ನು ಖಂಡಿಸಿದ್ದು ಸ್ವಾಗತಾರ್ಹವಾಗಿತ್ತು.

ಯೋಗೇಶ್ ಮಾಸ್ಟರ್ ಅವರನ್ನು ಓದುಗರಿಗೆ ಪರಿಚಯ ಮಾಡಿದ್ದು ಹಾಗೂ ಗೌರಿ ಲಂಕೇಶರವರು ಯೋಗೇಶ್ ಮಾಸ್ಟರರಿಗೆ ಹೇಳಿದ ಮಾತು "ಬರೆಯುವ ಹಕ್ಕು ನಿಮಗಿದೆ, ಏನಾದರೂ ಬರೆಯುವ ಮುನ್ನ ಯಾವ ದೊಣ್ಣೆ ನಾಯಕನ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ" ಎನ್ನುವ ಮಾತು ನನಗೆ ಮತ್ತು ಇತರ ಬರಹಗಾರರಿಗೆ ಸ್ಫೂರ್ತಿ ತಂದಿದೆ. ಒಟ್ಟಿನಲ್ಲಿ ಹೇಳುವುದಾದರೆ ಯೋಗೇಶ್ ಅವರೇ, ಯಾವುದೇ ಕಾರಣಕ್ಕೂ ನೀವು ಹೆದ ನಿಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ನಾವು ನಿಲ್ಲು

- ಸಂತೋಷಕುಮಾರ.ಡಿ.ವಾಲಿ, ರಾಮ

'ಢುಂಢಿ' ಕಾದಂಬರಿಯ ಲೇಖಕ ಯೋ ಮಾಸ್ಟರ್ ಅವರ ಬೆನ್ನೆಲುಬಾಗಿ ನಿಂತು ಅವರನ್ನು ಲಂಕೇಶ್ ಬಳಗಕ್ಕೆ ಮತ್ತು ಕರ್ನಾಟಕದ ಪ್ರಜ್ಞಾ ಧನ್ಯವಾದಗಳು. ಪ್ರಶ್ನಿಸುವುದೇ ತಪ್ಪು ಎಂದು ತಿ ಪಟ್ಟಭದ್ರರಿಗೆ ನನ್ನ ಧಿಕ್ಕಾರಗಳು.

- ವಿ.ಆರ್. ಮೌರ್ಯ, ಸ

ಜ್ಯೋತಿಷಿಗಳಿಗೆ ಪಂಥಾಹ್ವಾನ ವೈಚಾರಿಕ ಪ್ರಜ್ಞೆಯನ್ನು ಬೆಳೆಸಬ


ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಶೋಷಿಸುತ್ತಾ ಬಂದಿರುವ ಒಂದು ಜಾಡ್ಯ ಜ ಸಮಸ್ಯೆಗಳಿಗೆ ಹೆದರುವುದು ಮನುಷ್ಯನ ಸಹಜ ಹಾಗೆಯೇ ಅದನ್ನು ಎದುರಿಸದೇ ಹಿಂಜರಿಯ ಅವನಿಗೆ ಆತ್ಮವಿಶ್ವಾಸವಿಲ್ಲದಿರುವ ಲಕ್ಷಣ. ಸಮ ಎದುರಿಸಿ ಗೆಲ್ಲುವ ಕೆಚ್ಚು ವ್ಯಕ್ತಿಯ ಜೀವನ ಧರ್ಮ ಹೋದರೆ ಆತನ ಬದುಕು ದುರಂತಮಯವಾಗಿ ಇತ್ತೀಚೆಗೆ ಹಬ್ಬುತ್ತಿರುವ ಜ್ಯೋತಿಷ್ಯದ ಪಿಡುಗು ಮೂಲಗುಣಗಳಲ್ಲಿ ಒಂದಾದ ಕೆಚ್ಚು, ಧೈರ್ ಕುಗ್ಗಿಸುತ್ತಿದೆಯೇನೋ ಎಂಬ ಸಂಶಯ ಪ್ರಜ್ಞಾ ಕಾಡುತ್ತಿದೆ. ಈಗ ಜ್ಯೋತಿಷಿಗಳ ಹಾವಳಿ ಫುಟ್ ಬಿಟ್ಟು ಎಸಿ ರೂಮುಗಳಿಗೆ ಪ್ರವೇಶಿಸಿದೆ. ತಮ ದೈವಜ್ಞ, ಗುರೂಜಿ ಎಂಬ ಬಿರುದು ಬಾ ಕೊಟ್ಟುಕೊಂಡು ಮುಗ್ಧ ಜನರನ್ನು ವಂಚಿಸಲು ಇಳಿದುಬಿಟ್ಟಿದ್ದಾರೆ ಜ್ಯೋತಿಷಿಗಳು. ಹಿಂದೆ ರಾಜ ಬಲಿತಿದ್ದ ಜ್ಯೋತಿಷಿಗಳು ಈಗ ಮಾಧ್ಯಮಗಳ ಬಲಿಯುತ್ತಿದ್ದಾರೆ.

ಇತ್ತೀಚೆಗೆ ಚಾನೆಲ್ ಸಂದರ್ಶನವೊಂದರಲ್ಲಿ ಮೌಲ್ಯ ಕುಸಿತದ ಬಗ್ಗೆ ಚರ್ಚೆ ನಡೆಯುತ್ತಿತ್ತು.

ಮೂರು 'ಕನ್ನಡ' ಸರಳ ಚಿತ್ರಗಳು

ಮೊನ್ನೆ ಗಣೇಶ ಹಬ್ಬದ ದಿನದಂದು ಯಾವುದೇ ...ವಿಲ್ಲದೆ ಕನ್ನಡ ಚಿತ್ರರಂಗದಲ್ಲಿ ಮೂರು ಚಿತ್ರಗಳು ...ವಾದವು.

...ನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸಲಿರುವ ... ಸೂಪರ್ ಹಿಟ್ 'ದೂಕುಡು' ಚಿತ್ರದ ಕನ್ನಡ ...ಕೆಯ ಹಾಡುಗಳ ಧ್ವನಿಮುದ್ರಿಕೆ ಮೊನ್ನೆ ನಡೆಯಿತು. ... ಸಹೋದರರಾದ ಶಿವರಾಜ್‌ಕುಮಾರ್ ಮತ್ತು ...ಂದ್ರ ರಾಜ್‌ಕುಮಾರ್ ಬಂದು ಶುಭ ಹಾರೈಸಿದ್ದು ...ಚಿತ್ರರಂಗದ ಬೇರೆ ಯಾರೂ ಈ ಸಮಾರಂಭಕ್ಕೆ ...ಲ್ಲ. ತೆಲುಗಿನಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದ ...ಲ್ ಎಂಟರ್‌ಟೈನ್‌ಮೆಂಟ್' ಎಂಬ ಸಂಸ್ಥೆಯೇ ...ಅವತರಣಿಕೆಯನ್ನು ನಿರ್ಮಿಸುತ್ತಿರುವುದು ಅಚ್ಚರಿಯ ... ಆದರೆ ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು ...ನ್ನಡದಲ್ಲಿ ರೀಮೇಕ್‌ನ್ನು ಅಚ್ಚುಕಟ್ಟಾಗಿ ಮಾಡುವ ...ೇಶ್ ಅವರಿಗೆ ನೀಡಲಾಗಿದೆ.



...ತ್ತು ಗಣೇಶ್ ಮತ್ತು 'ಬುಲ್‌ಬುಲ್' ಖ್ಯಾತಿಯ ...ರಾಮ್ ಜೋಡಿಯಾಗಿ ಕಾಣಿಸಲಿರುವ 'ದಿಲ್ ...' ಚಿತ್ರದ ಮುಹೂರ್ತವೂ ನಡೆಯಿತು. ಈ ... ಪ್ರೀತಂ ಗುಬ್ಬಿ ನಿರ್ದೇಶಿಸುತ್ತಿದ್ದು, ಕೆ.ಮಂಜು ...ುತ್ತಿದ್ದಾರೆ. ಮಂಜು ನಿರ್ಮಾಣದ 'ಶೈಲೂ' ಚಿತ್ರ ...ಆಫೀಸಿನಲ್ಲಿ ಮುಗ್ಗರಿಸಿದ್ದರಿಂದ ಆ ನಷ್ಟವನ್ನು ...ಗಿಸಲು ಮತ್ತು ಮಂಜು ಅವರಿಗೆ ಗಣೇಶ್ ...ಟ್ ಕೊಟ್ಟಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ...ಗಂಡುಗಲಿ ಮಂಜು ಈ ಮಾತನ್ನು ಸರ್ವಥಾ ...ಲ್ಲ.

...ೇ ದಿನ ನಿರ್ದೇಶಕ ರಘುರಾಮ್ 'ಫೇರ್ ಅಂಡ್ ...' ಎಂಬ ಹೊಸ ಚಿತ್ರವನ್ನು ಆರಂಭಿಸಿದರು. ಇವರ ... ನಿರ್ದೇಶನದ 'ಚೆಲುವೆಯೇ ನಿನ್ನ ನೋಡಲು' ಚಿತ್ರದಲ್ಲಿ ಶಿವರಾಜ್‌ಕುಮಾರ್ ನಟಿಸಿದ್ದರಲ್ಲದೆ ಅದರಲ್ಲಿ ಪ್ರಪಂಚದ ಏಳು ಅದ್ಭುತಗಳನ್ನು ತೋರಿಸಲಾಗಿತ್ತು. ಆದರೂ ಬಾಕ್ಸ್ ಆಫೀಸಿನಲ್ಲಿ ಆ ಚಿತ್ರ ನಿರೀಕ್ಷಿಸಿದ್ದಷ್ಟು ಗೆದ್ದಿರಲಿಲ್ಲ. ಅದಾದನಂತರ ಗಣೇಶ್ ಅವರ ಚಿತ್ರವೊಂದನ್ನು ರಘುರಾಮ್ ನಿರ್ದೇಶಿಸುತ್ತಾರೆಂಬ ಸುದ್ದಿ ಕೇಳಿಬಂದಿತ್ತಾದರೂ ಅದು ಕೈಗೂಡಿರಲಿಲ್ಲ. ಆದರೀಗ 'ನೆನಪಿರಲಿ' ಖ್ಯಾತಿಯ ಪ್ರೇಮ್ ಮತ್ತು 'ಸಿಂಪಲ್ಲಾಗಿ ಒಂದು ಲವ್ ಸ್ಟೋರಿ' ಚಿತ್ರದ ನಾಯಕಿ ಶ್ವೇತಾ ಅವರನ್ನು ಹಾಕಿಕೊಂಡು ರಘುರಾಮ್ ಚಿತ್ರ ಮಾಡುತ್ತಿದ್ದಾರೆ.

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಈ ರೀತಿ ಸದ್ದುಗದ್ದಲ ಅಥವಾ ಆಡಂಬರವಿಲ್ಲದೇ ತುಂಬಾ ಸರಳವಾಗಿ ಚಿತ್ರವನ್ನು ಆರಂಭಿಸುವ ಒಂದು ಹೊಸ ಸಂಪ್ರದಾಯ ಆರಂಭವಾಗಿದೆ. ಮೊನ್ನೆ ಮೊನ್ನೆ ಸುದೀಪ್ ಕೂಡ ಇದೇ ರೀತಿ ಯಾರಿಗೂ ಆಹ್ವಾನ ನೀಡದೇ ತನ್ನ ನಿರ್ದೇಶನದ ಹೊಸ ಚಿತ್ರವನ್ನು ಆರಂಭಿಸಿದರು. ಇದಕ್ಕಿಂತ ಮೊದಲು ರವಿಚಂದ್ರನ್ ತನ್ನ ಮಗ ಮನೋರಂಜನ್‌ಗಾಗಿ ಆರಂಭಿಸಿದ ಚಿತ್ರವನ್ನೂ ಬೆರಳೆಣಿಕೆಯ ಆಹ್ವಾನಿತರ ನಡುವೆ ಮಾಡಿಮುಗಿಸಿದ್ದರು. ಇಂತಹ ಸರಳ ಸಮಾರಂಭಗಳು ದಿನದಿಂದ ದಿನಕ್ಕೆ ಗಾಂಧಿನಗರದಲ್ಲಿ ಜನಪ್ರಿಯವಾಗುತ್ತಿರುವುದೂ ಕೂಡ ಒಂದು ವಿಶೇಷ.



ಕ್ರಿಯಾಶೀಲ ಕಲಾವಿದನ 'ಒಗ್ಗರಣೆ'-'ಚಿತ್ರಾ'ನ್ನ!

ಪ್ರಕಾಶ್ ರೈ ಮತ್ತೆ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಅವರ ನಿರ್ದೇಶನದ ಎರಡನೆಯ ಚಿತ್ರ 'ಒಗ್ಗರಣೆ' ಸೆಪ್ಟೆಂಬರ್ 26 ರಂದು ಸೆಟ್ಟೇರಲಿದೆ. ಎರಡು ವರ್ಷಗಳ ಹಿಂದೆ 'ನಾನು ಮತ್ತು ನನ್ನ ಕನಸು' ಎಂಬ ಚಿತ್ರದ ಮುಖಾಂತರ ರೈ ಕನ್ನಡದ ಪ್ರೇಕ್ಷಕರಿಗೆ ನಿರ್ದೇಶಕರಾಗಿ ಪರಿಚಿತರಾಗಿದ್ದರು.

ಈಗ 'ಒಗ್ಗರಣೆ' ಚಿತ್ರವನ್ನು ಕನ್ನಡ, ತಮಿಳು ಮತ್ತು ತೆಲುಗು ಹೀಗೆ ಮೂರು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಿಸಿ, ನಿರ್ದೇಶಿಸುವ ಜವಾಬ್ದಾರಿಯನ್ನು ರೈ ತನ್ನ ಮೇಲೆ ಹೊರಿಸಿಕೊಂಡಿದ್ದಾರೆ. ಈ ಚಿತ್ರದಲ್ಲಿ ನಾಯಕ ನಟನ ಪಾತ್ರವನ್ನೂ ಸ್ವತಃ ರೈ ಅವರೇ ನಿರ್ವಹಿಸುತ್ತಿದ್ದಾರೆ.

ತಮಿಳಿನ ಸ್ನೇಹ ನಾಯಕಿಯ ಪಾತ್ರದಲ್ಲಿ ನಟಿಸಲಿದ್ದಾರೆ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಒಂದು ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಂಗೀತ ನಿರ್ದೇಶಕರಾಗಿ ಇಳಯರಾಜ ಅವರನ್ನು ರೈ ಆಯ್ಕೆ ಮಾಡಿದ್ದಾರೆ.

ಆದರೆ 'ನಾನು ಮತ್ತು ನನ್ನ ಕನಸು' ಚಿತ್ರದಂತೆ 'ಒಗ್ಗರಣೆ' ಚಿತ್ರವೂ ರೀಮೇಕ್ ಆಗಿರುವುದು ಹಲವರಲ್ಲಿ ರೈ ಬಗ್ಗೆ ಬೇಸರ ಮೂಡಿಸಿದೆ. ರೈ ಅದ್ಭುತ ನಟ ಮತ್ತು ಕ್ರಿಯಾಶೀಲ ವ್ಯಕ್ತಿ ಎಂಬುದು ಈಗಾಗಲೇ ಸಾಬೀತಾಗಿದೆ. ಒಂದು ಸ್ವಮೇಕ್ ಚಿತ್ರವನ್ನು ರಚಿಸಲು ಬೇಕಾದ ಎಲ್ಲಾ ಪ್ರತಿಭೆಯನ್ನು ರೈ ಹೊಂದಿದ್ದರೂ ಅವರು ಯಾಕೆ ಅದನ್ನು ಸದುಪಯೋಗಪಡಿಸುತ್ತಿಲ್ಲ ಎಂಬುದೇ ಜನರ ಪ್ರಶ್ನೆಯಾಗಿದೆ.


ಅದೇನೇ ಇರಲಿ, ಪ್ರಕಾಶ್ ರೈರಂತಹ ಅತ್ಯಂತ ಬೇಡಿಕೆಯ ಮತ್ತು ಕ್ರಿಯಾಶೀಲ ಕಲಾವಿದನೊಬ್ಬ ವರ್ಷಕ್ಕೊಂದು ಕನ್ನಡ ಚಿತ್ರ ನಿರ್ಮಿಸಿ-ನಿರ್ದೇಶಿಸಿ-ನಟಿಸಲು ಮುಂದಾಗುತ್ತಿರುವುದು ನಿಜಕ್ಕೂ ಸಂತೋಷದ ವಿಷಯ. ■

ದೇಸಾಯಿ ಮತ್ತೆ ಭೂಗತ!

ಹೊಸ ನಿರ್ದೇಶಕರ ಪ್ರವಾಹ ಮತ್ತು ಕ್ರಿಯಾಶೀಲತೆಯ ಎದುರು ಹಳೆ ನಿರ್ದೇಶಕ ಸುನೀಲ್‌ಕುಮಾರ್ ದೇಸಾಯಿ ಕೊಚ್ಚಿಹೋಗಿದ್ದರಿಂದ ಕಳೆದ ಐದಾರು ವರ್ಷಗಳಲ್ಲಿ ಅವರ ಒಂದೇ ಒಂದು ಚಿತ್ರವೂ ಸೆಟ್ಟೇರಿರಲಿಲ್ಲ. ಆದರೂ ಮೂರು ವಾರಗಳ ಹಿಂದೆ ಅವರು ಕಷ್ಟಪಟ್ಟು 'ತಂದಾನ ತಂದನಾನ' ಎಂಬ ಹಾಸ್ಯಮಯ ಚಿತ್ರವನ್ನು ಪ್ರಾರಂಭಿಸಿದ್ದರು. ಕನ್ನಡ ಚಿತ್ರರಂಗ ಕಂಡ ಶ್ರೇಷ್ಠ ತಂತ್ರಜ್ಞರಲ್ಲಿ ಒಬ್ಬರಾದ ದೇಸಾಯಿ ಅವರ ಮರುಆಗಮನವನ್ನು ಪ್ರೋತ್ಸಾಹಿಸಲು ಅನಂತ್ ನಾಗ್, ರಮೇಶ್ ಅರವಿಂದ್, ಶ್ರೀನಿವಾಸಮೂರ್ತಿ, ರಮೇಶ್ ಭಟ್ ತರಹದ ಅನೇಕ ಹಿರಿಯ ನಟರು ಚಿತ್ರದ ಕತೆಯನ್ನೂ ಕೇಳದೆ ಕಡಿಮೆ ಸಂಭಾವನೆಗೆ ನಟಿಸಲು ಒಪ್ಪಿಕೊಂಡಿದ್ದರು.

ಆದರೆ ಈಗ ಬಂದಿರುವ ಸುದ್ದಿಯ ಪ್ರಕಾರ ದೇಸಾಯಿ ಈಗ ಮತ್ತೆ ಗಾಂಧಿನಗರದಿಂದ ಭೂಗತರಾಗಿದ್ದಾರೆ. ಹೀಗಾಗಿ ಚಿತ್ರೀಕರಣ ಆರಂಭವಾದ ಐದೇ ದಿನಕ್ಕೆ ನಿಂತುಹೋಗಿದೆ. ಇದಕ್ಕೆ ಮುಖ್ಯ ಕಾರಣ ದೇಸಾಯಿಯವರ ಅಶಿಸ್ತು. ಏಕೆಂದರೆ ಈ ಸಿನಿಮಾದ ನಿರ್ಮಾಪಕರಿಂದ ಪಡೆದ ಹಣವನ್ನು ದೇಸಾಯಿ ಈ ಚಿತ್ರದ ತಂತ್ರಜ್ಞ ಮತ್ತು ಕಲಾವಿದರಿಗೆ ಹಣ ಕೊಡುವ ಬದಲು ತನ್ನ ಹಳೆಯ ಸಾಲಗಾರರ ಬಾಕಿಯನ್ನು ಚುಕ್ತಾ ಮಾಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಹೀಗಾಗಿ ಸಿನಿಮಾ ಮಾಡಲು ದೇಸಾಯಿಯವರ ಬಳಿ ಈಗ ಚಿಕ್ಕಾಸೂ ಇಲ್ಲ.

ಬಹುಶಃ ಈ ಸಿನಿಮಾವನ್ನು ದೇಸಾಯಿ ಸಂಪೂರ್ಣಗೊಳಿಸದಿದ್ದರೆ ಇನ್ನು ಮುಂದೆ ಅವರಿಗೆ ಮತ್ತೊಂದು ಅವಕಾಶ ಸಿಗುವುದು ಸಾಧ್ಯವೇ ಇಲ್ಲ ಎಂದು ಆ ಚಿತ್ರದ ಪಾತ್ರಧಾರಿಗಳು ಹೇಳುತ್ತಿದ್ದಾರೆ. ಒಬ್ಬ ಜನಪ್ರಿಯ ಮತ್ತು ಕ್ರಿಯಾಶೀಲ ನಿರ್ದೇಶಕ ಹೇಗೆ ತನ್ನ ಭವಿಷ್ಯವನ್ನು ತಾನೇ ಹಾಳು ಮಾಡಿಕೊಂಡಿದ್ದಾರೆ ಎಂಬುದಕ್ಕೆ ದೇಸಾಯಿ ಅತ್ಯುತ್ತಮ ಉದಾಹರಣೆ. ■






...ಸಿದ್ದವರಲ್ಲಿ ಒಬ್ಬರು ಆರ್ಥಿಕತಜ್ಞರಾದರೆ, ... ಜ್ಯೋತಿಷಿ! ಆರ್ಥಿಕತಜ್ಞರು ರೂಪಾಯಿ ... ಕುಸಿತದ ಬಗ್ಗೆ, ಕಾರಣ ಹಾಗೂ ...ೋಪಾಯಗಳನ್ನು ಷೇರುಪೇಟೆಯ ಏರಿಳಿತಗಳು, ... ಕೊರತೆ ಹಾಗೂ ರಫ್ತು-ಆಮದುಗಳ ...ಲ್ಲಿ ವಿಶ್ಲೇಷಿಸುತ್ತಿದ್ದರೆ, ಜ್ಯೋತಿಷಿ ... ರಿಸರ್ವ್ ಬ್ಯಾಂಕ್ ಇತ್ತೀಚೆಗೆ ...ದ್ದ ದೇವಾನಾಗರಿ ಲಿಪಿಯಲ್ಲಿರುವ ... ಚಿಹ್ನೆಯ ಬಗ್ಗೆ ತಕರಾರು ಎತ್ತಿ ... ಮೌಲ್ಯ ಕುಸಿತಕ್ಕೆ ಇದೇ ಕಾರಣ ... ಒಪ್ಪಿಸುತ್ತಿದ್ದ ಮತ್ತು ರೂಪಾಯಿ ... ವಿವಿಧ ಕೋನಗಳು, ಗೆರೆಗಳ ಬಗ್ಗೆ ... ಎತ್ತಿ ತನ್ನ ಅಜ್ಞಾನ ಹಾಗೂ ...ವನ್ನು ಪ್ರದರ್ಶಿಸುತ್ತಿದ್ದ, ... ಮೌಲ್ಯ ಕುಸಿತದ ಬಗ್ಗೆ ತಿಳಿಸ್ಕೊಳ್ಳಲು ... ಸಂದರ್ಶಕನ ಪ್ರಶ್ನೆಗೂ ಅದರ ಸುತ್ತಲೇ ಗಿರಕಿ ಹೊಡೆಯುತ್ತಾ, ಷೇರುಪೇಟೆಯ ವಿದ್ಯಮಾನಕ್ಕೂ, ಜ್ಯೋತಿಷ್ಯಕ್ಕೂ ಅನುಸಂಧಾನದ ಸೇತುವೆಯನ್ನು ನಿರ್ಮಿಸಲು ಹಾತೊರೆಯುತ್ತಿದ್ದವು.

ಇವರು ತಮ್ಮ ಜ್ಯೋತಿಷ್ಯಕ್ಕೂ ವೈಜ್ಞಾನಿಕ ನೆಲೆಗಟ್ಟಿದೆ; ನಾವೂ ಕೂಡಾ ಪ್ರಯೋಗ ಮಾಡಿ ಯಶಸ್ಸು ಗಳಿಸಿದ್ದೇವೆ; ಅದರ ದಾಖಲಾತಿಗಳು ನಮ್ಮ ಬಳಿ ಇವೆ ಎಂಬ ಸಮರ್ಥನೆಗೂ ಇಳಿಯುತ್ತಾರೆ. ಆದರೆ, ದಾಖಲಾತಿ ತೋರಿಸುವುದಿಲ್ಲ! ಮನುಷ್ಯನ ಬದುಕನ್ನು ನಿರ್ದೇಶಿಸುವ ಜ್ಯೋತಿಷ್ಯದ ಬಗ್ಗೆ ಇಲ್ಲಿಯತನಕ ಯಾವ ವೈಜ್ಞಾನಿಕ ಪರೀಕ್ಷೆಯೂ ನಡೆದಿಲ್ಲ. ವಿಜ್ಞಾನದ ಮೂಲ ತತ್ವದ ಪರಿಭಾಷೆಗಳನ್ನು ಜ್ಯೋತಿಷ್ಯದಂತಹ ಸುಳ್ಳುಗಳಿಗೆ ತೊಡಿಸಿ ಚಲಾವಣೆಯಲ್ಲಿರುವಂತೆ ಯತ್ನಿಸುವ ಇವರ ಜೀವವಿರೋಧಿ ನಡವಳಿಕೆಗಳು ಸಮಾಜಕ್ಕೆ ನಿಜಕ್ಕೂ ಅಪಾಯಕಾರಿ.


ಜ್ಯೋತಿಷಿಗಳಿಗೆ ಪಂಥಾಹ್ವಾನ ನೀಡುವ ಮೂಲಕ ಸಮಾಜದಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಬೇಕಿದೆ. ಅವರ ವಿಚಾರಗಳನ್ನು ನಿರಂತರವಾಗಿ ಒರೆಗೆ ಹಚ್ಚುವ ಕೆಲಸ ಇಂದಿನ ತುರ್ತಾಗಬೇಕಿದೆ. ಜನತೆಯ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಏಕೈಕ ಚಿಕಿತ್ಸಾ ಮಾರ್ಗ ಜ್ಯೋತಿಷ್ಯ ಎನ್ನುವ ಇವರ ಸುಳ್ಳುಗಳಿಗೆ ಕಡಿವಾಣ ಹಾಕಬೇಕಿದೆ. ವಸ್ತುನಿಷ್ಠವಾದ ವಿಶ್ಲೇಷಣೆ ಮಾತ್ರವೇ ವ್ಯಕ್ತಿಯನ್ನು ಕಾಡುವ ಸಮಸ್ಯೆಗೆ ಪರಿಹಾರ ಸೂಚಿಸಬಲ್ಲದು ಎಂಬ ಸತ್ಯವನ್ನು ಸಮಾಜಕ್ಕೆ ತಿಳಿಸಬೇಕಿದೆ.

-ಸಿ.ಹರೀಶ್‌ಕುಮಾರ್, ಬೆಂಗಳೂರು



'ಬುಲ್‌ಬುಲ್' ನಿರ್ದೇಶಕರನ್ನು ಮಾತಾಡ್ಸೋರೇ ಇಲ್ಲ!

'ಫ್ರೆಂಡ್ಸ್', 'ಚೆಲ್ಲಾಟ', 'ಜಾಲಿ ಡೇಸ್', 'ಪೊರ್ಕಿ', 'ಬುಲ್‌ಬುಲ್' ಚಿತ್ರಗಳು ಸೇರಿದಂತೆ ಕನ್ನಡಕ್ಕೆ ಹಲವಾರು ಹಿಟ್ ಚಿತ್ರಗಳನ್ನು ಕೊಟ್ಟ ಯಶಸ್ವೀ ನಿರ್ದೇಶಕ ಎಂ.ಡಿ.ಶ್ರೀಧರ್ ಇವತ್ತು ಖಾಲಿ ಕೂತಿದ್ದಾರೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಹಾಗಂತ ಇವರ ಕೈಲಿ ನಿರ್ಮಾಪಕರು ಇಲ್ಲ ಅಂತಲ್ಲ, ಕೋಟಿ ಕೋಟಿ ಹಣ ಹೂಡಲು ತುದಿಗಾಲಲ್ಲಿ ನಿಂತಿರುವ ದಂಡೇ ಇದೆ. ಸಮಸ್ಯೆ ಇರೋದು ಹೀರೋಗಳದ್ದು!



'ಬುಲ್‌ಬುಲ್' ಬಾಕ್ಸಾಫೀಸಿನಲ್ಲಿ ಸಿಕ್ಕಾಪಟ್ಟೆ ಗೆದ್ದ ನಂತರ ಶ್ರೀಧರ್ ತುಂಬಾ ಉತ್ಸಾಹದಿಂದ ಕೆಲವು ಕಥೆಗಳನ್ನು ಮಾಡಿಕೊಂಡು ಹೀರೋಗಳಿಗೆ ಹೇಳಿದ್ದಾರೆ. ಕಥೆ ಕೇಳಿದ ಮೇಲೆ ಎಲ್ಲಾ ಹೀರೋಗಳು ಹೇಳೋ ಒಂದೇ ಮಾತು 'ಡೇಟ್ಸ್ ಇಲ್ಲ!' ಒಂದು ಮೂಲದ ಪ್ರಕಾರ ಸುದೀಪ್ "ಒಂದು ವರ್ಷದ ನಂತರ ಒಟ್ಟಿಗೆ ಕೆಲಸ ಮಾಡೋಣ ಶ್ರೀಧರ್" ಅಂದಿದ್ದರೆ, "ಕಥೆ ಸೂಪರಾಗಿದೆ, ಆದರೆ ಮೂರು ವರ್ಷ ವೇಯ್ಟ್ ಮಾಡಿ ಬಾಸ್" ಅನ್ನೋದು ದರ್ಶನ್ ಮಾತು. ಮೂರು ವರ್ಷ ಏನು ಮಾಡಬೇಕು ಅನ್ನೋದು ಶ್ರೀಧರ್ ಮುಂದಿರುವ ಬಹುದೊಡ್ಡ ಸವಾಲು.

ತಮ್ಮ ಆಪ್ತವಲಯದಲ್ಲಿ ಶ್ರೀಧರ್ ಹೇಳಿಕೊಂಡಿರುವ ಪ್ರಕಾರ "ಕಾದು ಕೂತರೆ ಆಗುತ್ತಾ ಸಾರ್... ಏನಾದರು ಮಾಡಲೇಬೇಕು. ಅದಕ್ಕೆ ನಾನೀಗ ಬ್ಯಾಕ್ ಟು ಪೆವಿಲಿಯನ್ ಅನ್ನೋ ಥರ ಹೊಸ ಹುಡುಗರನ್ನ ಹಾಕಿಕೊಂಡೇ ಸಿನಿಮಾ ಮಾಡ್ತೀನಿ" ಅಂತ ತಮ್ಮ ನೋವನ್ನು ಹೇಳಿಕೊಂಡಿದ್ದಾರೆ. ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿ. ಈ ಮೂಲಕ ಒಂದಿಷ್ಟು ಹೊಸಮುಖಗಳು ಇಂಡಸ್ಟ್ರಿಗೆ ಬರಲಿ. ■

'ಕಬಡ್ಡಿ'ಯಿಂದ 'ಕಬೀರ್'ವರೆಗೆ

'ಕಬಡ್ಡಿ'ಯಂಥ ಸದಭಿರುಚಿ ಚಿತ್ರ ಕೊಟ್ಟ ನಿರ್ದೇಶಕ ನರೇಂದ್ರ ಬಾಬು ಎಲ್ಲಿ ಹೋದರು ಅನ್ನೋದು ಕೆಲವರ ಪ್ರಶ್ನೆ. ಕ್ರೀಡಾ ವಸ್ತುವನ್ನಾಧರಿಸಿದ್ದ 'ಕಬಡ್ಡಿ' ಚಿತ್ರ ಥೇಟರಿನಲ್ಲಿ ನಾಲ್ಕೈದು ವಾರ ಓಡುವುದರ ಜೊತೆಗೆ ಚಿತ್ರವಿಮರ್ಶಕರ ಮೆಚ್ಚಿಗೆಯನ್ನೂ ಗಳಿಸಿತ್ತು. ಅಲ್ಲದೆ ರಾಜ್ಯ ಪ್ರಶಸ್ತಿಯನ್ನೂ ಪಡೆದಿತ್ತು. 'ಕಬಡ್ಡಿ' ಪ್ರಯೋಗಾತ್ಮಕ ಚಿತ್ರವಾದ್ದರಿಂದ ಗಾಂಧಿನಗರದ ಸಿದ್ಧ ಸೂತ್ರಗಳನ್ನು ನಂಬಿಕೊಂಡಿದ್ದ ಕೆಲವು ನಿರ್ಮಾಪಕರಿಗೆ ಚಿತ್ರದ ಆಶಯ ನಿರೀಕ್ಷಿತ ಮಟ್ಟದಲ್ಲಿ ಅರ್ಥವಾಗಿರಲಿಲ್ಲ. ಅದರ ಪರಿಣಾಮ ಬಾಬುಗೆ ದೀರ್ಘಾವಧಿಯ ರಜೆ ಸಿಕ್ಕಿತು.

ಆ ಗ್ಯಾಪಿನಲ್ಲಿ ನಡೆದ ಒಂದು ಪವಾಡವೆಂದರೆ, 'ಕಬಡ್ಡಿ' ಚಿತ್ರದ ಸಂಭಾಷಣೆಯ ಸೊಗಡನ್ನು ಗುರುತಿಸಿದ ನಿರ್ದೇಶಕ ಪ್ರೇಮ್ ಅವರು ನರೇಂದ್ರ ಬಾಬು ಅವರನ್ನು ಕರೆದು 'ಜೋಗಯ್ಯ' ಸಿನಿಮಾಗೆ ಡೈಲಾಗ್ ಬರೆಯಿರಿ ಅಂದಿದ್ದರು. ಚನ್ನಪಟ್ಟಣದ ಬಾಬು 'ಕಬಡ್ಡಿ' ಚಿತ್ರದಲ್ಲಿ ಬಳಸಿದ ಗ್ರಾಮ್ಯ ಭಾಷೆಗೆ ಚಿಕ್ಕಗರಹಳ್ಳಿಯ ಪ್ರೇಮ್ ಮಾರುಹೋಗಿದ್ದರಲ್ಲಿ ಅರ್ಥವಿತ್ತು; 'ಜೋಗಯ್ಯ'ನಿಗಾಗಿ ಬಾಬು ಬರೆದ ಮಾತುಗಳು ಅದೇಕೋ ಥೇಟರುಗಳಲ್ಲಿ ಅಷ್ಟಾಗಿ ಶಿಳ್ಳೆ ಗಿಟ್ಟಿಸಲಿಲ್ಲ!

ಇಂಥ ಬಾಬು ಈಗೊಂದು ಸಿನಿಮಾ ನಿರ್ದೇಶಿಸಲು ಮುಂದಾಗಿದ್ದಾರೆ. ಶಿವರಾಜ್‌ಕುಮಾರ್ ಹೀರೋ. ಒಂದು ಮೂಲದ ಪ್ರಕಾರ ಚಿತ್ರದ ಶೀರ್ಷಿಕೆ 'ಕಬೀರ್'. ಇಷ್ಟಕ್ಕೂ ಶಿವಣ್ಣನ ಕಾಲ್‌ಶೀಟ್ ಪಡೆಯಲು ಬಾಬು ... ಆರೇಳು ವರ್ಷಗಳನ್ನು ಮುಡುಪಿಟ್ಟಿದ್ದಾರೆ! ಹಾಗೆ ನೋಡಿದರೆ 'ಕಬಡ್ಡಿ'ಗಿಂತಲೂ ಮೊದಲೇ ಬಾಬು, ಶಿವಣ್ಣನ ಜೊತೆ ಒಂದು ಸಿನಿಮಾ ಮಾಡಬೇಕಿತ್ತು, ಆ ಕನಸು ಈಗ ನೆರವೇರುತ್ತಿದೆ. ಸಾಕಷ್ಟು ... ನಿರಂತರ ನಂಟುಳ್ಳ ಬಾಬುಗೆ ಒಂದು ಗುಡ್‌ಲಕ್ ಹೇಳಿಬಿಡೋಣ.

–ಹೃದಯಶಿವ

Registered No.KA/RNP/BGS/2030/2014-16 Posted at : GPO, Bangalore-01 Friday ... P LANKESH, Kannada Weekly Price Rs. 14/- 25-09-2013 RNI No. KARKAN20

ಲೂಸಿಯಾ: ಒಂದು ಚಿಟ್ಟೆಯ ಕನಸ



ಸಿನಿಮಾ ಮಾಧ್ಯಮವನ್ನು ಗಂಭೀರವಾಗಿ ಸ್ವೀಕರಿಸಿ, ಚಿತ್ರ ಮಾಡಿದ ಹಲವು ನಿರ್ದೇಶಕರು, ನಿರ್ಮಾಪಕರು ಕನ್ನಡದಲ್ಲಿ ಆಗಿ ಹೋಗಿದ್ದಾರೆ. ಈಗಲೂ ಗಿರೀಶ್ ಕಾಸರವಳ್ಳಿ, ನಾಗಾಭರಣ ಮೊದಲಾದ ನಿರ್ದೇಶಕರು ಅಂದಿನ ಕಲಾತ್ಮಕ ಪರಂಪರೆಯ ಕೊನೆಯ ಕೊಂಡಿಗಳಂತೆ ನಮ್ಮ ನಡುವೆ ಚಿತ್ರ ಮಾಡುತ್ತಲೇ ಇದ್ದಾರೆ. ಪುಟ್ಟಣ್ಣ ಕಣಗಾಲ್‌ರಂತಹ ನಿರ್ದೇಶಕರು ಜನರನ್ನು ದೃಷ್ಟಿಯಲ್ಲಿಟ್ಟು ಕೊಂಡು ಸದಭಿರುಚಿಯ ಪ್ರಯೋಗಗಳನ್ನು ಮಾಡಿ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡರು. ಮನಸ್ಸನ್ನು ವಸ್ತುವಾಗಿಟ್ಟುಕೊಂಡು ಕಣಗಾಲ್ ಮಾಡಿದ 'ರಂಗನಾಯಕಿ', 'ಮಾನಸ ಸರೋವರ',. 'ಶರಪಂಜರ' ದಂತಹ ಚಿತ್ರಗಳು ಕಮರ್ಶಿಯಲ್ ಸಂತೆಯಲ್ಲಿ ಹೊಸ ಮಾರ್ಗವೇ ಆಗಿತ್ತು. ೭೦ರ ದಶಕದಲ್ಲಿ ಕಾರ್ನಾಡ್, ಲಂಕೇಶ್, ಕಾರಂತ ಮೊದಲಾದ ದಿಗ್ಗಜರು ಕಲಾತ್ಮಕ ಪ್ರಯೋಗಗಳನ್ನು ನಡೆಸಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡರು. ಸಿನಿಮಾದ ಗುರಿ ಜನರನ್ನು ಸುಲಭದಲ್ಲಿ ರಂಜಿಸಿ ಹಣ ಮಾಡುವ ದಂಧೆಯಲ್ಲ, ಅದಕ್ಕೆ ಇನ್ನಿತರ ಜವಾಬ್ದಾರಿಗಳು ಇವೆ ಎನ್ನುವುದನ್ನು ಹಲವು ನಿರ್ದೇಶಕರು ತೋರಿಸಿಕೊಟ್ಟರು. ಅವರ ಪಳೆಯುಳಿಕೆಗಳಾಗಿ ಕಾಸರವಳ್ಳಿಯಂತಹ ನಿರ್ದೇಶಕರು ನಮ್ಮ ಮುಂದಿದ್ದಾರೆ.

ಆದರೆ ಇಂದಿಗೂ ಕಲಾತ್ಮಕತೆ ಮತ್ತು ಹೊಸ ಪ್ರಯೋಗಗಳ ಸಂದರ್ಭ ಬಂದಾಗ ೭೦ರ ದಶಕದ ಚಿತ್ರಗಳನ್ನೇ ಮಾದರಿಯಾಗಿಟ್ಟುಕೊಂಡು ನಿರ್ದೇಶಕರು ಮುಂದುವರಿಯುತ್ತಿದ್ದಾರೆ. ಕಾಲ ಬದಲಾಗಿದೆ. ಹೊಸ ತಲೆಮಾರುಗಳು ಹೊಸದಾಗಿ ಯೋಚಿಸತೊಡಗಿದ್ದಾರೆ. ಆಧುನಿಕತೆ ಅವರಲ್ಲಿ ತಲ್ಲಣಗಳನ್ನು ಎಬ್ಬಿಸಿದೆ. ಬದುಕಿನ ವೇಗಕ್ಕೆ ಅವರು ಒಳಗೊಳಗೇ ತತ್ತರಿಸುತ್ತಿದ್ದಾರೆ. ಯುವ ತಲೆಮಾರು ಆಧುನಿಕವಾಗಿ ಯೋಚಿಸತೊಡಗಿವೆ. ೭೦ರ ದಶಕದ ಮನಸ್ಸಿಗೂ, ಈಗಿನ ತಲೆಮಾರಿನ ಮನಸ್ಸಿಗೂ ಬಹಳಷ್ಟು ಅಂತರವಿದೆ. ಆಧುನಿಕ ದಿನಗಳ ತಲ್ಲಣಗಳನ್ನು ಕಟ್ಟಿಕೊಡಲು ಹೊಸ ರೂಪಕಗಳು ಬೇಕಾಗಿವೆ. ಈ ತಲೆಮಾರುಗಳ ನಡುವಿನ ಅಂತರ ತುಂಬುವ ಕೆಲಸ ಕನ್ನಡ ಚಿತ್ರೋದ್ಯಮದಲ್ಲಿ ನಡೆದೇ ಇಲ್ಲ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ವಿಪರ್ಯಾಸವೆಂದರೆ, ಈ ಖಾಲಿ ಜಾಗವನ್ನು ತುಂಬಿದ್ದು ಉಪೇಂದ್ರ ಎಂಬ ಅಭಿರುಚಿಹೀನ ನಿರ್ದೇಶಕ. 'ಎ', 'ಉಪೇಂದ್ರ'ದಂತಹ ಚಿತ್ರಗಳನ್ನು ತೆರೆಯ ಮೇಲೆ ಇಳಿಸುವ ಮೂಲಕ, ತಮಗೇನೋ ಹೊಸತು ಬೇಕು ಎಂದು ಹಂಬಲಿಸುತ್ತಿದ್ದ ತಲೆಮಾರನ್ನು ಉಪೇಂದ್ರ ಅಕ್ಷರಶಃ ಹಾದಿ ತಪ್ಪಿಸಿದರು. ಅಥವಾ ದುರುಪಯೋಗಪಡಿಸಿಕೊಂಡರು. ಸಿನಿಮಾದ ಭಾಷೆಯ ಮೇಲೆ ಅವರು ಮಾಡಿದ ಆಘಾತದಿಂದ ನಮ್ಮ ಯುವಕರು ಇನ್ನೂ ಚೇತರಿಸಿಕೊಂಡಿಲ್ಲ. 'ಕಬಡ್ಡಿ ಕಬಡ್ಡಿ' ಎಂದು ಹೆಣ್ಣನ್ನು ಅತ್ಯಂತ ಕೆಟ್ಟ ಭಾಷೆಯಲ್ಲಿ ಚಿತ್ರಿಸಿ, ಆಕೆಯ ಮೇಲೆ 'ಕುಚು ಕುಚು' ಎನ್ನುತ್ತಾ ಹೊರಳಾಡಿ, ಏನೋ ಮಾಡಲು ಹೋಗಿ, ಇನ್ನೇನೋ ಮಾಡಿ ಒಟ್ಟು ಸಿನಿಮಾದ ಅಭಿರುಚಿಯನ್ನೇ ಕೆಡಿಸಿ ಬಿಟ್ಟರು. ಇದಕ್ಕೆ, ಅವರನ್ನೇ ಸಂಪೂರ್ಣ ಹೊಣೆ ಮಾಡಿ ಪ್ರಯೋಜನವಿಲ್ಲ. ಆ ಸಂದರ್ಭದಲ್ಲಿ ಪ್ರತಿಭಾನ್ವಿತ ಹೊಸ ಯುವಕರು, ಹೊಸ ಮನಸ್ಸುಗಳು ಪ್ರವೇಶಿಸಿದ್ದರೆ, ಉಪೇಂದ್ರ ಹುಟ್ಟುತ್ತಲೇ ಇರಲಿಲ್ಲವೇನೋ?



ಪವನ್ ಕುಮಾರ್ ನಿರ್ದೇಶನದ 'ಲೂಸಿಯಾ' ಚಿತ್ರ ನೋಡಿದ ಮೇಲೆ ಮೇಲಿನದ್ದನ್ನು ಬರೆಯಬೇಕಾಯಿತು. ಪವನ್ ಕುಮಾರ್ ಅವರ ಮೊದಲ ನಿರ್ದೇಶನದ ಚಿತ್ರ 'ಲೈಫ್ ಇಷ್ಟೇನೆ'. ಒಬ್ಬ ಹದಿಹರೆಯದ ಹುಡುಗನ ಗೊಂದಲ, ತಲ್ಲಣಗಳನ್ನು ಭಿನ್ನವಾಗಿ ಈ ಚಿತ್ರದಲ್ಲಿ ಕಟ್ಟಿಕೊಟ್ಟಿದ್ದರು ಪವನ್. ಹಾಗೆ ನೋಡಿದರೆ ಇಲ್ಲಿ ಕತೆಯೇ ಇದ್ದಿರಲಿಲ್ಲ. ಹದಿಹರೆಯಕ್ಕೆ ಕಾಲಿಟ್ಟ ಹುಡುಗನ ಲೈಫ್‌ನ ಎಡರುತೊಡರುಗಳು,. ಅವನ ಗೊಂದಲ, ಹುಡುಗಾಟ, ನಿರೀಕ್ಷೆ, ಹತಾಶೆ ಇಷ್ಟನ್ನೇ ಇಟ್ಟುಕೊಂಡು ಅದನ್ನು ಭಿನ್ನವಾಗಿ ನಿರೂಪಿಸಿದ್ದರು. ಪವನ್ ಕುಮಾರ್‌ಗೆ ಹೊಸತನ್ನು ಕೊಡುವ ಶಕ್ತಿಯಿದೆ ಎನ್ನುವ ಸೂಚನೆ ಆ ಚಿತ್ರದಲ್ಲೇ ದೊರಕಿತ್ತು. 'ಲೂಸಿಯಾ' ಚಿತ್ರದಲ್ಲಿ ಅವರು ಅದನ್ನು ಸಾಬೀತುಮಾಡಿದ್ದಾರೆ.



'ನೀ ಮಾಯೆಯೋ... ನಿನ್ನೊಳಗೆ ಮಾಯೆಯೋ..' ಎಂಬ ಕನಕದಾಸರ ಪದಗಳ ಎಳೆ ಹಿಡಿದು ಮಾಡಿದ ಚಿತ್ರ 'ಲೂಸಿಯಾ'. ಇಲ್ಲೂ ಯುವಕನೊಬ್ಬನ ತಲ್ಲಣ, ನಿರೀಕ್ಷೆ, ಹತಾಶೆಯನ್ನೇ ವಸ್ತುವಾಗಿಟ್ಟುಕೊಂಡಿದ್ದಾರೆ. ಚಿತ್ರದ ಕೇಂದ್ರ ಪಾತ್ರ ನಿಖಿಲ್ ಎಂಬ ಯುವಕ. ಸಿನಿಮಾ ಥಿಯೇಟರ್‌ನಲ್ಲಿ ಟಾರ್ಚ್ ಬಿಡುವ ನಿಖಿಲ್ ಅಥವಾ ಸಿನಿಮಾ ಸ್ಟಾರ್ ನಿಖಿಲ್. ಅಥವಾ ಇವರಿಬ್ಬರದೂ ಮುಖ್ಯ ಪಾತ್ರವೇ ಆಗಿದೆ. ನಿದ್ದೆಯಿಲ್ಲದ ನಿಖಿಲ್ (ನೀನಾಸಂ ಸತೀಶ್) ಒಂದು ಮಧ್ಯರಾತ್ರಿ ಬೀದಿಯಲ್ಲಿ ಸಾಗುತ್ತಿರುವಾಗ ಆತನಿಗೆ ಅಪರಿಚಿತರ ಭೇಟಿಯಾಗುತ್ತದೆ. 'ನಿದ್ದೆ ಮಾತ್ರೆ ಕೊಡ್ತೀವಿ, ಬಾ' ಎಂದು ಕರೆದೊಯ್ಯುತ್ತಾರೆ. ಅಲ್ಲಿ ನಿಖಿಲ್‌ಗೆ ಪರಿಚಯವಾಗುವುದು ಕನಸಿನ ಮಾತ್ರೆ. ಆ ಮಾತ್ರೆ ತೆಗೆದುಕೊಂಡು ನಿದ್ದೆ ಹೋಗುವ ನಿಖಿಲ್, ಕನಸಿನ ಜಗತ್ತಿನಲ್ಲಿ ತಾನು ಬಯಸುವ ಪಾತ್ರವನ್ನು ನಿರ್ವಹಿಸತೊಡಗುತ್ತಾನೆ.

ಯಾವುದು ನಿಜವಾದ ಬದುಕು. ಕನಸೋ ಅಥವಾ ನನಸೋ. ಜನಕರಾಜನಿಗೊಮ್ಮೆ ಕನಸು ಬೀಳುತ್ತದೆಯಂತೆ. ಅದರಲ್ಲಿ ಆತ ಭಿಕ್ಷುಕನಾಗಿ ಹಸಿವಿನಿಂದ ತತ್ತರಿಸುತ್ತಿರುತ್ತಾನೆ. ಎಚ್ಚರವಾದಾಗಲೂ ಅದೇ ಹಸಿವಿನ ತಳಮಳ



ಹೊಟ್ಟೆಯೊಳಗೆ. ಇದನ್ನು ತನ್ನ ಗುರುವಿನೊಂದಿಗೆ ಹಂಚಿಕೊಳ್ಳುತ್ತಾನೆ ರಾಜ. "ಗುರುಗಳೇ, ಒಂದು ವೇಳೆ ನಾನು ನಿಜಕ್ಕೂ ಭಿಕ್ಷುಕನಾಗಿದ್ದು ರಾಜನಾಗಿರುವುದು ಒಂದು ಕನಸಾಗಿರಬಹುದೆ?" ಎಂದು ಆತ ಪ್ರಶ್ನಿಸುತ್ತಾನೆ.

ಒಬ್ಬ ತಾನೇ ಚಿಟ್ಟೆಯಾದಂತೆ ಕನಸು ಕಂಡನಂತೆ. ಎಚ್ಚರವಾದಾಗ ಆತನ ಮುಂದೊಂದು ಪ್ರಶ್ನೆ "ನಾನು ಚಿಟ್ಟೆಯ ಕನಸು ಕಂಡಿದ್ದೋ ಅಥವಾ ಚಿಟ್ಟೆಯಾಗಿರುವ ನಾನು ಮನುಷ್ಯನಾಗಿರುವ ಕನಸು ಕಾಣುತ್ತಿದ್ದೇನೆಯೋ?" ಚಿತ್ರಕತೆಯಲ್ಲಿ ನಿರ್ದೇಶಕರು ಈ ತಂತ್ರವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಚಿತ್ರದ ಆರಂಭದಲ್ಲಿ ಬಡಪಾಯಿ ನಿಖಿಲ್, ಸ್ಟಾರ್ ನಿಖಿಲ್‌ನ ಕನಸು ಕಾಣುತ್ತಿದ್ದಾನೆ ಎಂಬ ನಮ್ಮ ಕಲ್ಪನೆಯೇ ತಿರುವು ಮುರುವಾಗಿ, ಸಿನಿಮಾ ಸ್ಟಾರ್ ನಿಖಿಲ್ ಮುಗ್ಧ ಸಾಮಾನ್ಯ ನಿಖಿಲನ ಕನಸು ಕಾಣುತ್ತಿದ್ದಾನೆಯೋ ಎನ್ನುವ ಪ್ರಶ್ನೆಯೆಡೆಗೆ ತಂದು ನಿಲ್ಲಿಸುತ್ತದೆ. ಒಂದು ರೀತಿಯಲ್ಲಿ ಸಾಮಾನ್ಯನಾದ ನಿಖಿಲ್ ಸೂಪರ್ ಸ್ಟಾರ್‌ನ ಕನಸು ಕಾಣುತ್ತಿದ್ದಾನೆ. ಹಾಗೆಯೇ ಸಿನಿಮಾ ಸ್ಟಾರ್ ನಿಖಿಲ್ ಮುಗ್ಧ ಜನಸಾಮಾನ್ಯ ನಿಖಿಲನಾಗಿ ಬದುಕನ್ನು ಅನುಭವಿಸುವ ಕನಸು ಕಾಣುತ್ತಾನೆ. ಒಟ್ಟಿನಲ್ಲಿ ಪ್ರತಿಯೊಬ್ಬರ ಬದುಕೂ, ಮತ್ತೊಬ್ಬನ ಪಾಲಿನ ದೊಡ್ಡ ಕನಸು ಎನ್ನುವ ಸಂದೇಶವನ್ನು 'ಲೂಸಿಯಾ' ಚಿತ್ರ ನೀಡುತ್ತದೆ.

'ಲೂಸಿಯಾ' ಕತೆಯನ್ನು ಹಲವರು ಹಾಲಿವುಡ್‌ನ 'ಇನ್ಸೆಪ್ಶನ್'ಗೆ ಹೋಲಿಸುವ ತಪ್ಪು ಮಾಡುವುದಿದೆ. 'ಇನ್ಸೆಪ್ಶನ್' ಅತ್ಯದ್ಭುತವಾದ ಅಷ್ಟೇ ಜಟಿಲವಾದ ಕಥಾ ತಂತ್ರವನ್ನು ಹೊಂದಿದೆ. ಮತ್ತು ಇಡೀ ಕತೆಯ ಉದ್ದೇಶಕ್ಕೂ 'ಲೂಸಿಯಾ' ಉದ್ದೇಶ... ರೀತಿಯಲ್ಲೂ ತಾಳೆ ಸಿಗುವುದಿಲ್ಲ. 'ಇನ್ಸೆಪ್ಶನ್'ನಲ್ಲಿ... ಕನಸಿನಲ್ಲಿ ಪ್ರವೇಶಿಸಿ, ಅಲ್ಲಿನ ಆಲೋಚನೆಗಳನ್ನು... ವಸ್ತು 'ಲೂಸಿಯಾ'ಕ್ಕಿಂತ ಭಿನ್ನವಾದುದು. '... ಕತೆ, ಗುರಿ ತೀರಾ ಸರಳವಾಗಿದೆ ಮತ್ತು... ಜೀವಪರವಾಗಿದೆ. ಆಶಾದಾಯಕವಾಗಿದೆ. ಪ್ರತಿ... ಇನ್ನೊಬ್ಬನ ಬದುಕನ್ನು ತನ್ನ ಕನಸಾಗಿಸಿ... ವಿಚಿತ್ರವನ್ನು ಹೇಳುತ್ತಲೇ, ತಮ್ಮ ತಮ್ಮ ಬದುಕ... ಎಂದು ಚಿತ್ರ ತಿಳಿ ಹೇಳುತ್ತದೆ.

ಚಿತ್ರ ಸಾಗುವುದು ಪತ್ತೇದಾರಿ ಶೈಲಿಯ... ಆತ್ಮಹತ್ಯೆ ಯತ್ನದ ಹಿಂದಿನ ರಹಸ್ಯವನ್ನು ಬಿ... ಚಿತ್ರ ಆರಂಭವಾಗುತ್ತದೆ. ಈ ನಿರೂಪಣಾ ತಂ... ಉಸಿರು ಬಿಗಿ ಹಿಡಿದು ನೋಡುವಂತೆ ... ಲೂಸಿಯಾ ಎನ್ನೋದು ಯಾವಳೋ ಹು... ಬಹುದೆಂಬ ನಿರೀಕ್ಷೆಯಲ್ಲಿ ಚಿತ್ರ ನೋಡುತ್ತಿರು... ಹತ್ತು ನಿಮಿಷದಲ್ಲಿ ಅದೊಂದು ಮಾತ್ರೆಯ ಹೆ... ರಹಸ್ಯ ಸ್ಫೋಟವಾಗಿಬಿಡುತ್ತದೆ. ಚಿತ್ರದ ಕುರಿ... ಹೊಸ ನಿರೀಕ್ಷೆಗಳಿಗೆ ಸಿದ್ಧಗೊಳಿಸುತ್ತದೆ.

ಬಿಗಿಯಾದ ಚಿತ್ರಕತೆ ಮತ್ತು ಅದನ್ನು... ಗೊಂದಲಗಳಿಲ್ಲದೆ ಜೋಡಿಸಿದ ಸಂಕಲನಕಾ... ಯಶಸ್ಸಿನ ಮುಖ್ಯ ಸೂತ್ರಧಾರರು. ನಿಖಿ... ವ್ಯಕ್ತಿತ್ವವನ್ನು ಬೇರೆ ಬೇರೆಯಾಗಿ ತೆರೆದಿಡುವ... ಯಾವುದೇ ಗೊಂದಲಗಳಿಗೆ ಸಿಕ್ಕಿಕೊಳ್ಳದೇ ಪ... ತನ್ನ ಕಾರ್ಯದಲ್ಲಿ ಯಶಸ್ವಿಯಾಗುತ್ತಾರೆ. ಕಥ... ನೀನಾಸಂ ಸತೀಶ್ ಮತ್ತು ಅಚ್ಯುತ್ ಕುಮ... ಸಹಜವಾಗಿ, ಲೀಲಾಜಾಲವಾಗಿ ಪಾ... ನಿಭಾಯಿಸುತ್ತಾರೆ. ನಾಯಕಿಯಾಗಿ ಶ್ರುತಿ ಹರಿ... ತುಂಬಾ ಇಷ್ಟವಾಗುತ್ತಾರೆ. ಎರಡು ಭಿನ್ನ... ಅವರು ನಿಭಾಯಿಸಿದ ರೀತಿ ಚಿತ್ರ... ಲವಲವಿಕೆಯನ್ನು ತುಂಬಿಕೊಟ್ಟಿದೆ. ಚಿತ್ರದೊ... ಪೂರಕವಾಗಿದೆ ತೇಜಸ್ವಿ ಸಂಗೀತ. ಹಾಗೆ... ವ್ಯಕ್ತಿತ್ವಕ್ಕೆ ಹೊಂದಿಕೆಯಾಗುವ ಹಾಡು ಚಿತ್ರ...

ಚಿತ್ರ ಪರದೆಯ ಮೇಲೆ ಮುಗಿದರೂ... ಬೆಳೆಯುತ್ತಾ ಹೋಗುತ್ತದೆ. ಇದುವೇ 'ಲೂಸಿ... ನಿಜವಾದ ಯಶಸ್ಸು. ಇದೇ ಸಂದರ್ಭದಲ್ಲಿ ಪ... ತನ್ನ ಚಿತ್ರ ನಿರ್ಮಾಣದಲ್ಲಿ ಪ್ರೇಕ್ಷಕರನ್ನೇ ಬಳಸಿ... ಅವರದೇ ಹಣದಲ್ಲಿ ವಿಶಿಷ್ಟ ಪ್ರಯೋಗವೊಂದ... ಮೂಲಕ, ತನ್ನ ಚಿತ್ರಕ್ಕೆ ವೀಕ್ಷಕ ವರ್ಗ... ಪ್ರಯತ್ನವೂ ಅವರಿಂದಲೇ ನಡೆದಿದೆ. ... ರೀತಿಯಲ್ಲಿ, ಕೆಳಮಟ್ಟದ ವೀಕ್ಷಕರಿಗಾಗಿ ... ಚಿತ್ರಗಳನ್ನು ಮಾಡುವ ಬದಲು, ಅವರನ್ನು ... ಜೊತೆಗೇ ಮೇಲೆತ್ತುವ ಕೆಲಸವಾಗಿದೆ. ಪವ... ಈ ಮೂಲಕ ಒಂದು ಚಳವಳಿಯನ್ನೇ ಹುಟ್ಟಿ... ಅವರ ಸಾಹಸ ಹೀಗೆ ಮುಂದುವರಿಯಲಿ... ಸ್ಫೂರ್ತಿಯಾಗಲಿ. ಕನ್ನಡ ಚಿತ್ರೋದ್ಯಮ ಬೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com